ಜನಪದ ವಿಚಾರ

ಬೆಲೆ : ರೂ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೧೪ ಆಗಸ್ಟ್-೨೦೧೩ ಸಂಚಿಕೆ-೧



ಉತ್ತರಾಖಂಡದ ಜಲಪ್ರಳಯ
ಅಭಿವೃದ್ಧಿಯ ಶಾಪ

ಜನಪದ ವಿಚಾರದಲ್ಲಿ

ಅಗಸ್ಟ್ - ೨೦೧೩

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಆಗಸ್ಟ್ – ೨೦೧೩
ಸಂಪುಟ – ೧೪
ಸಂಚಿಕೆ – ೧

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

✆ 08236 316344
✆ 08236 299854
e-mail : janapada@yahoo.com
web: janapada.net

ದೇವತ್ವ ಸೃಜಿಸಿಬಿಡು

ವರ್ತಮಾನವದು ಕಠಿಣವಾಗಿರೆ
ಭವಿತವ್ಯದ ಕಡೆ ದೃಷ್ಟಿಯಿಡು
ಕಲ್ಪನೆಯೆಂಬ ರೆಕ್ಕೆಯ ಬಿಚ್ಚಿ
ತೆರೆದ ಆಗಸದಿ ನಲಿದಾಡು

ಧರೆಯಲಿ ಯುದ್ಧದ ಕಹಳೆ ಮೊಳಗಿರೆ
ಅಶಾಂತಿಯ ಬೀಡು ತಾನಾಗಿರೆ
ಒಡೆದು ಛಿದ್ರಗೊಂಡ ವೃಂದ
ವನ್ನು ನೀನು ಒಂದು ಮಾಡು

ದ್ವಂದ್ವವೆಲ್ಲೆಡೆ ತಾನು ಹರಡಿರೆ
ಬಂಧು ಬಾಂಧವರು ಗೊಂದಲದಿಂದಿರೆ
ಅಖಂಡ ಸತ್ಯ ತೂಲಿಕೆಯಲಿ
ಏಕತೆಯನು ಸೃಜನಮಾಡು

ರಾಮರಾಜ್ಯ ಸತ್ಯವಹುದು
ಉಳಿದುದೆಲ್ಲ ಮಿಥ್ಯವಹುದು
ಯಥಾರ್ಥದಲ್ಲಿ ಬದಲಿಸುತ್ತ
ಅದೇ ಗುರಿಗೆ ತಲುಪಿಬಿಡು

ವಿಕಾರದೃಷ್ಟಿ ಒಡೆಯುವುದು
ವಿಚಾರದೃಷ್ಟಿ ಜೋಡಿಪುದು
ಈ ಜಗವು ತಾನು ಸ್ವಪ್ನವೆಂಬ
ದುಃಸ್ವಪ್ನವನು ದೂಡಿಬಿಡು

ಪದಾರ್ಥದೆಡೆಗೆ ಮಾಯೆಯದು
ಸ್ವಾರ್ಥದೃಷ್ಟಿ ಹರಡುತಿಹುದು
ಅಧ್ಯಾತ್ಮದೃಷ್ಟಿಕೋನಹೊಂದಿ
ಭೇದದೃಷ್ಟಿಯ ತೊಲಗಿಸಿಬಿಡು

ವಿಶ್ವವೇ ಕುಟುಂಬವು
ಇನ್ನು ಏಕೆ ವಿಲಂಬವು ?
ಪ್ರೀತಿಯಿಂದಲಿ ಹೃದಯ ತುಂಬುತ
ಉನ್ನತಿಯನು ಹೊಂದಿಬಿಡು

ಭಸ್ಮಗೊಳಿಸು ಕ್ಷುದ್ರನೀತಿ
ಊರ್ಧ್ವಗೊಳಿಸು ಅಗ್ನಿಜ್ಯೋತಿ
ಹಲವು ಕಂಟಕಗಳ ಕಳೆದು
ಅನುಪಮ ಚೈತನ್ಯ ಹೂಡು

ಧರೆ ನವೀನವಾಗಿಸುತ
ಹೃತ್ಕಮಲವನ್ನು ಅರಳಿಸಿಡು
ಗೀತ ನೃತ್ಯ ಕಾವ್ಯದೊಂದಿಗೆ
ದೇವತ್ವವ ಸೃಜಿಸಿಬಿಡು

– *ಶ್ರುತಿಪ್ರಿಯ* (ಸಾಭಾರ : ವೇದತರಂಗ)

ವಿಚಾರ ದೀಪ್ತಿ

ಸತ್ಯವನ್ನು ಕೈಬಿಡುಬಲ್ಲವನು ತನ್ನ ದೇಶವನ್ನೂ ಕೈಬಿಡಬಲ್ಲ

ಭಾರತದ ಸ್ವಾತಂತ್ರ್ಯ ಸಾಧನೆಯೇ ನನ್ನ ಜೀವಿತೋದ್ದೇಶ. ಅದಕ್ಕಾಗಿ ನಾನು ಸಾಯಲು ಕೂಡ ಸಿದ್ಧ. ಏಕೆಂದರೆ ಭಾರತದ ಸ್ವಾತಂತ್ರ್ಯ ಸತ್ಯದ ಒಂದು ಅಂಶ. ಭಾರತ ಬಂಧಮುಕ್ತವಾದಾಗಲೇ ಭರತಖಂಡ ಸತ್ಯಸ್ವರೂಪನಾದ ಭಗವಂತನನ್ನು ಪೂಜಿಸಬಲ್ಲದು. ಭಾರತದ ಬಿಡುಗಡೆಗಾಗಿ ನಾನು ದುಡಿಯುತ್ತಿದ್ದೇನೆ; ಏಕೆಂದರೆ ಭಾರತದಲ್ಲಿ ಬದುಕಿ ಅದರ ಸಂಸ್ಕೃತಿಯನ್ನು ಪಡೆದಿರುವದರಿಂದ ಅದರ ಸೇವೆಗೆ ನಾನು ಅತ್ಯಂತ ಅರ್ಹ ಎಂಬುದನ್ನು, ನನ್ನ ಸೇವೆಯ ಮೊದಲ ಹಕ್ಕು ಭಾರತದ್ದು ಎಂಬುದನ್ನು ನನ್ನ ಸ್ವದೇಶಿ ನನಗೆ ಕಲಿಸಿದೆ. ನನ್ನ ದೇಶಭಕ್ತಿ ಭಾರತಕ್ಕೆ ಮಾತ್ರ ಮಿಸಲಾದುದ್ದಲ್ಲ. ಬೇರೆ ಯಾವ ರಾಷ್ಟ್ರದ ಹಿತಕ್ಕೂ ಧಕ್ಕೆಯೊದಗಬಾರದು ಎಂಬುದಷ್ಟೇ ಅಲ್ಲ; ಸಕಲ ರಾಷ್ಟ್ರಗಳಿಗೂ, ಆ ಪದದ ಸಂಪೂರ್ಣಾರ್ಥದಲ್ಲಿ, ಸರ್ವಲಾಭ ಒದಗಬೇಕು ಎಂಬುದೇ ನನ್ನ ಮಾತಿನ ಆಶಯ. ನಾನು ಸಂಕಲ್ಪಿಸಿರುವ ಭಾರತದ ಸ್ವಾತಂತ್ರ್ಯ ಎಂದೆಂದೂ ಲೋಕಹಿತಕಂಟಕವಾಗಲಾರದು.

ಆತ್ಮಶ್ರೀ ವಿದೂರಾದ ರಾಜಕೀಯ ನನ್ನ ಪಾಲಿಗೆ ಸರ್ವಥಾ ತ್ಯಾಜ್ಯವಾದ ಕಳಂಕ. ರಾಜಕೀಯ ರಾಷ್ಟ್ರಗಳನ್ನು ಕುರಿತದ್ದು. ಯಾವುದು ರಾಷ್ಟ್ರಗಳ ಹಿತವನ್ನು ಕುರಿತದ್ದೊ ಅದು ಅಧ್ಯಾತ್ಮ ಪ್ರವೃತ್ತಿಯುಳ್ಳ ವ್ಯಕ್ತಿಯ, ಎಂದರೆ ಸತ್ಯದ ಮತ್ತು ಭಗವಂತನ ಅನ್ವೇಷಕನ ಸಾಧನೆಯ ಅಂಗಗಳಲ್ಲಿ ಒಂದಾಗಿರುವುದು ಅನಿವಾರ್ಯ. ನನಗಾದರೊ ಭಗವಂತನೆಂದರೂ ಒಂದೇ, ಸತ್ಯವೆಂದರೂ ಒಂದೇ. ಭಗವಂತ ಅಸತ್ಯದ ಮೂರ್ತಿಯೆಂದೂ, ಹಿಂಸೆಯ ಮೂರ್ತಿಯೆಂದೂ ಯಾರಾದರೂ ಸ್ಥಿರಪಡಿಸಿದರೆ ಅಂತಹ ಭಗವಂತನನ್ನು ಪೂಜಿಸಲು ನಾನು ನಿರಾಕರಿಸುತ್ತೇನೆ. ರಾಜಕೀಯದಲ್ಲಿ ಕೂಡ ಭಗವಂತನ ರಾಜ್ಯ ಸ್ಥಾಪಿತವಾಗಬೇಕಾಗಿದೆ. ನನ್ನ ಬದುಕಿನ ಅತ್ಯಂತ ಆತ್ಮೀಯ ವಸ್ತುಗಳಿಂದ ರಾಜಕೀಯವನ್ನು ಬೇರ್ಪಡಿಸಲಾರೆ. ಕಾರಣ ಇಷ್ಟೆ, ನನ್ನ ರಾಜಕೀಯ ಕಲುಷಿತವಲ್ಲ. ಈ ಎಲ್ಲವೂ ಸತ್ಯ-ಅಹಿಂಸೆಗಳೊಂದಿಗೆ ಜಟಿಲವಾಗಿ ಹೆಣೆದುಕೊಂಡಿವೆ. ಸತ್ಯವನ್ನು ಬಲಿಗೊಟ್ಟು ಸ್ವಾತಂತ್ರ್ಯವನ್ನು ಪಡೆಯುವುದಕ್ಕಿಂತ ಭಾರತ ವಿನಾಶ ಹೊಂದುವುದೇ ಹೆಚ್ಚು ಲೇಸೆಂಬುದು ನನ್ನ ಮತ. ರಾಜಕೀಯ ಸಂಪರ್ಕವಿಲ್ಲದೆ ಸಮಾಜಸೇವೆಯಂಥ ಕೆಲಸವನ್ನು ಕೂಡ ನಡೆಸುವುದು ಅಸಾಧ್ಯವೆಂಬುದು ನನ್ನ ಅನುಭವಕ್ಕೆ ಬಂದುದರಿಂದ ರಾಜಕೀಯ ಕ್ಷೇತ್ರವನ್ನು ನಾನು ಪ್ರವೇಶಿಸುವುದು ಅನಿವಾರ್ಯವಾಯಿತು. ಸಾಮಾಜಿಕ ಮತ್ತು ನೈತಿಕದೃಷ್ಟಿಯಿಂದ ರಾಜಕೀಯ ಕಾರ್ಯ ಪರಿಗಣಿತವಾಗಲೇಬೇಕು.

ನನ್ನ ದೇಶಕ್ಕಾಗಿ ನಾನು ತ್ಯಾಗ ಮಾಡಲಾರದುದು ಈ ಜಗತ್ತಿನಲ್ಲಿ ಏನೂ ಇಲ್ಲ-ಎರಡರ ಹೊರತು. ಅವು ಸತ್ಯ ಮತ್ತು ಅಹಿಂಸೆ. ಇಡೀ ಜಗತ್ತನ್ನೇ ನನ್ನ ಮುಂದಿಟ್ಟರೂ ಈ ಎರಡನ್ನು ಮಾತ್ರ ನಾನು ಬಿಡಲಾರೆ ಏಕೆಂದರೆ ನನ್ನ ಪಾಲಿಗೆ ಸತ್ಯವೇ ದೇವರು. ಸತ್ಯಸಾಧನೆಗೆ ಅಹಿಂಸೆಯಲ್ಲದೆ ಅನ್ಯ ಪಥವಿಲ್ಲ. ಸತ್ಯ ಅಥವಾ ಭಗವಂತನನ್ನು ಬಲಿಗೊಟ್ಟು ಭಾರತಕ್ಕೆ ಸೇವೆಸಲ್ಲಿಸುವ ಆಲೋಚನೆಯನ್ನು ನಾನು ಮಾಡಲಾರೆ. ನಾನು ಬಲ್ಲೆ, ಸತ್ಯವನ್ನು ಕೈಬಿಡಬಲ್ಲವನು ತನ್ನ ದೇಶವನ್ನೂ ಕೈಬಿಡಬಲ್ಲ, ಆಪ್ತೇಷ್ಟರನ್ನೂ ಕೈಬಿಡಬಲ್ಲ. ನನ್ನಾತ್ಮ ಮತ್ತು ನನ್ನ ಕರ್ತ ಇಬ್ಬರೂ ಮೆಚ್ಚುವಂತೆ ನಾನು ಹೋದೆಡೆಯೆಲ್ಲ ನನ್ನ ಕರ್ಮಕ್ಷೇತ್ರದ ಗಾಯತ್ರಿಗಳಾದ ಈ ನನ್ನ ಧರ್ಮ ಸೂತ್ರಗಳನ್ನು ಸಾರುತ್ತ ಹೋಗುತ್ತೇನೆ.

ನನ್ನುದು ಧರ್ಮಮಾರ್ಗ, ನಾವು ಧರ್ಮಿಗಳು, ಆದುದರಿಂದ ಉಳಿದವರಿಗೆ ನಾವು ಶ್ರೇಷ್ಠರು ಎಂಬ ಅಹಂಭಾವ ನಮ್ಮನ್ನು ಆಕ್ರಮಿಸುವ ಭಯ ಯಾವಾಗಲೂ ಇದ್ದೇ ಇದೆ. ಇತರರಿಂದ ನಾನು ನೀರೀಕ್ಷಿಸುವಂತೆ ಸ್ವವಿಮರ್ಶೆಯಲ್ಲಿ ಸತ್ಯದಂತೆಯೆ ನಿಷ್ಠುರವಾಗಿರಲು ನಾನು ಪ್ರಯತ್ನಿಸುತ್ತೇನೆ.

– ಮಹಾತ್ಮಾ ಗಾಂಧೀ

ಉತ್ತರಾಖಂಡದ ಜಲಪ್ರಳಯ
ಅಭಿವೃದ್ಧಿಯ ಶಾಪ

– *ಸುರೇಂದ್ರ ಕೌಲಗಿ*

(ವಿವೇಕ ಸಾಲದವರ ಕೈಯಲ್ಲಿ ಅಭಿವೃದ್ಧಿ ವಿನಾಶಕ್ಕೆ ಕಾರಣ)

ಎಪ್ಪತ್ತೆಂಟು ವರ್ಷಗಳ ಹಿಂದಿನಮಾತು. ಇಸವಿ ೧೯೩೪. ಆ ವರ್ಷ ಬಿಹಾರ್ ರಾಜ್ಯದಲ್ಲಿ ದೊಡ್ಡ ಪ್ರಮಾಣದ ಭೂಕಂಪವಾಗಿತ್ತು. ಆ ಭೂಕಂಪನಕ್ಕೆ ಇದ್ದ ಕಾರಣ ನೈಸರ್ಗಿಕವಾಗಿದ್ದರೂ ಕೂಡ ಮಹಾತ್ಮ ಗಾಂಧೀಯವರು ಅದನ್ನು ಸಾಮಾಜಿಕ ಸಮಸ್ಯೆಯೊಂದಿಗೆ ತಳಕು ಹಾಕಿದರು. ಅವರ ಪ್ರಕಾರ ಅದಕ್ಕೆ ಕಾರಣ ಸರ್ವಣೀಯರು ಪಂಚಮರೊಂದಿಗೆ, ಅಂದರೆ ಗಾಂಧೀಜಿಯವರ ಪ್ರಕಾರ ಹರಿಜನರೊಂದಿಗೆ ನಡೆದುಕೊಂಡ ಅಮಾನವೀಯ ವ್ಯವಹಾರ. ಅಂದರೆ ಸರ್ವಣೀಯರು ಮಾಡಿದ ಪಾಪ. ಗಾಂಧೀಜಿಯವರು ೧೯೩೪ ಜನವರಿ ೨೪ರಂದು ಟ್ಯುಟಿಕೊರಿನ್‌ನಲ್ಲಿ ೨೫ ಸಾವಿರ ಜನ ಸೇರಿದ್ದ ಸಾರ್ವಜನಿಕ ಸಭೆಯಲ್ಲಿ ಹೀಗೆ ಮಾತಾಡಿದ್ದರು:-

“ಸೀತೆ ಬೆಳೆದಂಥ ಮತ್ತು ಜನಕರಾಜ ಆಳಿದಂಥ ರಾಜ್ಯ ಬಿಹಾರ್. ಇಂದು ಆ ಸುಂದರ ಪ್ರದೇಶ ಭೂಕಂಕಪದಿಂದಾಗಿ ನಿರ್ಜನವಾಗಿದೆ. ಸಾವಿರಾರು ಜನರು ಸತ್ತಿದ್ದಾರೆ. ಇನ್ನು ಸಾವಿರಾರು ಜನರು ಗಾಯಗೊಂಡು ಭಯಂಕರವಾಗಿ ನರಳುತ್ತಿದ್ದಾರೆ. ಅನೇಕ ಸುಂದರ ನಗರಗಳು ಹಾಳು ರಾಶಿಗಳಾಗಿವೆ. ಜಗತ್ತಿನ ಎಲ್ಲೆಡೆಯಿಂದ ಸಹಾಯ ಹರಿದು ಬರುತ್ತಿದೆ. ಇಂಗ್ಲೀಷ್ ಸಾಮ್ರಾಟ್ ಸಹಾನುಭೂತಿಯ ಸಂದೇಶ ಕಳುಹಿಸಿದ್ದಾರೆ. ಈ ದೈವೀ ಆಪತ್ತು ಮಾನವರೆಲ್ಲ ಒಂದೆಂಬುದನ್ನು ಒಮ್ಮಲೆ ಜ್ಞಾಪಿಸಿಕೊಟ್ಟಿದೆ; ಈಗ ಸಂಭವಿಸಿದ ದುರಂತದ ಎದುರಿಗೆ ಇದು ಸರಿಯಾಗಿಯೂ ಮತ್ತು ನ್ಯಾಯೋಚಿತವೂ ಆಗಿದೆ. ಸರ್ಕಾರ ಮತ್ತು ಜನರು ಒಂದಾಗಿದ್ದಾರೆ. ಸದ್ಯಕ್ಕಂತೂ ಕಾಂಗ್ರೆಸಿಗರು ಮತ್ತು ಕಾಂಗ್ರೆಸೇತರರು ಎಂಬ ಭೇದವನ್ನು ಅಳಿಸಿಹಾಕಲಾಗಿದೆ ಮತ್ತು ಎಲ್ಲ ಪಕ್ಷಗಳು ಪರಸ್ಪರರ ಪ್ರಯತ್ನಗಳಿಗೆ ಪೂರಕವಾಗಿವೆ. ನೀವೆಲ್ಲರೂ ಕೂಡ ಈ ಭೂಕಂಪವು ಅಸ್ಪೃಶ್ಯರು, ಪಂಚಮರೆಂದು ಹಾಗೂ ಯಾರನ್ನು ನಾನು ಹರಿಜನರೆಂದು ಕರೆಯುತ್ತೇನೊ ಅವರಿಗೆ ನಾವು ಮಾಡಿದ ಮತ್ತು ಇನ್ನೂ ಮಾಡುತ್ತಿರುವ ಪಾಪಕ್ಕೆ ದೈವಿ ಶಾಪವಾಗಿದೆ ಎಂದು ನಂಬುವುದುರ ಮೂಲಕ ನೀವು ಕೂಡ ಅಂಥ ವಿಶ್ವಾಸಿಗಳಾಗಬೇಕೆಂದು ಬಯಸುತ್ತೇನೆ. ಈ ಮರ್ತ್ಯ ಜೀವನ ದೀಪದ ಹುಳುವಿನ ಅಸ್ತಿತ್ವಕ್ಕಿಂತ ಶಾಶ್ವತ ಏನಲ್ಲ. ದೀಪದ ಹುಳುಗಳು ದೀಪದ ಸುತ್ತ ಸುತ್ತಿ ನಂತರ ಸಾಯುವುದನ್ನು ನಾವು ಪ್ರತಿ ರಾತ್ರಿ ನೋಡುತ್ತೇವೆ. ಈ ಪಾಠವನ್ನು ನಾವು ಈ ಆಪತ್ತಿನಿಂದ ಕಲಿಯಬೇಕು. ಈ ಮರ್ತ್ಯ ಬದುಕು ಹೆಣ್ಣುಮಕ್ಕಳು ಧರಿಸುವ ಗಾಜಿನ ಬಳೆಗಳಿಗಿಂತಲೂ ನಾಜೂಕಾಗಿದೆ. ನೀವು ಗಾಜಿನ

ಬಳೆಗಳನ್ನು ಒಂದು ಡಬ್ಬದಲ್ಲಿ ಇಟ್ಟು ಅವುಗಳನ್ನು ಮುಟ್ಟದೆ ಹೋದರೆ ಸಾವಿರಾರು ವರ್ಷಗಳವರೆಗೆ ಇಟ್ಟುಕೊಳ್ಳಬಹುದು. ಆದರೆ ಈ ಮರ್ತ್ಯ ಲೋಕದ ವಾಸ ಎಷ್ಟೊಂದು ದುರ್ಬಲವಾಗಿದೆ ಎಂದರೆ ಕಣ್ಣುಮುಚ್ಚಿ ಕಣ್ಣು ತೆರೆಯುವುದರೊಳಗಾಗಿ ಇಲ್ಲದಂತಾಗಬಹುದು. ಆದ್ದರಿಂದ ಉಸಿರಾಡುವ ಸಮಯ ಇನ್ನೂ ಇರುವಾಗಲೆ ಮೇಲು ಮತ್ತು ಕೀಳು ಎಂಬ ಭೇದದಿಂದ ಮುಕ್ತರಾಗಿ ನಮ್ಮ ಹೃದಯಗಳನ್ನು ಪರಿಶುದ್ಧಗೊಳಿಸೋಣ ಮತ್ತು ಭೂಕಂಪ ಅಥವಾ ಅಂಥದೇ ಬೇರೆ ಪ್ರಾಕೃತಿಕ ವಿಪತ್ತು ಅಥವಾ ಸಾವು ಬಂದಲ್ಲಿ ಎದುರಿಸಲು ಸಿದ್ಧರಾಗೋಣ, ಪ್ರತಿಯೊಬ್ಬರೂ ವಯಸ್ಸು, ಜಾತಿ ಮತ್ತು ಜನಾಂಗದ ಭೇದವಿಲ್ಲದೆ ಸರ್ಕಾರಿ ನೌಕರರೂ ಸೇರಿದಂತೆ ಬಿಹಾರದ ನೊಂದವರಿಗೆ ನಿಮಗೇನು ಸಾಧ್ಯವೊ ಅದನ್ನು ಕೊಡಬೇಕೆಂದು ನಾನು ಕರೆಕೊಡುತ್ತೇನೆ."

೨೦೧೩ ಜೂನ್-ಜುಲೈ ಮಾಹೆಗಳಲ್ಲಿ ಉತ್ತರಾಂಖಂಡದಲ್ಲಿ ಆದ ಜಲ ಪ್ರಳಯಕ್ಕೆ ಆಧುನಿಕ ರೀತಿಯ ಅಭಿವೃದ್ಧಿಯನ್ನು ಕೈಗೊಂಡಿರುವ ನಮ್ಮ ಪಾಪ ಕಾರಣ ಆಗಿದೆ ಎಂದು ಏಕೆ ಹೇಳಬಾರದು? ಪ್ರಕೃತಿ ಒಂದು ಅದ್ಭುತವಾದ ದೈವಿಶಕ್ತಿ. ಅದು ಪಂಚಭೂತಗಳಿಂದ ಕೂಡಿದ್ದಾಗಿದ್ದೆ. ಆ ಪಂಚಭೂತ ಕಣ್ಣಿಗೆ ಕಾಣದ, ಮನಸ್ಸು ತಿಳಿಯದ, ಅಪಾರ ಶಕ್ತಿ ಹೊಂದಿದೆ. ಪ್ರಕೃತಿಯೆಂಬ ಪಾತ್ರೆ ಚಿನ್ನದ ಮುಚ್ಚಳದಿಂದ ಮುಚ್ಚಲ್ಪಟ್ಟಿದೆ. ಪಾತ್ರೆಯ ಒಳಗೆ ಸತ್ಯ ಮತ್ತು ಧರ್ಮ ಅಡಗಿವೆ. ಎಲ್ಲಿಯವರೆಗೆ ಆ ಸತ್ಯಧರ್ಮಗಳ ದರ್ಶನವಾಗುವುದಿಲ್ಲವೊ ಅಲ್ಲಿಯವರೆಗೆ ಹಣದ ಹಿಂದೆ ಬಿದ್ದಿರುವ ಅಭಿವೃದ್ಧಿಯ ಶಾಪ ಅರ್ಥವಾಗುವುದಿಲ್ಲ. ಯಾರು ಸತ್ಯ ಮತ್ತು ಧರ್ಮಗಳನ್ನು ಕಾಪಾಡುತ್ತಾರೋ ಅವು ಅವನನ್ನು ರಕ್ಷಿಸುತ್ತವೆ. ಎಂಬ ಅನುಭವದ ಮಾತಿನಂತೆ ಪ್ರಕೃತಿ ಮತ್ತು ಪರಿಸರವನ್ನು ಉಳಿಸಿದರೆ ಅವು ನಮ್ಮನ್ನು ಉಳಿಸುತ್ತವೆ. ಉತ್ತರಾಂಡದ ಜಲಪ್ರಳಯದಲ್ಲಿ ಇದುವರೆಗಿನ ವರದಿಯಂತೆ ೩೦೦೦ ಜನ ಸತ್ತಿದ್ದಾರೆ. ಸತ್ತವರ ಸಂಖ್ಯೆ ಇನ್ನೂ ಹೆಚ್ಚಾಗುವ ಸಾಧ್ಯತೆಯಿದೆ. ಬಿಹಾರ್‌ನಲ್ಲಿ ಆದ ಭೂಕಂಪದ ಕಾರಣದಿಂದ ಎವೆಇಕ್ಕುವುದರೊಳಗಾಗಿ ೨೫ ಸಾವಿರ ಜನ ಸಾವನ್ನಪ್ಪಿದರು, ಸಾವಿರಾರು ಜನ ಮನೆ ಮಠ ಕಳೆದುಕೊಂಡರು. ಉತ್ತಾರಖಂಡದ ಜಲಪ್ರಳಯದ ಕಾಲದಲ್ಲಿ ಇದ್ದಂಥ ಆಧುನಿಕ ತಂತ್ರಜ್ಞಾನ ಮತ್ತು ಸಾಧನ ಸಲಕರಣೆಗಳಾವವೂ ೧೯೩೪ರಲ್ಲಿ ಇರಲಿಲ್ಲ. ಅಂಥ ಕಷ್ಟ ಕಾಲದಲ್ಲಿ ಗಾಂಧೀಜಿಯವರು ದೇಶದಾದ್ಯಂತ ಐದು ತಿಂಗಳ ಕಾಲ ಸಂಚರಿಸಿ ಬಿಹಾರದ ಭೂಕಂಪದ ಸಂತ್ರಸ್ಥರಿಗಾಗಿ ಮತ್ತು ಹರಿಜನ ನಿಧಿಗಾಗಿ ಹಣ ಸಂಗ್ರಹಿಸಿದರು. ಅವರ ಈ ಸಂಚಾರದ ವಿಶೇಷತೆ ಏನಾಗಿತ್ತೆಂದರೆ ಒಂದು ಪ್ರಾಕೃತಿಕ ವಿಪತ್ತನ್ನು ಸಮಾಜದ ಜ್ವಲಂತ ಮತ್ತು ಅನಿಷ್ಟಕರವಾದ ಸಮಸ್ಯೆಯ ಪರಿಹಾರಕ್ಕೆ ಸಾಧನವನ್ನಾಗಿ ಮಾಡಿದ್ದು. ದೇಶದ ಪ್ರಜೆಗಳು, ರಾಜಕೀಯ ನಾಯಕರು, ಯೋಜಕರು, ಸರ್ಕಾರಗಳು ಉತ್ತಾರಖಂಡದ ಹಿಮಾಲಯ ಸುನಾಮಿಯನ್ನು ಮತ್ತು ಅನಿಷ್ಟಕರವಾದ ಶಾಪವಾಗಿ ಪರಿಣಮಿಸಿರುವ ಅಭಿವೃದ್ಧಿ ನೀತಿಯ ದಿಕ್ಕನ್ನು ಬದಲಾಯಿವಂಥ ಪ್ರಯತ್ನವನ್ನೇಕೆ ಮಾಡಬಾರದು? ದಲಿತ ಸಮಸ್ಯೆ ಹೇಗೆ ಒಂದು ಸಾಮಾಜಿಕ ಸಮಸ್ಯೆಯಾಗಿದೇಯೋ ಅದೇ ರೀತಿ ಅಭಿವೃದ್ಧಿ ನೀತಿ ಮತ್ತು ಕ್ಷಣಿಕ ಲಾಭದ ದೃಷ್ಟಿಯನ್ನು ಇಟ್ಟು ಕೊಂಡಿರುವ ಆರ್ಥಿಕ ನೀತಿಗಳೆರಡೂ

೨೧ನೇ ಶತಮಾನದ ಸಾಮಾಜಿಕ ಸಮಸ್ಯೆಗಳಾಗಿವೆ. ಈ ಸಾಮಾಜಿಕ ಸಮಸ್ಯೆಗಳಿಗೆ ಸರಿಯಾದ ಮತ್ತು ಸೂಕ್ತವಾದ ಪರಿಹಾರವನ್ನು ಮಾನವ ಕಂಡುಕೊಳ್ಳಬೇಕೆಂದೇ ಉತ್ತಾರಖಂಡದ ಜಲಪ್ರಳಯ ಹೇಳುತ್ತಿದೆ. ಅಸ್ಪೃಶ್ಯತಾಚರಣೆಯ ಪಾಪದ ಕಾರಣದಿಂದಾಗಿ ಬಿಹಾರ್‌ನಲ್ಲಿ ಭೂಕಂಪವಾಯಿತೆಂದು ಗಾಂಧೀಜಿ ಹೇಳಿದಾಗ ರವೀಂದ್ರನಾಥ ಟಾಗೋರರಂಥ ವಿಚಾರವಾದಿಗಳು ಪ್ರತಿಭಟಿಸದೆ ಇರಲಿಲ್ಲ. ಗಾಂಧೀಜಿಯವರ ಹೇಳಿಕೆಯನ್ನು ಖಂಡಿಸಿ ಟಾಗೋರರು ತಮ್ಮ ನೋವನ್ನು ಮತ್ತು ಆಶ್ಚರ್ಯವನ್ನು ವ್ಯಕ್ತಪಡಿಸಿದರು. ಗಾಂಧೀಜಿಯವರ ಮಾತುಗಳು ಅತಾರ್ಕಿಕವಾದ್ದಂಥವಾಗಿವೆ, ಅಂಥ ಮಾತುಗಳು ಅಂಧವಿಶ್ವಾಸವನ್ನು ಹೆಚ್ಚಿಸುತ್ತವೆ. ಸ್ವಾತಂತ್ರ್ಯ ಮತ್ತು ಆತ್ಮಗೌರವದ ವಿರುದ್ಧವಾಗಿ ಕೆಲಸ ಮಾಡುತ್ತವೆ ಎಂಬುದಾಗಿ ಹೇಳಿದರು. ಅದಕ್ಕೆ ಉತ್ತರವಾಗಿ ಗಾಂಧೀ ಹೇಳಿದ್ದೇನೆಂದರೆ "ಅಗಾಧವಾದ ಭೌತಿಕ ಪರಿಣಾಮಗಳು ಭೌತಿಕ ಘಟನೆಗಳಿಂದಲೇ ಹುಟ್ಟುತ್ತವೆಂದು ನಾನು ಖಂಡಿತವಾಗಿ ನಂಬಿದ್ದೇನೆ. ಅದು ಹೇಗೆ ಎಂಬುದು ನನಗೆ ಗೊತ್ತಿಲ್ಲ." ಗಾಂಧೀಜಿಯವರ ಈ ಮಾತನ್ನು ಉತ್ತರಾಖಂಡದ ಭೀಕರ ಜಲಪ್ರಳಯಕ್ಕೆ ಹೋಲಿಸುವುದಾದರೆ ಈ ಭೌತಿಕ ಪರಿಣಾಮಕ್ಕೆ ಕಾರಣ ಪರಿಸರ ವಿನಾಶದಂಥ ಭೌತಿಕ ಸಂಗತಿಗಳೆಂದು ಯಾರಾದರೂ ಊಹಿಸಬಹುದಾಗಿದೆ. ಮನುಷ್ಯ ನಿರ್ಮಿಸಿದ ಪದಾರ್ಥವನ್ನು ಹಾಳುಗೆಡವಿದವರನ್ನು ವಿಧ್ವಂಸಕರೆಂದು ಕರೆಯಲಾಗುತ್ತದೆ. ಆದರೆ ಪುನಃ ನಿರ್ಮಿಸಲು ಸಾಧ್ಯವಾಗದಿರುವಂಥ ಪ್ರಕೃತಿಯನ್ನು ನಾಶ ಮಾಡುವವರಿಗೆ 'ಆಯೋಜಕರು' ಎಂದು ದೊಡ್ಡ ಮತ್ತು ಆಧುನಿಕ ಹೆಸರಿನಿಂದ ಕರೆಯಲಾಗುತ್ತದೆ! ಉತ್ತರಾಖಂಡದ ಜಲಪ್ರಳಯ ಇಂಥ ಆಯೋಜಕರ ಅಭಿವೃದ್ಧಿ ನೀತಿಯ ಕಾರಣದಿಂದಲೇ ಆದದ್ದು. ತಂತ್ರಜ್ಞಾನವಿದ್ದರೂ ಕೂಡ ಮಾನವನ ತಪ್ಪುಗಳಿಂದಾಗಿ ಅನಾಹುತ ಉಂಟಾಯಿತು. ಉತ್ತರಾಖಂಡದ ಹವಾಮಾನ ಇಲಾಖೆಯು ಮುಂಬರುವ ಹವಮಾನದ ಬದಲಾವಣೆ ಬಗ್ಗೆ ತಾನು ಸರ್ಕಾರಕ್ಕೆ ತಿಳಿಸಿರುವುದಾಗಿ ಹೇಳುತ್ತದೆ. ಆದರೆ ರಾಜ್ಯ ಸರ್ಕಾರವು ಹವಾಮಾನ ಇಲಾಖೆ ಯಾವ ಮುನ್ಸೂಚನೆಯನ್ನೂ ಕರಾರುವಕ್ಕಾಗಿ ಕೊಟ್ಟಿರಲಿಲ್ಲವೆಂದು ಪ್ರತಿಯಾಗಿ ಹೇಳುತ್ತದೆ. ಈ ಎರಡು ಇಲಾಖೆಗಳ ಮಧ್ಯೆ ಇದ್ದ ಸಮನ್ವಯದ ಕೊರತೆಯಿಂದಾಗಿ ಭೀಕರ ಅನಾಹುತ ಉಂಟಾಯಿತು. ಅನೇಕರಿಗೆ ಗೊತ್ತಿರುವಂತೆ ತಮ್ಮ ಸ್ವಲಾಭಕ್ಕಾಗಿ ಮತ್ತು ರಾಜಕೀಯ ಹಿತಕ್ಕಾಗಿ ಪ್ರತಿಯೊಬ್ಬರು ಬರಗಾಲವನ್ನು ಪ್ರೀತಿಸುತ್ತಾರೆ. ಅದೇ ರೀತಿ ಪ್ರವಾಹವನ್ನೂ ಪ್ರತಿಯೊಬ್ಬರು ಪ್ರೀತಿಸುತ್ತಾರೆ ಎಂದು ಜಲ ಪ್ರಳಯದ ಕಾಲದಲ್ಲಿ ಗೊತ್ತಾಯಿತು. ರಾಹುಲ್‌ಗಾಂಧಿಯಂಥ ಪ್ರಭಾವಶಾಲಿ ರಾಜಕಾರಣಿಗಳು ಪರಿಹಾರ ಸಾಮಗ್ರಿಗಳನ್ನು ಕಳುಹಿಸುವುದರಲ್ಲಿ ಎಷ್ಟೊಂದು ಆತುರರಾಗಿದ್ದರೆಂದರೆ ರಾಜ್ಯ ಸರ್ಕಾರದೊಂದಿಗೆ ಸಮನ್ವಯ ಸಾಧಿಸಲು ಕೂಡ ಯೋಚನೆ ಮಾಡಲಿಲ್ಲ. ಅದರ ಪರಿಣಾಮವಾಗಿ ಟ್ರಕ್‌ಗಳು ಪರಿಹಾರ ಪದಾರ್ಥಗಳನ್ನು ತುಂಬಿಕೊಂಡು ಉತ್ತರಾಖಂಡಕ್ಕೆ ಹೋಗುವ ಮಾರ್ಗಮಧ್ಯದಲ್ಲಿ ನಿಂತುಬಿಟ್ಟವು. ಪರಿಹಾರ ಸಾಮಗ್ರಿಯನ್ನು ಕಳುಹಿಸಲು ಇಷ್ಟೊಂದೇಕೆ ಆತುರವೆಂದು ಕೇಳಲಾಗಿ ಅದಕ್ಕೆ ಬಂದ ಉತ್ತರ ಸ್ಥಳೀಯ ರಾಜಕೀಯ ಕಾರ್ಯಕರ್ತರಿಗೆ ತಮ್ಮ ಪಕ್ಷ ಕೆಲಸ ಮಾಡುತ್ತಿದೆಯೆಂದೂ, ಮುಖಂಡರು ಕಾರ್ಯತತ್ಪರರಾಗಿದ್ದಾರೆಂದೂ

ತಿಳಿಸುವುದೇ ಆಗಿತ್ತೆಂಬ ಉತ್ತರ ಬಂದಿತು. ನಿಜವಾದ ಕಳಕಳಿ ಇದ್ದದ್ದು ಭಾವಿ ಚುನಾವಣೆಯಲ್ಲಿ ಸಾರ್ವಜನಿಕರ ಸಹಾನುಭೂತಿಯನ್ನು ಪಡೆಯುವುದೇ ಆಗಿತ್ತು. ಉತ್ತರಾಖಂಡದಲ್ಲಿಯ ಪ್ರವಾಹ ಅಲ್ಲಿಯ ರಾಜಕಾರಣಿಗಳಿಗೆ ರಾಜಕಾರಣ ಮಾಡುವ ಅವಕಾಶವನ್ನು ಕಲ್ಪಿಸಿದೆ. ಉತ್ತರಾಖಂಡದ ಮುಖ್ಯಮಂತ್ರಿಯ ಮೇಲೆ ಪ್ರವಾಹದ ಸಂಬಂಧವಾದ ಕಾರ್ಯಕಲಾಪಗಳ ವಿರುದ್ಧ ಅಲ್ಲಿಯ ಸ್ಪೀಕರ್ ರಾಜಕಾರಣಿ ಮುಖ್ಯ ಮಂತ್ರಿಯ ಮೇಲೆ ಅಜಾಗರೂಕತೆ, ಅಸಾಮರ್ಥ್ಯ ಮುಂತಾದ ದೋಷಾರೋಪಣೆ ಹೊರಸಿ ಅವರನ್ನು ಮುಖ್ಯಮಂತ್ರಿ ಪದವಿಯಿಂದ ತೆಗೆದು ಹಾಕಿ ತಾವು ಮುಖ್ಯಮಂತ್ರಿಯಾಗಲು ಹುನ್ನಾರ ನಡೆಸಿದ್ದಾರೆ.

ಉತ್ತರಾಖಂಡದ ದುರಂತ ಪ್ರಾಕೃತಿಕ ವಿಪತ್ತಿನಿಂದ ಆಗಿದೆಯೊ ಅಥವಾ ಮಾನವ ನಿರ್ಮಿತವೊ ಎಂಬುದು ಸ್ಪಷ್ಟವಾಗಿ ಗೊತ್ತಾಗಬೇಕಿದೆ. ಇದುವರೆಗಿನ ಮಾಹಿತಿ ಪ್ರಕಾರ ೧೦೦ ಕ್ಕೆ ೫೦ ರಷ್ಟು ಭಾಗ ಮಾನವ ನಿರ್ಮಿತವೆಂದು ಗೊತ್ತಾಗುತ್ತಿದೆ. ಈಗ ಆ ಪ್ರದೇಶದಲ್ಲಿ ೨೪೪ ಜಲವಿದ್ಯುತ್ ಯೋಜನೆಗಳು ಇವೆ, ೧೬೦೮ ಹೆಕ್ಟರ್ ಭೂಮಿ ನದಿ ತಳದಲ್ಲಿ ಗಣಿಗಾಗಿ ಆಕ್ರಮಿಸಲ್ಪಟ್ಟಿದೆ ಮತ್ತು ೧೫೦೭೨ ಹೆಕ್ಟರ್ ಕಾಡು ಬೇರೆಬೇರೆ ಉದ್ದೇಶಕ್ಕಾಗಿ ಹಸ್ತಾಂತರಗೊಂಡಿದೆ. ಇದುವರೆಗೂ ಪ್ರವಾಹದಲ್ಲಿ ಸತ್ತವರ, ಭೂಕುಸಿತದಿಂದ ಸತ್ತವರ ಮತ್ತು ಕಟ್ಟಡಗಳ ಕುಸಿತದಿಂದ ಸತ್ತವರ ಸಂಖ್ಯೆ ಎಷ್ಟೆಂಬುದು ನಿಖರವಾಗಿ ಗೊತ್ತಾಗಿಲ್ಲ. ಹತ್ತು ಸಾವಿರಕ್ಕಿಂತಲೂ ಹೆಚ್ಚು ಜನ ಪ್ರಾಣ ಕಳೆದುಕೊಂಡಿರುವ ಸಾಧ್ಯತೆ ಇದೆ. ಇನ್ನು ಕಟ್ಟಡಗಳ ನಾಶ, ಭೂಸವೆತ ಮುಂತಾದ ಸ್ಥಾವರ ಆಸ್ತಿಯ ನಷ್ಟ ಕೋಟ್ಯಾಂತರ ರೂಪಾಯಿ ಆಗುತ್ತದೆ. ಹಿಮಾಲಯದ ರಾಜ್ಯಗಳಲ್ಲಿ ಈಗಾಗಲೆ ಅನೇಕ ಡ್ಯಾಮ್‌ಗಳನ್ನು ಕಟ್ಟಲಾಗಿದೆ. ಅಲ್ಲದೆ ಇತ್ತೀಚಿನ ವರದಿ ಪ್ರಕಾರ ೬೮೦ಕ್ಕೂ ಹೆಚ್ಚು ಡ್ಯಾಮ್‌ಗಳು ನಿರ್ಮಾಣದ ಹಂತದಲ್ಲಿವೆ. ನದಿಗಳ ತೀರದ ಬಳಿ ಅನೇಕ ಹೋಟಲ್‌ಗಳನ್ನು, ಅಂಗಡಿಗಳನ್ನು ಮತ್ತು ವಸತಿ ಗೃಹಗಳನ್ನು ಕಟ್ಟಲಾಗಿದೆ. ಇತ್ತೀಚೆಗೆ ಜಮ್ಮು-ಕಾಶ್ಮೀರದೊಂದಿಗೆ ಸಂಪರ್ಕಕಲ್ಪಿಸಲು ಕೇವಲ ೧೭ ಕಿಲೋಮೀಟರ್ ದೂರವನ್ನು ಕಡಿಮೆ ಮಾಡಲು ೧೧ ಕಿಲೋಮೀಟರ್ ಉದ್ದದ ಸುರಂಗ ಮಾರ್ಗವನ್ನು ಕೊರೆದು ರೈಲು ಸಂಚಾರ ಕಲ್ಪಿಸಲಾಗಿದೆ. ಈ ಪ್ರದೇಶದ ಮಣ್ಣು ಗಟ್ಟಿಯಾದುದಲ್ಲ, ಸವಕಳಿಗೆ ಒಳಗಾಗುವ ಮಣ್ಣು. ಅಲ್ಲದೆ ಭೂಕಂಪನಗಳಿಗೆ ಒಳಗಾಗುವ ಪ್ರದೇಶ. ಹೀಗೆ ಹಿಮಾಲಯದ ತಪ್ಪಲಲ್ಲಿ ಅವ್ಯಾಹತವಾಗಿ ನಿರ್ಮಾಣದ ಕೆಲಸ ನಡೆಯುತ್ತಿದೆ. ಇದೆಲ್ಲ ಸಾಲದೆಂಬಂತೆ ಪ್ರವಾಸಿ ಉದ್ಯಮವನ್ನು ಬೆಳಸಲಾಗುತ್ತಿದೆ. ಕಾಡಿನ ವಿನಾಶ ಭೂಪಾತಕ್ಕೆ ಕಾರಣವಾಗುತ್ತಿದೆ. ಮೂರು ಸಾವಿರ ಕೋಟಿಗೂ ಮೀರಿ ನಷ್ಟವುಂಟಾಗಿದೆ. ಉತ್ತರಾಖಂಡದ ಈ ಜಲಪ್ರಳಯ ಮಾನವ ನಿರ್ಮಿತವಾದುದರಿಂದ ಕೇಂದ್ರ ಮತ್ತು ಆ ರಾಜ್ಯದ ಸರ್ಕಾರ ತಪ್ಪಿತಸ್ಥರ ಸ್ಥಾನದಲ್ಲಿವೆ. ಆ ಪ್ರದೇಶದಲ್ಲಿ ನಡೆದ ಮತ್ತು ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಕೇಂದ್ರ ಸರ್ಕಾರ ಪರಿಪೂರ್ಣವಾದ ಶ್ವೇತಪತ್ರವೊಂದನ್ನು ಪ್ರಕಟಿಸಬೇಕು. ಜನರಿಗೆ ತಪ್ಪು ಅಭಿವೃದ್ಧಿ ನೀತಿಯಿಂದ ಆಗಿರುವ ಅನಾಹುತಗಳ ಪರಿಚಯವಾಗಬೇಕು. ಉತ್ತಾರಖಂಡದಂಥ ದುರಂತಗಳಿಗೆ ಕಾರಣವಾಗಿರುವ ಈ ಸರ್ಕಾರಗಳನ್ನು ಏಕೆ ದಂಡಿಸಬಾರದು? ಈ ಅಪರಾಧದಲ್ಲಿ ಯೋಜನಾ ಆಯೋಗವನ್ನು ಸಹ ಸೇರಿಸಬೇಕು.

ಉತ್ತರ ಭಾರತದಲ್ಲಿ ಅತೀಪ್ರವಾಹ ಮತ್ತು ದಕ್ಷಿಣ ಭಾರತದಲ್ಲಿ ಅನಾವೃಷ್ಟಿಯಂಥ ಪ್ರಕೃತಿ ವಿಕೋಪಗಳಿಗೂ ಮನುಷ್ಯರ ನೈತಿಕತೆಗೂ ಸಂಬಂಧವಿದೆ. ಎಂಬ ಗಾಂಧೀಜಿಯವರ ಮಾತನ್ನು ನಾವು ಪದೇ ಪದೇ ಜ್ಞಾಪಿಸಿಕೊಳ್ಳಬೇಕು. ನೈತಿಕತೆ ಎಂದರೆ ಕೇವಲ ಮನುಷ್ಯನ ವ್ಯವಹಾರಿಕ ನಡೆನುಡಿಯಲ್ಲ ಅದಕ್ಕೂ ಮಿಗಿಲಾಗಿ ಸ್ವಂತ ಜೀವನದಲ್ಲಿಯ ಆಗುಹೋಗುಗಳೂ ಸೇರಿರುತ್ತವೆ. ಉದಾಹರಣೆಗೆ ಸಂಗ್ರಹವೃತ್ತಿ ಮತ್ತು ಪರಿಗ್ರಹವೃತ್ತಿಗಳನ್ನೇ ಗಮನಿಸೋಣ. ಈ ಎರಡು ವೃತ್ತಿಗಳು ಮನುಷ್ಯ ಸ್ವಭಾವದಲ್ಲಿ ಇರುವುದರಿಂದ ಪರಿಸರನಾಶವಾಗುತ್ತಿದೆ ಎಂದು ಧಾರಳವಾಗಿ ಹೇಳಬಹುದು. ಸಂಗ್ರಹವೃತ್ತಿ ಮತ್ತು ಪರಿಗ್ರಹವೃತ್ತಿಗಳು ದೇಶದಲ್ಲಿರುವ ಪ್ರಚಲಿತ ಆರ್ಥಿಕ ನೀತಿ ಮತ್ತು ಸಾಮಾಜಿಕ ನೀತಿಗಳಿಗೆ ಕಾರಣವಾಗುತ್ತವೆ. ಸಮಾಜದಲ್ಲಿ ನ್ಯಾಯಪರತೆ ಹೆಚ್ಚಿದರೆ, ಜೀವನ ಮೌಲ್ಯಗಳು ಹೆಚ್ಚಿದರೆ, ವಾಣಿಜ್ಯಕರಣ ಕಡಿಮೆಯಾದರೆ ಸಂಗ್ರಹ ವೃತ್ತಿ ಮತ್ತು ಪರಿಗ್ರಹವೃತ್ತಿ ತಾನಾಗಿಯೇ ಕಡಿಮೆಯಾಗಿ ಈ ಜಗತ್ತಿನಲ್ಲಿ ಏನೆಲ್ಲ ಜೀವನವಿದೆಯೋ ಅದು ಈಶ್ವರ ನಿರ್ಮಿತ. ಆದ್ದರಿಂದ ಅವನ ಹೆಸರಿನಲ್ಲಿ ತ್ಯಾಗ ಮಾಡಿ ಯಥಾಪ್ರಾಪ್ತವನ್ನು ನಾವು ಭೋಗಿಸಬೇಕು. ಪರರ ಹಣದ ಬಗ್ಗೆಯಾಗಲಿ, ಜಗತ್ತಿನ ಪ್ರಕೃತಿ ಸಂಪತ್ತಿನ ವಾಸನೆಯನ್ನು ಇಟ್ಟುಕೊಳ್ಳದೆ ಜೀವನ ನಡೆಸುವಂಥಾಗುವುದು. ಇಂಥ ವಿಚಾರಗಳನ್ನು ಇಟ್ಟುಕೊಂಡೆ ಗಾಂಧೀಯವರು ೧೯೩೪ರಲ್ಲಿಯ ಬಿಹಾರ್‌ರಾಜ್ಯದ ಭೂಕಂಪಕ್ಕೂ ಅಸ್ಪೃಶ್ಯತೆಯ ಆಚರಣೆಗೂ ತಳಕುಹಾಕಿ ಹಿಂದೂಗಳ ಅಸ್ಪೃಶ್ಯತಾಚರಣೆಯ ಪಾಪವೇ ಭೂಕಂಪನಕ್ಕೆ ಕಾರಣವೆಂದು ಹೇಳಿದ್ದು ಈ ಬಗ್ಗೆ ಗಾಂಧೀಜಿಯವರ ಈ ಕೆಳಗಿನ ಚಿಂತನವನ್ನು ಗಮನಿಸುವುದು ಸೂಕ್ತ ಎನಿಸುತ್ತದೆ. "ಶಾಂತಿನೀಕೆತನದ ಕವಿ ಆ ಮಹಾನ್ ಸಂಸ್ಥೆಯ ವಿದ್ಯಾರ್ಥಿಗಳಿಗೆ ಗುರುದೇವವಾಗಿರುವಂತೆ ನನಗೂ ಕೂಡ ಆಗಿದ್ದಾರೆ. ನಾನು ಮತ್ತು ನನ್ನ ಜೊತೆಗಾರರು ದಕ್ಷಿಣ ಆಫ್ರಿಕಾದಿಂದ ಹಿಂದಿರುಗಿದಾಗ ಶಾಂತಿನಿಕೇತನದಲ್ಲಿ ಆಶ್ರಯಪಡಿದಿದ್ದೆವು. ಗುರುದೇವ ಮತ್ತು ನನ್ನಲ್ಲಿ ದೃಷ್ಟಿಕೋನದ ವ್ಯತ್ಯಾಸಗಳಿವೆಯೆಂದು ಕೊಡಲೇ ಅರಿತೆವು. ಆದರೆ ಪರಸ್ಪರರಲ್ಲಿಯ ಪ್ರೀತಿ-ವಿಶ್ವಾಸ ಯಾವುದೇ ಕಾರಣಕ್ಕೂ ಕುಂಠಿತಗೊಂಡಿಲ್ಲ ಮತ್ತು ಬಿಹಾರದ ದುರಂತಕ್ಕೆ ಅಸ್ಪೃಶ್ಯತಾಚಾರಣೆಯ ಪಾಪಕಾರಣವೆಂಬ ನನ್ನ ಹೇಳಿಕೆಗೆ ಗುರುದೇವರು ಹೇಳಿದ ಮಾತುಗಳು ಕೂಡ ನಮ್ಮ ಮಧುರ ಬಾಂಧವ್ಯವನ್ನು ಕೆಡಿಸಲಾರವು. ನನ್ನದು ತಪ್ಪೆಂದು ಗೊತ್ತಾದಾಗ ಅದರ ವಿರುದ್ಧ ಮಾತಾನಾಡುವುದಕ್ಕೆ ಅವರಿಗೆ ಪೂರ್ಣ ಹಕ್ಕುಂಟು. ಗುರುದೇವರ ಬಗ್ಗೆ ನಾನು ಹೊಂದಿರುವ ಅತ್ಯುನ್ನತ ಗೌರವದ ಕಾರಣದಿಂದಾಗಿ ಬೇರೆಯವರ ಟೀಕೆಗಿಂತ ಅವರ ಟೀಕೆಯನ್ನು ಕೂಡಲೇ ಗಮನಿಸುತ್ತೇನೆ. ಆದರೆ ಅವರ ಹೇಳಿಕೆಯನ್ನು ಒಂದಲ್ಲ ಮೂರುಸಲ ಓದಿದ ಮೇಲೂ ಹರಿಜನದಲ್ಲಿ ನಾನು ಬರೆದ ಹೇಳಿಕೆಗಳಿಗೆ ಬದ್ಧನಾಗಿರುತ್ತೇನೆ. ತಿರುನಲ್ವೇಲಿಯಲ್ಲಿ ಮೊದಲ ಬಾರಿಗೆ ಬಿಹಾರ್ ದುರಂತಕ್ಕೂ ಅಸ್ಪೃಶ್ಯತೆಗೂ ಸಂಬಂಧವನ್ನು ಜೋಡಿಸಿದಾಗ ಅತ್ಯಂತ ಯೋಚನೆ ಮಾಡಿ ಮತ್ತು ಹೃದಯ ತುಂಬಿದವನಾಗಿ ಮಾತನಾಡಿದೆ. ನಾನೇನು ನಂಬಿದ್ದೆನೊ ಅದನ್ನೆ ಹೇಳಿದೆ. ಭೌತಿಕ ಪರಿಣಾಮಗಳು ಭೌತಿಕ ಮತ್ತು ಆಧ್ಯಾತ್ಮಿಕ ಪರಿಣಾಮಗಳನ್ನು ಉಂಟುಮಾಡುತ್ತವೆಂದು ನಾನು ದೀರ್ಘಕಾಲದಿಂದ ನಂಬಿದ್ದೇನೆ.

ಪರಸ್ಪರ ಸಂಬಂಧ ನಿಜವೆಂದು ನಂಬುತ್ತೇನೆ. ನನ್ನ ಮಟ್ಟಿಗೆ ಆ ಭೂಕಂಪನವು ದೇವರು ಮನಬಂದಂತೆ ಮಾಡುವ ವ್ಯವಹಾರವಾಗಲಿ ಅಥವಾ ಅವಿಶ್ವಾಸಗಳ ಕೂಡುವಿಕೆಯಾಗಲಿ ಅಲ್ಲ. ನಮಗೆ ಭಗವಂತನ ನಿಯಮಗಳು ಗೊತ್ತಿಲ್ಲ. ಅವು ಹೇಗೆ ಕೆಲಸ ಮಾಡುತ್ತೇವೆ ಎಂಬುದು ಗೊತ್ತಿಲ್ಲ. ಅತ್ಯಂತ ಹಿರಿಯ ವಿಜ್ಞಾನಿ ಅಥವಾ ಆಧ್ಯಾತ್ಮಿಕ ಪರುಷ ಒಂದು ಧೂಳಿನ ಕಣದಂತೆ. ದೇವರು ನನ್ನ ತಂದೆಯಂತೆ ವ್ಯಕ್ತಿ ಸ್ವರೂಪ ಅಲ್ಲದಿದ್ದರೂ ಅವನು ಅನಂತವಾಗಿ ದೊಡ್ಡವನು. ಅವನು ನನ್ನ ಜೀವನದ ಅತಿ ಸಣ್ಣ ಕೆಲಸವನ್ನು ನಿಯಂತ್ರಿಸುತ್ತಾನೆ. ಅವನ ಇಚ್ಚೆಯಿಲ್ಲದೆ ಒಂದು ತೃಣವು ಅಲುಗಾಡದೆಂಬುದನ್ನು ಅಕ್ಷರಶಃ ನಂಬುತ್ತೇನೆ. ನನ್ನ ಪ್ರತಿಯೊಂದು ಉಸಿರಾಟವು ಅವನ ಮೌನಸಮ್ಮತಿಯ ಮೇಲೆ ಅವಲಂಬಿಸಿದೆ.

ಆತ ಮತ್ತು ಆತನ ನಿಯಮ ಒಂದೇ. ಆ ನಿಯಮವೇ ದೇವರು. ಅವನಿಗೆ ಅನ್ವಯಿಸುವ ಯಾವ ಮಾತೂ ಕೇವಲ ಅನ್ವಯವಲ್ಲ, ಅವನೇ ಅನ್ವಯ, ಅವನು ಸತ್ಯ ಪ್ರೇಮ, ನಿಯಮ ಮತ್ತು ಇನ್ನು ಅನೇಕ ಸಂಗತಿಗಳು. ನಿರ್ದಯವಾದ ದೈವಿ ಸಾರ್ವತ್ರಿಕ ನಿಯಮದಂತೆ ದೇವರು ಕೆಲಸ ಮಾಡುತ್ತಾನೆ ಮತ್ತು ದೇವರು ಸ್ವತಃ ಎಂದೂ ಮಧ್ಯ ಪ್ರವೇಶಮಾಡುವುದಿಲ್ಲ ಎಂಬ ಗುರುದೇವರ ವಿಚಾರ ನಂಬುತ್ತೇನೆ. ಏಕೆಂದರೆ ದೇವರು ನಿಯಮ. ಆ ನಿಯಮ ನಮಗೆ ಗೊತ್ತಿಲ್ಲವೆಂಬುದನ್ನು ನಾನು ಹೇಳುತ್ತೇನೆ. ಯಾವುದು ಪ್ರಾಕೃತಿಕ ದುರಂತವೆಂದು ತೋರುತ್ತದೋ ಅದಕ್ಕೆ ಕಾರಣ ಜಾಗತೀಕ ನಿಯಮಗಳನ್ನು ವೈಜ್ಞಾನಿಕವಾಗಿ ನಾವು ತಿಳಿಯದೆ ಇರುವುದಾಗಿದೆ.

ಕ್ಷಾಮ, ಪ್ರವಾಹ ಭೂಕಂಪನದಂಥ ದುರಂತಗಳಿಗೆ ಭೌತಿಕವಾದಂಥವು ಮೂಲಕಾರಣವೆಂದು ಕಂಡು ಬಂದರೂ ಅವು ಅದು ಹೇಗೋ ನನಗೆ ಮನುಷ್ಯನ ನೈತಿಕತೆಯೊಂದಿಗೆ ಸಂಬಂಧವಿದೆಯೆಂದು ಅನಿಸುತ್ತದೆ. ಆದ್ದರಿಂದ ನನಗೆ ಸಹಜವಾಗಿ ಭೂಕಂಪನವು ಅಸ್ಪೃಶ್ಯತೆಯ ಶಾಪವೆಂದು ಅನಿಸಿತು. ಸನಾತನಿ ಹಿಂದುಗಳು ಅಸ್ಪೃಶ್ಯತೆಯ ವಿರುದ್ಧ ನಾನು ಭೋಧಿಸುತ್ತಿರುವುದು ಕಾರಣವೆಂದು ಹೇಳಬಹುದು. ನನ್ನ ನಂಬಿಕೆ ಏನೆಂದರೆ ಅದು ಪಶ್ಚಾತಾಪ ಮತ್ತು ಆತ್ಮ ಶುಧ್ಧಿಗಾಗಿ ಕರೆಯೆಂದು. ಸೃಷ್ಟಿಯ ನಿಯಮಗಳು ಹೇಗೆ ವರ್ತಿಸುತ್ತವೆ ಎಂಬುದರ ಬಗ್ಗೆ ಇರುವ ನನ್ನ ಅಜ್ಞಾನವನ್ನು ಒಪ್ಪುತ್ತೇನೆ. ಆದರೆ ದೇವರ ಇರುವಿಕೆಯನ್ನು ಸಿದ್ಧ ಮಾಡಲು ನಾನು ಸಮರ್ಥನಲ್ಲದಿದ್ದರೂ ದೇವರಲ್ಲಿ ನಂಬಿಕೆ ಇರಲಾರದೆ ಇರಲು ಸಾಧ್ಯವಿಲ್ಲ. ಅದರಂತೆಯೇ ಭೂಕಂಪನಕ್ಕೂ ಮತ್ತು ಅಸ್ಪೃಶ್ಯತಾಚರಣೆಯ ಪಾಪಕ್ಕೂ ಇರುವ ಸಂಬಂಧವನ್ನು ನಾನು ಸಿದ್ಧಪಡಿಸಲಾರೆ. ಆದರೆ ಆ ಸಂಬಂಧದ ಇರುವಿಕೆ ನನ್ನಲ್ಲಿ ಸಹಜವಾಗಿಯೇ ಸ್ಫುರಿಸಿತು. ನನ್ನ ನಂಬಿಕೆ ಅರ್ಥ ಹೀನವಾದುದೆಂದು ಅನಿಸಿದರೂ ಕೂಡ ಅದು ನನಗೂ ಮತ್ತು ನನ್ನನ್ನು ನಂಬುವ ಜನರಿಗೂ ಒಳ್ಳೆಯದನ್ನೆ ಮಾಡುವುದು. ಆಗ ನಾನು ಅಸ್ಪೃಶ್ಯತೆ ಎಂಬುದು ಭಯಂಕರವಾದ ಪಾಪವೆಂದು ಬಗೆದು ಇನ್ನೂ ಹೆಚ್ಚು ಆತ್ಮಶುಧ್ಧಿಯ ಪ್ರಯತ್ನ ಮಾಡುತ್ತೇನೆ. ಅಂಥ ಊಹೆಯಿಂದ ಆಗುವ ಅಪಾಯವನ್ನು ನಾನು ಬಲ್ಲೆ. ಆದರೆ ಯಾರು ನನಗೆ ಹತ್ತಿರವಾಗಿದ್ದಾರೊ ಪ್ರೀತಿಗೆ ಪಾತ್ರರಾಗಿದ್ದಾರೋ ಅವರು ಯಾವ ಕಷ್ಟವನ್ನು ಅನುಭವಿಸುತ್ತಿದ್ದಾರೋ ಅದನ್ನು ನಾನು ಬಹಿರಂಗವಾಗಿ ಹೇಳದೆ ಹೋಗಿದ್ದರೆ ನಾನು ಅಸತ್ಯವಾದಿ ಮತ್ತು

ಹೇಡಿಯೆಂದು ಸಿದ್ಧಗೊಳ್ಳುತ್ತಿದ್ದೆ.

ಭೂಕಂಪನದ ಭೌತಿಕ ಪರಿಣಾಮ ಬೇಗನೆ ಮರೆತು ಹೋಗಬಹುದು ಮತ್ತು ಸ್ವಲ್ಪ ದುರಸ್ತಿಮಾಡಬಹುದು ಆದರೆ ಅಸ್ಪೃಶ್ಯತಾಚರಣೆಯ ಶಾಪವಾಗಿ ಅದು ದೈವಿಕೋಪವೆಂದು ಪರಿಗಣಿತವಾದರೆ ಮತ್ತು ಅದರಿಂದ ನೀತಿ ಪಾಠ ಕಲಿಯದಿದ್ದರೆ ಮತ್ತು ಆ ಪಾಪಕ್ಕಾಗಿ ಪಶ್ಚಾತ್ತಾಪ ಪಡದೆ ಹೋದರೆ ಅದೊಂದು ಭಯಂಕರ ಸಂಗತಿಯಾಗಬಹುದು. ನಮ್ಮ ಪಾಪಗಳು ಮತ್ತು ತತ್ವಗಳು ಎಷ್ಟೇ ದೊಡ್ಡದಾಗಿದ್ದರೂ ಕೂಡ ಪ್ರಕೃತಿಯ ಸೃಷ್ಟಿಯನ್ನು ಹಾನಿಗೆಡಬಹುದಾದಷ್ಟು ಶಕ್ತಿ ಅವುಗಳಲ್ಲಿ ಇಲ್ಲ ಎಂಬ ಗುರುದೇವರ ನಂಬಿಕೆಯನ್ನು ನಾನು ಹೊಂದಿಲ್ಲ. ಬದಲಿಗೆ, ಯಾವುದೇ ಭೌತಿಕ ಏರುಪೇರುಗಳು ಮಾಡಲಿಕ್ಕಾಗದಷ್ಟು ಹೆಚ್ಚು ಶಕ್ತಿ ನಮ್ಮ ಪಾಪಗಳಲ್ಲಿ ಇದೆಯೆಂದು ನಾನು ನಂಬುತ್ತೇನೆ. ಭೌತವಸ್ತು ಮತ್ತು ಚೈತನ್ಯದ ಮಧ್ಯೆ ಅಳಿಸಲಾಗದ ಸಂಬಂಧವಿದೆ. ಆ ಸಂಬಂಧದ ಪರಿಣಾಮಗಳ ಬಗ್ಗೆ ಇರುವ ನಮ್ಮ ಅಜ್ಞಾನ ಅದನ್ನು ಬಹು ರಹಸ್ಯವನ್ನಾಗಿ ಮತ್ತು ನಮ್ಮಲ್ಲಿ ಭೀತಿ ಉಂಟಾಗುವಂತೆ ಮಾಡುತ್ತದೆ. ಆದರೆ ಆ ಸಂಬಂಧ ಮುರಿಯಲಾರದದ್ದು. ಆದರೆ ಆ ಸಂಬಂಧದ ಬಗ್ಗೆ ಜೈವಿಕ ಮಾನ್ಯತೆಯನ್ನು ನಮ್ಮಲ್ಲಿಯ ಅನೇಕರು ತಮ್ಮ ನೈತಿಕ ಉನ್ನತಿಗಾಗಿ ಉಪಯೋಗಿಸಿಕೊಂಡಿದ್ದಾರೆ.

ಬ್ರಹ್ಮಾಂಡದಲ್ಲಿರುವ ಪ್ರಕ್ರಿಯೆ ಮತ್ತು ಮಾನವನ ನಡಾವಳಿಯಲ್ಲಿ ಇರುವ ಸಂಬಂಧ ನನ್ನಲ್ಲಿ ಇರುವ ಒಂದು ಜೀವಂತ ನಂಬಿಕೆಯಾಗಿದೆ. ಅದು ನನ್ನ ದೇವರ ಬಳಿ ಎಳೆಯುತ್ತದೆ. ವಿನಮ್ರನನ್ನಾಗಿ ಮಾಡುತ್ತದೆ. ಹಾಗೂ ದೇವರನ್ನು ಎದುರಿಸಲು ಅಣಿಗೊಳಿಸುತ್ತದೆ. ನನ್ನ ಅಜ್ಞಾನದಿಂದಾಗಿ ನಾನು ನನ್ನ ವಿರೋಧಿಗಳನ್ನು ಹಿಯಾಳಿಸಿದ್ದರೆ ಅದೊಂದು ಅವಹೇಳನಕಾರಿ ಮೂಢನಂಬಿಕೆಯಾಗುವುದು!

ಮೇಲ್ಕಾಣಿಸಿದ ಗಾಂಧೀಯವರ ಮಾತಿನಲ್ಲಿ ಅಸ್ಪೃಶ್ಯತಾಚರಣೆಯ ಸ್ಥಾನದಲ್ಲಿ ಪರಿಸರ ವಿನಾಶ ಎಂಬ ಸಂಗತಿಯನ್ನು ಇಟ್ಟುಕೊಂಡು ಓದಿದ್ದೆ ಆದರೆ ಉತ್ತರಾಖಂಡದ ಜಲ ಪ್ರಳಯ ವೇಗಗತಿಯಲ್ಲಿ ನಷ್ಟವಾಗುತ್ತಿರುವ ಕಾಡು, ದೊಡ್ಡ ಅಣೆಕಟ್ಟುಗಳು, ಬತ್ತುತ್ತಿರುವ ಜಲಮೂಲ, ಕರಗುತ್ತಿರುವ ಗ್ಲೇಸಿಯರ್, ಹಸಿರುಮನೆ ಅನಿಲ ಮುಂತಾದವುಗಳಿಂದ ಜರ್ಜರಿತವಾಗಿರುವ ಪರಿಸರವು ಮನುಷ್ಯನಿಗೆ ಕೊಟ್ಟ ಶಾಪವೆಂದು ತಿಳಿಯಬೇಕಿದೆ. ಗಾಂಧೀಜಿಯವರು ಹೇಗೆ ಭೂಕಂಪನದ ಕಾರಣದಿಂದಾಗಿ ಅಸ್ಪೃಶ್ಯತಾಚರಣೆಗಾಗಿ ಹೇಗೆ ಪಶ್ಚಾತ್ತಾಪ ಪಟ್ಟರೊ ಮತ್ತು ಆತ್ಮಶುದ್ಧಿ ಮಾಡಿಕೊಂಡರೊ ಅದೇರೀತಿ ೨೧ನೇ ಶತಮಾನದ ಈ ತಲೆಮಾರಿನವರು ಉತ್ತರಾಖಂಡದ ಜಲಪ್ರಳಯಕ್ಕಾಗಿ ಪಶ್ಚಾತ್ತಾಪವನ್ನು ಪಡಬೇಕು ಮತ್ತು ಆತ್ಮಶೋಧನೆ ಮಾಡಿಕೊಳ್ಳಬೇಕು.

* * *

ದೇಶ ವಿಭಜನಾ ರೇಖೆ : ಒಂದು ಒಳನೋಟ

– ಸಲೀಲ್ ಮಿಶ್ರಾ

ಭಾರತದ ವಿಭಜನೆಯ ವಿಷಯ ಚರ್ಚೆಗೆ ಬಂದಾಗಲೆಲ್ಲಾ ಒಂದು ಮಾತನ್ನು ಮರೆಯಲಾಗುತ್ತದೆ. ಒಂದು ವಿಭಜನೆಯ, ಹಲವಾರು ವಿಭಜನೆಗಳಾದವೆಂಬುದನ್ನು. ಭಾರತವೆಂದು ಕರೆಯಲ್ಪಡುವ ದೇಶ ಎರಡು ದೇಶಗಳಲ್ಲಿ ವಿಭಜಿತಗೊಂಡಿತು. ಆದರೆ ಇದರೊಂದಿಗೆ ಇನ್ನು ಎರಡು ಪ್ರಮುಖ ಪ್ರದೇಶಗಳಾದ ಪಂಜಾಬ್ ಮತ್ತು ಬಂಗಾಳ ಶತಮಾನಗಳಿಂದ ಬೆಳದು ಬಂದಂಥವೂ ಕೂಡ ವಿಭಜಿಸಲ್ಪಟ್ಟವು. ಒಂದು ರೀತಿಯಲ್ಲಿ ಈ ಪ್ರದೇಶಗಳ ವಿಭಜನೆ ಹೆಚ್ಚು ಗಂಭೀರವಾಗಿತ್ತು; ದುರಂತಮಯ ಪರಿಣಾಮಗಳು ಉಂಟಾಗಿದ್ದವು.

ಪಂಜಾಬ್ ಮತ್ತು ಬಂಗಾಳ ಈ ಎರಡು ಮುಖ್ಯ ಪ್ರದೇಶಗಳು ವಾಯುವ್ಯ ನೈಋತ್ಯ ದಿಕ್ಕಿನ ಗಡಿಯಲ್ಲಿವೆ. ಬಂಗಾಳವು ಬ್ರಿಟಿಷರಿಂದ ವಸಾಹತುಗೊಳಿಸಲ್ಪಟ್ಟ ಮೊದಲನೆಯ ಪ್ರಾಂತ; ಪಂಜಾಬ್ ಕೊನೆಯದು. ಈ ಎರಡು ಪ್ರಾಂತಗಳು ಸಮಾನವಾದ ಅಸ್ಮಿತೆ ಮತ್ತು ಸಂಸ್ಕೃತಿಯನ್ನು ಹೊಂದಿದ್ದವು. ಆ ಪ್ರದೇಶಗಳಲ್ಲಿಯ ಸಂಸ್ಕೃತಿ ಹಲವಾರು ಶತಮಾನಗಳ ನಂತರ ಬೆಳೆದವು ಮತ್ತು ಪ್ರೌಢವಾದವು. ಆದರೆ ೧೮ನೇ ಮತ್ತು ೧೯ನೇ ಶತಮಾನದ ಹೊತ್ತಿಗೆ ಬ್ರಿಟಷರು ಆಕ್ರಮಿಸುವ ವೇಳೆಗೆ ತಮ್ಮದೇ ಪ್ರತ್ಯೇಕವಾದ ಬಂಗಾಳಿ ಸಂಸ್ಕೃತಿ ಮತ್ತು ಪಂಜಾಬಿ ಸಂಸ್ಕೃತಿ ಪ್ರಫುಲ್ಲವಾಗಿ ಅರಳಿ ನಿಂತಿದ್ದವು.

ಆ ಪ್ರದೇಶದ ಸಾಂಸ್ಕೃತಿಕ ಸಮಾನತೆಯೊಂದಿಗೆ ಧಾರ್ಮಿಕ ವಿವಿಧತೆ ಕೂಡ ಇತ್ತು. ಆ ಎರಡು ಪ್ರದೇಶಗಳಲ್ಲಿ ಮುಸಲ್ಮಾನರು ಬಹು ಸಂಖ್ಯಾತರಾಗಿದ್ದರು. ಆದರೆ ಹಿಂದುಗಳ ಸಂಖ್ಯೆಯೂ ಕೂಡ ಗಣನೀಯವಾಗಿತ್ತು. ಬಂಗಾಳದಲ್ಲಿ ಹಿಂದುಗಳ ಸಂಖ್ಯೆ ಶೇ. ೪೪% ಇದ್ದರೆ, ಪಂಜಾಬಿನಲ್ಲಿ ಶೇ. ೩೧% ರಷ್ಟಿತ್ತು. ಎರಡೂ ಪ್ರದೇಶಗಳಲ್ಲಿ ಆಸಕ್ತಿ ಕೆರಳಿಸುವಂತಹ ಸಂಸ್ಕೃತಿ ಮತ್ತು ಧಾರ್ಮಿಕ ಏಕತೆ ಇತ್ತು. ೧೯ನೇ ಶತಮಾನದ ವರೆಗೆ ಆ ಪ್ರದೇಶದ ಧಾರ್ಮಿಕ ವಿವಿಧತೆಯೇ ಆ ಎರಡು ಪ್ರದೇಶಗಳ ವಿಭಜನೆಗೆ ಕಾರಣವಾಗುವುದೆಂದು ಯಾರೂ ಊಹಿಸಿರಲಿಲ್ಲ. ಪಂಜಾಬ್ ಒಂದು ದಿನ ಭೌಗೋಳಿಕವಾಗಿ ಮುಸ್ಲೀಂ ಪಂಜಾಬ್‌ಯೆಂದೂ / ಹಿಂದೂ ಸಿಖ್ಖ್ ಪಂಜಾಬ್‌ಯೆಂದೂ ಬೇರ್ಪಡಿಸಲ್ಪಡುವವೆಂದು ಯೋಚಿಸುವುದು ಅಸಾಧ್ಯವೇ ಆಗಿತ್ತು. ಅದೇ ರೀತಿ ಬಂಗಾಳವು ಕೂಡ ಮುಸ್ಲೀಂ ಬಂಗಾಳವೆಂದು, ಹಿಂದೂ ಬಂಗಾಳವೆಂದೂ ಪುನರಚಿತವಾಗುವುದೆಂದು ಯೋಚಿಸಲು ಸಾಧ್ಯವಿರಲಿಲ್ಲ. ಆ ಎರಡು ಪ್ರದೇಶಗಳಲ್ಲಿಯ ಜನರ ಸಾಂಸ್ಕೃತಿಕ ಜೀವನ ಎಷ್ಟೊಂದು ಬಲವಾಗಿ ಪರಸ್ಪರ ಹೆಣೆಯಲ್ಪಟ್ಟಿತ್ತೆಂದರೆ ಒಂದು ಸರಳ ಭೌಗೋಳಿಕ ವಿಭಜನೆ ಅಸಾಧ್ಯವೆ

ಆಗಿತ್ತು. ಆದರೆ ಇತಿಹಾಸ ಬಹು ವಿಚಿತ್ರ ಸಂಗತಿಗಳನ್ನು ಸೃಷ್ಟಿಸುತ್ತದೆ. ಆ ಸನ್ನಿವೇಶಗಳು ಜನರ ಜೀವನದೊಂದಿಗೆ ಚೆಲ್ಲಾಟವಾಡಿದವು, ಆ ಚೆಲ್ಲಾಟದ ಬಗ್ಗೆ ಊಹಿಸಲು ಸಾಧ್ಯವಿರಲಿಲ್ಲ ಮತ್ತು ಊಹಿಸಲಾಗದಂಥವು ಆಗಿದ್ದವು. ಆ ಚೆಲ್ಲಾಟ ಜನರ ಬದುಕನ್ನು ಶಾಶ್ವತವಾಗಿ ಬದಲಾಯಿಸಿತು.

೧೯೪೭ ಆಗಸ್ಟ್ ಮಾಹೆಯ ಒಂದು ದಿನ ಪಂಜಾಬ್ ಮತ್ತು ಬಂಗಾಳದ ವಿಭಜನೆಯಾಯಿತು. ಮುಸ್ಲಿಂ ಪ್ರದೇಶ ಮತ್ತು ಮುಸ್ಲಿಂಯೇತರ ಪ್ರದೇಶ ಬೇರೆಬೇರೆಯಾದವು. ಈ ಎರಡು ಪ್ರದೇಶಗಳ ಬಗ್ಗೆ ತೀರ ಅಪರಿಚಿತನಾದ ಮತ್ತು ಭಾರತಕ್ಕೂ ಅಪರಿಚಿತನಾದ ವ್ಯಕ್ತಿಯೊಬ್ಬ ಎರಡು ನಕ್ಷೆಗಳನ್ನು ತೆಗೆದುಕೊಂಡು, ಲೇಖನಿಯನ್ನು ಎತ್ತಿದ. ಆ ಎರಡು ಪ್ರದೇಶಗಳ ಜಿಲ್ಲೆಗಳಲ್ಲಿಯ ಎರಡು ಧರ್ಮಾನುಯಾಯಿಗಳ ಅಂಕಿ - ಸಂಖ್ಯೆಗಳತ್ತ ದೃಷ್ಟಿ ಬೀರಿದ ಮತ್ತು ಕಾಗದದ ಮೇಲೆ ವಿಭಜನೆಯ ರೇಖೆಯನ್ನೆಳದ. ಕಾಗದದ ಮೇಲೆ ಎಳೆದ ವಿಭಜನೆಯ ರೇಖೆ ಭೂಮಿಯ ಮೇಲೆ ಎಳೆದ ನೈಜ ರೇಖೆಯಾಯಿತು. ರೇಖೆಯ ಇಕ್ಕೆಲೆಗಳಲ್ಲಿ ಇದ್ದಂಥ ಜನರಿಗೆ ಇದು ಯಾವುದೂ ಗೊತ್ತೇ ಇರಲಿಲ್ಲ. ಈಗ ತಾವೊಂದು ಹೊಸ ರಾಷ್ಟ್ರದ ನಾಗರೀಕರಾಗಿದ್ದೇವೆಂದು ಅವರಿಗೆ ಆಘಾತ ಸ್ವರೂಪವಾಗಿ ಗೊತ್ತಾಯಿತು ಮತ್ತು ತಮ್ಮ ಪಕ್ಕದ ನೆರೆಯವರು ಈಗ ಹೊಸಬರಾಗಿದ್ದಾರೆ ಮತ್ತು ಶತ್ರು ಕೂಡ ಎಂದೆನಿಸಿತು. ಇದು ಹೇಗೆ ಆಯಿತು? ಇದರ ಹಿಂದಿರುವಂಥ ರಹಸ್ಯ, ಪದಬಂಧ ಅರಿಯಬೇಕಾದರೆ ಎರಡು ಪ್ರಶ್ನೆಗಳಿಗೆ ಉತ್ತರಿಸಬೇಕಾಗುತ್ತದೆ. ಮೊದಲನೆಯದು ಭಾರತವನ್ನೇಕೆ ವಿಭಜಿಸಬೇಕಾಯಿತು? ಕಾಂಗ್ರೆಸ್ ಪಕ್ಷ ವಿಭಜನೆಗೆ ತೀವ್ರ ವಿರೋಧವಾಗಿದ್ದರೂ ಅದು ವಿಭಜನೆಗೆ ಏಕೆ ಒಪ್ಪಿಕೊಂಡಿತು? ಎರಡನೆಯದು, ಪಂಜಾಬ್ ಮತ್ತು ಬಂಗಾಳವನ್ನು ವಿಭಜಿಸದೆ ಭಾರತವನ್ನು ಮಾತ್ರ ವಿಭಜಿಸಿ ಮುನ್ನಡೆಯ ಬಹುದಾಗಿರಲಿಲ್ಲವೆ?

೧೯೪೭ರಲ್ಲಿ ಮೊದಲನೆಯ ವಿಭಜನೆ ಅನಿವಾರ್ಯವಾಗಿತ್ತಾದರೂ ಎರಡನೆಯ ವಿಭಜನೆಯನ್ನು ಏಕೆ ಮಾಡಬೇಕಾಯಿತು? ಮೊದಲನೆಯ ಪ್ರಶ್ನೆಗೆ ಮೊದಲು ಉತ್ತರ.

೧೯೪೭ರ ಹೊತ್ತಿಗೆ ಭಾರತೀಯರ ಸಮಸ್ಯಗೆ ಪರಿಹಾರವಿಲ್ಲವೆಂದು ಸ್ಪಷ್ಟವಾಗಿತ್ತು. ಸಮಸ್ಯೆಗೆ ಸಂಬಂಧಿಸಿದ ಎಲ್ಲ ಪ್ರಮುಖ ಪಕ್ಷಗಳಲ್ಲಿ ಅಂದರೆ ಬ್ರಿಟಿಷ್ ಸರಕಾರ, ಕಾಂಗ್ರೆಸ್, ಮತ್ತು ಮುಸ್ಲಿಂ ಲೀಗ್ ಇವುಗಳ ಮಧ್ಯ ಯಾವುದೇ ಒಪ್ಪಂದ ಆಗಲು ಸಾಧ್ಯವಿಲ್ಲವೆಂದು ಅನಿಸಿತ್ತು. ಅಖಂಡ ಹಿಂದೂಸ್ಥಾನಕ್ಕೆ ಅಧಿಕಾರವನ್ನು ಹಸ್ತಾಂತರಿಸಲು ಬ್ರಿಟಿಷರು ಬಯಸಿದ್ದರು ತನ್ಮೂಲಕ ತನ್ನ ಧೀರ್ಘಾವಧಿಯ ಹಿತವನ್ನು ಭಾರತವೇ ನೋಡಿಕೊಳ್ಳಬೇಕೆಂದು ಅವರು ಬಯಸಿದ್ದರು. ಆದರೆ ಕಾಂಗ್ರೆಸ್ ಮೊದಲು ಸ್ವಾತಂತ್ರ್ಯವನ್ನು ಬಯಸಿತ್ತು; ನಂತರ ಮುಸ್ಲಿಂ ಲೀಗಿನ ವಿಭಜನೆಯ ಬೇಡಿಕೆಯನ್ನು ತಾನು ಪರಿಶೀಲಿಸುವುದಾಗಿ ಹೇಳಿತ್ತು. ಜಿನ್ನಾರ ಮುಖಂಡತ್ವದ ಮುಸ್ಲೀಂ ಲೀಗ್ ಮೊದಲು ವಿಭಜನೆಯಾಗಬೇಕು ಎಂದು ಹಠಮಾಡಿತು. ಯಾವುದೇ ಪ್ರಕಾರದ ಸ್ವಾತಂತ್ರ್ಯಕ್ಕೆ ವಿಭಜನೆ ಅತ್ಯಾಗತ್ಯವಾದ ಕರಾರೆಂದು ಭಾವಿಸಿತು. ಹೊಸ ಬ್ರಿಟಿಷ್ ವೈಸರಾಯ್ ಲಾರ್ಡ್ ಮೌಂಟ್ ಬ್ಯಾಟನ್ ಅನೇಕ ಪ್ರಕಾರದ ಯೋಜನೆಗಳನ್ನು

ಮುಂದಿಟ್ಟರು, ಅದರಲ್ಲಿಯ ಕೆಲವು ದೇಶದ ವಿಭಜನೆಗಿಂತಲೂ ಕೆಟ್ಟದಾಗಿದ್ದವು ಎಂಬುದು ಕಾಂಗ್ರೆಸ್ಸಿನ ಅಭಿಪ್ರಾಯವಾಗಿತ್ತು. ಮೌಂಟ್ ಬ್ಯಾಟನ್ ಪ್ರಸ್ತಾಪಿಸಿದ ಯೋಜನೆಗಳಲ್ಲಿ 'ರಾಷ್ಟ್ರಗಳ ಸಮೂಹ' ಎಂಬ ಯೋಜನೆಯೊಂದಿತ್ತು. ಒಂದು ವೇಳೆ ಈ ಯೋಜನೆಯನ್ನು ಕಾರ್ಯಗತ ಮಾಡಿದ್ದರೆ ಭಾರತವನ್ನು ಅನೇಕ ಚಿಕ್ಕ – ಚಿಕ್ಕ ರಾಜ್ಯಗಳ ಸಮೂಹವನ್ನಾಗಿ ಪರಿವರ್ತಿಸುತ್ತಿತ್ತು. ಆಗ ಇದ್ದ ಸುಮಾರು ೫೬೫ ಸ್ಥಾನೀಯ ಸಂಸ್ಥೆಗಳು ಭಾರತದಿಂದ ಬೇರ್ಪಡುವ ಸಾಧ್ಯತೆ ಇತ್ತು. ಹೀಗೆ ಅದು ಭಾರತವನ್ನು ಸಂಪೂರ್ಣವಾಗಿ ಒಡೆದು ಹಾಕುತ್ತಿತ್ತು. ಈ ಪರಿಸ್ಥಿತಿಯೊಂದಿಗೆ ಹೋಲಿಕೆ ಮಾಡಿದ್ದಲ್ಲಿ ಪಾಕಿಸ್ತಾನ ಮತ್ತು ಭಾರತ ಎಂದು ವಿಭಜನೆಗೊಳ್ಳುವುದು ಕಡಿಮೆ ಕೆಡಕಿನದು ಎಂದು ಕಾಂಗ್ರೆಸ್ಸಿಗೆ ತೋರಿತು.

ಆದರೆ ಪಂಜಾಬ್ ಮತ್ತು ಬಂಗಾಳನ್ನು ಏಕೆ ಆಂತರಿಕವಾಗಿ ವಿಭಜಿಸಬೇಕು? ಈ ಮೊದಲೆ ಹೇಳಿದಂತೆ ಆ ಎರಡೂ ಪ್ರದೇಶಗಳಲ್ಲಿ ಏಕೀ ಭಾವವಿತ್ತು. ಮತ್ತು ಅವುಗಳಲ್ಲಿ ಧರ್ಮಾತೀತವಾದ ಏಕ ಘಟಕತ್ವವಿತ್ತು. ಆದ್ದರಿಂದ ಪಂಜಾಬ್ ಮತ್ತು ಬಂಗಾಳದಲ್ಲಿ ಸ್ಪಷ್ಟವಾಗಿ ಮುಸ್ಲಿಂ ಪ್ರದೇಶವೆಂದೋ ಮತ್ತು ಹಿಂದೂ ಪ್ರದೇಶವೆಂದೋ ವಿಭಜಿಸವುದು ಸುಲಭವಾಗಿರಲಿಲ್ಲ.

ಕೊನೆಗೆ ಪಂಜಾಬ್ ಮತ್ತು ಬಂಗಾಳದ ವಿಭಜನೆ ಮುಸ್ಲಿಂ ಲೀಗ್‌ನ ಪಾಕಿಸ್ತಾನದ ಬೇಡಿಕೆಯಲ್ಲಿ ನಿಹಿತವಾಗಿತ್ತು ಭಾರತೀಯ ಮುಸ್ಲಿಮರು ಒಂದು ರಾಷ್ಟ್ರದ ಸ್ವರೂಪದಲ್ಲಿದ್ದಾರೆ. ಆದ್ದರಿಂದ ಅವರಿಗೆ ತಮ್ಮದೇಯಾದ ಪ್ರತ್ಯೇಕ ದೇಶ ಬೇಕಿತ್ತು. ಆದರೆ ಪಾಕಿಸ್ತಾನದ ರಚನೆಗಾಗಿ ಇದ್ದ ಬೇಡಿಕೆಯ ಪ್ರದೇಶದಲ್ಲಿ ಸಿಂಧ್ ಮತ್ತು ವಾಯುವ್ಯ ಗಡಿರಾಜ್ಯಗಳನ್ನು ಬಿಟ್ಟರೆ ಪಂಜಾಬ್ ಮತ್ತು ಬಂಗಾಳದಲ್ಲಿ ಗಣನೀಯ ಸಂಖ್ಯೆಯ ಮುಸ್ಲೀಂಯೆತರರು ಇದ್ದರು. ಶೇ ೪೦ ರಿಂದ ೪೫ ರಷ್ಟು ಹಿಂದೂಗಳು ಬಂಗಾಳದಲ್ಲಿದ್ದರು ಮತ್ತು ಹಿಂದು ಹಾಗೂ ಸಿಖ್ಖರು ಪಂಜಾಬ್‌ನಲ್ಲಿದ್ದರು, ಮುಸ್ಲಿಂ ಲೀಗನ ಪ್ರಕಾರ ಒಂದು ವೇಳೆ ಮುಸ್ಲಿಂರು ಮುಸ್ಲಿಂಯೇತರರೊಂದಿಗೆ ಇರದಾದ ಪಕ್ಷದಲ್ಲಿ ಗಣನೀಯ ಸಂಖ್ಯೆಯಲ್ಲಿರುವ ಮುಸ್ಲಿಂಯೇತರರು ಮುಸ್ಲಿಂ ದೇಶವಾದ ಪಾಕಿಸ್ತಾನದಲ್ಲಿ ಇರಬಹುದೆ? ಇರುವಂತೆ ಒತ್ತಾಯಿಸಬಹುದೆ?

ಆದ್ದರಿಂದ ೧೯೪೭ರಲ್ಲಿ ಪಂಜಾಬ್ ಮತ್ತು ಬಂಗಾಳವನ್ನು ವಿಭಜಿಸಬೆಕೇಂದು ತೀರ್ಮಾನಿಸಲಾಯಿತು. ಜುಲೈ ೧೯೪೭ರಲ್ಲಿ ಎರಡು ಗಡಿ ನಿರ್ಧಾರಕ ಆಯೋಗಗಳನ್ನು ರಚಿಸಲಾಯಿತು, ಒಂದು ತಿಂಗಳ ಅವಧಿಯೊಳಗಾಗಿ ಈ ಆಯೋಗಗಳು ಪಂಜಾಬ್ ಮತ್ತು ಬಂಗಾಳ ರಾಜ್ಯಗಳಲ್ಲಿ ಧರ್ಮದ ಆಧಾರದ ಮೇಲೆ ರೇಖೆಯನ್ನು ಎಳೆಯುವ ಕೆಲಸ ಮಾಡಬೇಕಿತ್ತು. ಈ ಕೆಲಸದ ಅಗಾಧ ಪರಿಣಾಮದ ಬಗ್ಗೆ ಬ್ರಿಟಿಷ್ ಸರಕಾರಕ್ಕಾಗಲೀ ಅಥವಾ ಎರಡು ದೇಶಗಳ ರಾಜಕೀಯ ಮುಖಂಡರಗಳಿಗಾಗಲಿ ತಿಳಿದಿತ್ತೇ ಎಂಬ ಸಂದೇಹ ಉಂಟಾಗುತ್ತದೆ. ವಿಭಜನೆಯ ರೇಖೆ ಎಂದರೆ ೪೦ ಕೋಟಿ ಜನಸಂಖ್ಯೆ ಇರುವ ದೇಶವನ್ನು ಎರಡುವರೆ ತಿಂಗಳೊಳಗಾಗಿ ವಿಭಜಿಸುವುದಾಗಿತ್ತು; ಗಡಿಯನ್ನು ಗುರುತಿಸಬೇಕಾಗಿತ್ತು; ಸೇನಾ ಬಲವನ್ನು ವಿಭಜಿಸಬೇಕಾಗಿತ್ತು; ಕೇಂದ್ರದಲ್ಲಿಯ ನಾಗರೀಕ ಇಲಾಖೆಗಳಾದ – ರೈಲ್ವೆ, ಟೆಲಿಗ್ರಾಫ್, ರೇಡಿಯೋ, ಇನ್‌ಕಮ್‌ಟ್ಯಾಕ್ಸ್ ಇತ್ಯಾದಿ ಮುಂತಾದ

ಕಡೆಯಿದ್ದ ನೌಕರರನ್ನು ವಿಭಜಿಸಬೇಕಾಗಿತ್ತು; ಆ ಎರಡು ದೇಶದ ಸರಕಾರಗಳ ಜವಾಬ್ದಾರಿ ಮತ್ತು ಆಸ್ತಿಯನ್ನು ಹಂಚಬೇಕಿತ್ತು. ಆದರೆ ನಿಃಸಂಶಯವಾಗಿಯೂ ಅತ್ಯಂತ ಕಷ್ಟಕರವಾದ ಕೆಲಸ. ಗಡಿಯ ರೇಖೆಗಳನ್ನು ಗುರುತಿಸುವುದಾಗಿತ್ತು.

ಎರಡೂ ಗಡಿ ಆಯೋಗಗಳಲ್ಲಿ ಸಮಾನವಾದ ಸಂಖ್ಯೆಯ ಸದಸ್ಯರಿದ್ದರು. ಅವರೆಲ್ಲರೂ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗಿನಿಂದ ಆರಿಸಲ್ಪಟ್ಟವರಾಗಿದ್ದರು. ಕೊನೆಗಳಿಗೆಯಲ್ಲಿ ಉದ್ಭವಿಸಬಹುದಾದ ಸಮಸ್ಯೆಯನ್ನು ತಪ್ಪಿಸಲು ಆ ಎರಡೂ ಆಯೋಗಗಳನ್ನು ಸರ್ ಸಿರಿಲ್ ರ್ಯಾಡ್ ಕ್ಲಿಫ್ (Sir Cyril rad cleffe) ಎಂಬ ಬ್ರಿಟೀಷ್ ಬ್ಯಾರಿಸ್ಟರ್ ಅಧ್ಯಕ್ಷತೆಯ ಅಡಿಯಲ್ಲಿ ಇರಿಸಲಾಗಿತ್ತು. ಈ ಪಾತ್ರವನ್ನು ನಿರ್ವಹಿಸಲು ಸರ್ ಸಿರಿಲ್ ರ್ಯಾಡ್ ಕ್ಲೀಫ್‌ರವರಿಗೆ ಇದ್ದ ಪ್ರಮುಖ ಅರ್ಹತೆ ಏನೆಂದರೆ ಅವರು ಈ ಮೊದಲು ಎಂದೂ ಭಾರತದ ನೆಲದ ಮೇಲೆ ಕಾಲನ್ನಿಟ್ಟಿರಲಿಲ್ಲ ಮತ್ತು ಭಾರತದ ಸಂಸ್ಕೃತಿ ಮತ್ತು ಪರಿಸ್ಥಿತಿಯ ಬಗ್ಗೆ ಅವರು ತುಂಬ ಅಪರಿಚಿತರಾಗಿದ್ದರು. ಭಾರತದೊಂದಿಗಿನ ಅವರ ಪೂರ್ಣ ಅಪರಿಚಿತತನವೆ ಅವರ ದೊಡ್ಡ ಅರ್ಹತೆಯಾಯಿತು. ಭಾರತದ ನೆಲವನ್ನು ಶಸ್ತ್ರಚಿಕಿತ್ಸೆ ಮಾಡುವಾಗ ಅವರು ನಿರ್ದಾಕ್ಷಿಣ್ಯವಾಗಿ ತಟಸ್ಥವಾಗಿ ಇರಬಹದು ಎಂಬ ಗ್ರಹಿಕೆ. ಆದ್ದರಿಂದ ಸಾಂಸ್ಕೃತಿಕ ಮತ್ತು ಇನ್ನಿತರ ವಿಷಯಗಳು ವಿಭಜಿಸುವ ರೇಖೆಯನ್ನು ಎಳೆಯುವಾಗ ಅಡ್ಡಿಬರುವ ಸಂಭವಿರಲಿಲ್ಲ ಶಸ್ತ್ರಚಿಕಿತ್ಸೆಯ ಭೀಕರತೆಯ ಯಾವ ನೋವನ್ನೂ ಅನುಭವಿಸದೆ ರ್ಯಾಡ್ ಕ್ಲಿಫ್ ವೈದ್ಯಕೀಯ ಕುಶಲತೆಯಿಂದ ತಮ್ಮ ಕೆಲಸವನ್ನು ಮಾಡಬಹುದಾಗಿತ್ತು.

ಗಡಿ ಆಯೋಗಗಳಿಗೆ ಕೊಡಲಾಗಿದ್ದ ಮಾರ್ಗದರ್ಶಿ ಸೂತ್ರಗಳು ಸರಳವಾಗಿದ್ದವು; ಮುಸ್ಲಿಂರು ಮತ್ತು ಮುಸ್ಲಿಂಯೇತರರು ಒತ್ತಾಗಿ ಇರುವ ಪ್ರದೇಶವನ್ನು ಗುರುತಿಸಿ ಖಚಿತಪಡಿಸಿಕೊಂಡು ಎರಡು ದೇಶಗಳ ಗಡಿರೇಖೆಯನ್ನು ಗುರುತಿಸುವುದು; ಧಾರ್ಮಿಕ ಸಮುದಾಯಗಳು ಒತ್ತಾಗಿ ಇರುವ ಪ್ರದೇಶವನ್ನಲ್ಲದೆ "ಇನ್ನಿತರ ಸಂಗತಿಗಳನ್ನು" ಗಮನಿಸಬೇಕು. "ಇನ್ನಿತರ ಸಂಗತಿಗಳು" ಯಾವುವು ಎಂಬುದನ್ನು ಯಾರೂ ಸ್ಪಷ್ಟವಾಗಿ ತಿಳಿಸಲಿಲ್ಲ. ಆದರೆ ನದಿಗಳನ್ನು, ಕಾಲುವೆಗಳನ್ನು, ಭೌಗೋಳಿಕ ಹಾಗೂ ಸ್ವಾಭಾವಿಕ ಸಂಗತಿಗಳನ್ನು ಮತ್ತು ಆರ್ಥಿಕ ಜೀವನ ಮುಂತಾದವುಗಳನ್ನು ಮನದಲ್ಲಿ ಇಟ್ಟುಕೊಳ್ಳಲಾಗುವುದೆಂದು ಗ್ರಹಿಸಲಾಗಿತ್ತು. ಆದರೆ "ಇನ್ನಿತರ ಸಂಗತಿಗಳ" ಗಣನೆಯನ್ನು ಗರಿಷ್ಠ ಮಟ್ಟದಲ್ಲಿ ಇಟ್ಟುಕೊಳ್ಳಬೇಕೆಂದು ರ್ಯಾಡ್ ಕ್ಲೀಫ್‌ಗೆ ಬೇಗನೆ ಸ್ಪಷ್ಟವಾಯಿತು. ಸ್ವಾಭಾವಿಕ ಭೌಗೋಳಿಕ ಸನ್ನಿವೇಶಗಳನ್ನು ಯೋಗ್ಯ ಗಡಿಗಳೆಂದು ಪರಿಗಣಿಸಬಹುದೆ ಎಂದು ಅವರು ತಿಳಿಯಬಯಸಿದರು. ಆಗ ಅವರಿಗೆ ಭಾರತೀಯ ನದಿಗಳು ಸ್ವಾಭಾವಿಕ ಗಡಿಯಂತೆ ತೋರುತ್ತಿದ್ದರೂ ಕೂಡ ಆಗಾಗ್ಗೆ ಅವು ತಮ್ಮ ದಿಕ್ಕನ್ನು ಬದಲಾಯಿಸುತ್ತವೆ. ಆದ್ದರಿಂದ ರೇಖೆ ಎಳೆಯುವಾಗ ಅವು ನಂಬಿಕೊಳ್ಳಬಹುದಾದ ಗಡಿಯೆಂದು ಎಣಿಸಲಾಗದು ಎಂದು ಅವರಿಗೆ ಹೇಳಲಾಯಿತು. ಆದ್ದರಿಂದ ಧರ್ಮದ ಆಧಾರದ ಮೇಲೆಯೇ ವಿಭಜನೆ ಆಗಬೇಕಾಯಿತು.

ಧರ್ಮದ ಆಧಾರದ ಮೇಲೆ ಒತ್ತಾಗಿರುವ ಜನಸಂಖ್ಯೆಗೆ ಅನುಗುಣವಾಗಿ ಗುರುತಿನ ರೇಖೆ ಎಳೆಯುವುದು ಒಂದು ಅಸಾಧ್ಯವಾದ ಕೆಲಸವೆಂದು ರ್ಯಾಡ್

ಕ್ಲಿಫ್‌ರವರಿಗೆ ಮನವರಿಕೆಯಾಯಿತು. ಏಕೆಂದರೆ ಅಂತಹ ಒತ್ತಾದ ಜನ ಸಮೂಹದ ಪ್ರದೇಶವೆಂದು ಪ್ರತ್ಯೇಕವಾಗಿರಲಿಲ್ಲ. ಏಕೆಂದರೆ ಧರ್ಮದ ಸ್ವರೂಪ ಮತ್ತು ಭೌಗೋಳಿಕ ಅಸ್ತಿತ್ವವನ್ನು ಆಧಾರವಾಗಿ ಇಟ್ಟಿಕೊಂಡು ಎರಡೂ ಪ್ರದೇಶಗಳಲ್ಲಿ ತೃಪ್ತಿಕರವಾಗಿ ವಿಭಜನೆಯ ಗೆರೆಯನ್ನು ಎಳೆಯುವುದು ಸಾಧ್ಯವಿರಲಿಲ್ಲ, ಅನೇಕ ಜಿಲ್ಲೆಗಳು ವಿವಾದಾತ್ಮಕ ಮತ್ತು ಪರಸ್ಪರ ವಿರೋಧಿ ಬೇಡಿಕೆಗಳ ತಾಣವಾಗಿದ್ದವು. ಉದಾ:- ಬಂಗಾಳದಲ್ಲಿಯ ಚಿತ್ತಗಾಂಗ್ ಜಿಲ್ಲೆಯು ಮುಸ್ಲಿಂ ಬಹು ಸಂಖ್ಯಾತರನ್ನು ಹೊಂದಿತ್ತು. ಆದರೆ ಆ ಜಿಲ್ಲೆಯು ಚಿತ್ತಗಾಂಗ್ ಬೆಟ್ಟದ ಪ್ರದೇಶವನ್ನು ಹೊಂದಿತ್ತು, ಅಲ್ಲಿಯ ಜನಸಂಖ್ಯೆಯಲ್ಲಿ ಶೇ. ೯೭ರಷ್ಟು ಜನರು ಹಿಂದುಗಳು ಮತ್ತು ಬೌದ್ಧರು ಆಗಿದ್ದರು. ಇಡೀ ಚಿತ್ತಗಾಂಗ್ ಜಿಲ್ಲೆ ಪಾಕಿಸ್ತಾನಕ್ಕೆ ಹೋಗುವದೆಂದು ಜನತೆಗೆ ಗೊತ್ತಾದೊಡನೆ ಸ್ಥಳೀಯ ಜನರು ಬಂಡಾಯವೆದ್ದರು. ನೆಹರು ಮತ್ತು ಪಟೇಲ್ ಈ ತೀರ್ಮಾನದ ವಿರುದ್ಧ ಮೌಂಟ್ ಬ್ಯಾಟನರಲ್ಲಿ ಪ್ರತಿಭಟಿಸಿದರು. ರ್‍ಯಾಡ್ ಕ್ಲಿಫ್ ವಿಭಜನೆಯನ್ನು ಮಾಡದಿರಲು ನಿರಾಕರಿಸಿದರು. ಅವರು ಕೊಟ್ಟ ಕಾರಣವೇನೆಂದರೆ ಆ ಜಿಲ್ಲೆ ಒಟ್ಟಾರೆಯಾಗಿ ಒಂದೇ ಆರ್ಥಿಕ ಜೀವನವನ್ನು ಹೊಂದಿತ್ತು. ಪೂರ್ವ ಬಂಗಾಳದಲ್ಲಿ ಜಲವಿದ್ಯುತ್‌ಗೆ ಚಿತ್ತಗಾಂಗ್‌ನಲ್ಲಿಯ ಬೆಟ್ಟದ ಪ್ರದೇಶ ಒಂದೇಯಾಗಿತ್ತು.

ಗಡಿ ಆಯೋಗ ತಮ್ಮ ಬಗ್ಗೆ ನ್ಯಾಯವಾಗಿಲ್ಲವೆಂದು ಮುಸ್ಲಿಮ್ ಲೀಗಿನ ನಾಯಕರು ಕೂಡ ದೂರನ್ನಿತ್ತರು. ಪಾಕಿಸ್ತಾನದ ಭಾವಿ ಪ್ರಧಾನ ಮಂತ್ರಿ ಲೀಯಾಖತ್ ಅಲಿ ಖಾನ್ ಗಡಿ ಆಯೋಗ ತಮಗೆ ಕಾಶ್ಮೀರವನ್ನು ತಪ್ಪಿಸಿದೆ ಎಂದು ಕಟುವಾಗಿ ಟೀಕಿಸಿದರು. ೧೯೪೭ರ ವರೆಗೆ ಕಾಶ್ಮೀರ ಕಡೆ ಹೋಗಲು ಕೇವಲ ಎರಡು ಮುಖ್ಯ ದಾರಿಗಳಿದ್ದವು. ವ್ಹಯಾ ರಾವಲ್ಪಿಂಡಿ ಸಿಯಾಲ್ ಕೋಟ್. ಈ ಎರಡು ಪ್ರದೇಶಗಳು ಪಾಕಿಸ್ತಾನಕ್ಕೆ ಹೋಗುವುದಾಗಿತ್ತು. ಈ ಭೌಗೋಳಿಕ ಸಂಪರ್ಕವು ಪಾಕಿಸ್ತಾನ ಕಾಶ್ಮೀರವನ್ನು ಕೇಳಲು ಅರ್ಹನನ್ನಾಗಿ ಮಾಡಿತು. ಆದರೆ ಕೊಂಚ ಅಭಿವೃದ್ಧಿ ಹೊಂದಿದ ಮೂರನೆಯ ದಾರಿಯೊಂದಿತ್ತು. ಇದು ಪಠಾಣ್‌ಕೋಟ್ ಬಳಿ ಗುರುದಾಸಪೂರ್ ಜಿಲ್ಲೆಯಲ್ಲಿತ್ತು. ಆದರೆ ಇಡೀ ಗುರುದಾಸಪೂರ್ ಜಿಲ್ಲೆಯಲ್ಲಿ ಮುಸ್ಲಿಮರು ಬಹುಸಂಖ್ಯೆಯಲ್ಲಿದ್ದರು. ಆ ಪ್ರದೇಶದಲ್ಲಿ ಅನೇಕ ಹಿಂದು ಬಹುಸಂಖ್ಯೆಯ ಮತ್ತು ಮುಸ್ಲಿಂ ಬಹುಸಂಖ್ಯೆಯ ಪ್ರದೇಶಗಳಿದ್ದವು. ಗುರುದಾಸಪೂರ್ ಜಿಲ್ಲೆಯಲ್ಲಿ ಪ್ರದೇಶಗಳನ್ನು ಗುರುತಿಸುವಾಗ ಭಾರತಕ್ಕೆ ಅಗತ್ಯವಾದ ಕಾಶ್ಮೀರದೊಂದಿಗಿನ ಸಂಪರ್ಕವನ್ನು ಒದಗಿಸಬಹುದಾಗಿತ್ತು. ಗುರುದಾಸಪೂರದಲ್ಲಿಯ ಹಿಂದೂ ಬಹುಸಂಖ್ಯೆಯನ್ನು ಭಾರತದೊಂದಿಗೆ ಸೇರಿಸುವ ಈ ತೀರ್ಮಾನ ಭಾರತಕ್ಕೆ ಕಾಶ್ಮೀರದೊಂದಿಗೆ ಭೌಗೋಳಿಕ ಸಂಪರ್ಕವನ್ನು ಒದಗಿಸಿಕೊಟ್ಟಿತ್ತು. ೧೯೪೭ ಅಕ್ಟೋಬರ್‌ನಲ್ಲಿ ನಡೆದ ಭಾರತ - ಪಾಕ್ ಯುದ್ಧಕಾಲದಲ್ಲಿ ಈ ದಾರಿ ಭಾರತೀಯ ಸೇನೆ ಶ್ರೀನಗರ ತಲುಪಲು ತುಂಬ ಉಪಯೋಗಕರವಾಯಿತು ಮತ್ತು ಅದರಿಂದಾಗಿ ಪಾಕಿಸ್ತಾನಿ ಸೈನ್ಯ ಅದನ್ನು ಆಕ್ರಮಿಸದಂತೆ ತಡೆಯಲೂ ಅನುಕೂಲವಾಯಿತು. ಗುರುದಾಸಪೂರ ಜಿಲ್ಲೆಯ ಕೆಲವು ಭಾಗಗಳನ್ನು ಭಾರತಕ್ಕೆ ಕೊಟ್ಟ ಈ ಸಂಗತಿ ಅನೇಕ ಕಾಲದವರೆಗೆ ಪಾಕಿಸ್ತಾನಿ ಸರಕಾರದೊಂದಿಗೆ ಕಹಿ ಸಂಬಂಧವನ್ನುಂಟು ಮಾಡಿತ್ತು.

ಗಡಿಯ ಆಯೋಗದ ಅಂತಿಮ ವರದಿ ಆಗಸ್ಟ್ ೧೩ ರಕ್ಕೆ ಸಿದ್ಧವಾಗಿತ್ತು. ಆದರೆ ಅದನ್ನು ಭಾರತೀಯ ಮತ್ತು ಪಾಕಿಸ್ತಾನಿ ನಾಯಕರಿಗೆ ಪಾಕಿಸ್ತಾನದ ರಚನೆಯಾದ ನಂತರ ಆಗಸ್ಟ್ ೧೬ರಂದು ತೋರಿಸಲಾಯಿತು. ಒಂದು ರೀತಿಯಲ್ಲಿ ನಾಯಕರಿಗೆ ಸುಳಿವು ಕೊಡಲಾಗಿತ್ತು. ಜುಲೈ ಮಾಹೆಯ ನಂತರ ಯಾವ ಪ್ರದೇಶ ಭಾರತಕ್ಕೆ ಮತ್ತು ಯಾವುದು ಪಾಕಿಸ್ತಾನಕ್ಕೆ ಎಂಬ ಬಗ್ಗೆ ಗಾಳಿ ಸುದ್ದಿಗಳು ಹರಡಲಾರಂಭಿಸಿದವು, ಈ ಎಲ್ಲ ಸುದ್ದಿಗಳು ಆಯಾ ಪ್ರದೇಶದಲ್ಲಿಯ ಅಲ್ಪಸಂಖ್ಯಾತ ಹಿಂದು, ಮುಸ್ಲಿಂ ಮತ್ತು ಸಿಖ್ಖರು ತುಂಬ ಅಸುರಕ್ಷತೆಯನ್ನು ಅನುಭವಿಸುವಂತೆ ಮಾಡಿದವು. ನೀರಿಕ್ಷಿಸಲಾಗಿದ್ದ ಹಿಂಸೆ ಎಲ್ಲಾ ಕಡೆಗೂ ಹಬ್ಬಲಾರಂಭಿಸಿತು, ಮುಖ್ಯವಾಗಿ ಪಂಜಾಬಿನಲ್ಲಿ. ಪಶ್ಚಿಮ ಪಂಜಾಬಿನಲ್ಲಿ ಮುಸ್ಲಿಂರು ಹಿಂದುಗಳನ್ನು ಮತ್ತು ಸಿಖ್ಖರನ್ನು ಹತ್ಯಮಾಡಲಾರಂಭಿಸಿದರು ಅದೇ ರೀತಿ ಸಿಖ್ಖರೂ ಮತ್ತು ಹಿಂದುಗಳು ಪೂರ್ವ ಪಂಜಾಬಿನಲ್ಲಿ ಮುಸ್ಲಿಂರ ಹತ್ಯಮಾಡಲು ಪ್ರಾರಂಭಿಸಿದರು. ಭಯ, ಅಸುರಕ್ಷಿತತೆ ಮತ್ತು ದ್ವೇಷದಿಂದಲೆ ಅವು ಹುಟ್ಟಿದವಾಗಿದ್ದವು. ಇನ್ನು ಕೆಲವು ಸಂದರ್ಭಗಳಲ್ಲಿ ಹತ್ಯೆ ರಣನೀತಿಯ ಲೆಕ್ಕಚಾರದಿಂದ ಆಗುತ್ತಿತ್ತು. ಎರಡೂ ಧರ್ಮಗಳ ಜನರ ಭೂಮಿಯನ್ನು ಮತ್ತು ಮನೆ ಮಠವನ್ನು ಖಾಲಿಮಾಡಿಸುವ ಉದ್ದೇಶದಿಂದಲೆ ಹತ್ಯೆಯಾಗಲು ಪ್ರಾರಂಬಿಸಿತು. ವಿಭಜನೆಯಿಂದಾಗಿ ಗಡಿದಾಟಿ ಬರುವ ತಮ್ಮ ಧರ್ಮದ ಬಾಂಧವರಿಗೆ ಸ್ಥಳ ಒದಗಿಸಿಕೊಡಬೇಕೆಂಬ ಉದ್ದೇಶ ಇಂಥಹ ಹತ್ಯಗಳ ಹಿಂದೆ ಇತ್ತು.

ಕೇವಲ ಕೆಲವೆ ಕೆಲವು ರಾಜಕೀಯ ಮುಖಂಡರ ಹೊರತಾಗಿ ವಿಭಜನೆಯಿಂದ ಯಾರಿಗೂ ಸಮಾಧಾನವಾಗಿರಲಿಲ್ಲ, ಸಂತೋಷವೂ ಇರಲಿಲ್ಲ. ಭಾವನಾತ್ಮಕ ಮತ್ತು ಮಾನಸಿಕ ಸಂಗತಿಗಳು ಪ್ರಧಾನವಾದವು. ಪಂಜಾಬಿನ ಆತ್ಮದಂತಿದ್ದ ಲಾಹೋರ್ ಪಾಕಿಸ್ತಾನಕ್ಕೆ ಹೋಯಿತೆಂದು ಹಿಂದುಗಳಿಗೆ ಮತ್ತು ಪೂರ್ವ ಪಂಜಾಬಿನ ಸಿಖ್ಖರಿಗೆ ಆಘಾತಕರವಾಗಿ ತಿಳಿದುಬಂದಿತು. ಲಾಹೋರವಿಲ್ಲದೆ ಪಂಜಾಬ್‌ನ್ನು ಅವರು ಊಹಿಸುವುದು ಕಷ್ಟಕರವಾಯಿತು. ಅದರಂತೆಯ ಪೂರ್ವ ಬಂಗಾಳದ ಮುಸ್ಲಿಂರಿಗೆ ಕಲಕ್ಕತೆ ಇಲ್ಲದ ಬಂಗಾಳವನ್ನು ಊಹಿಸುವುದು ಕಷ್ಟಕರವಾಯಿತು. ಪಶ್ಚಿಮ ಪಂಜಾಬದ ಶೈಕೊಪೂರ ಬಳಿಯ ಗುರುನಾನಕರ ಜನ್ಮಸ್ಥಳವಾದ ನಾನಕಾನ ಸಾಹಿಬ್ ಬಳಿಯಯಿದ್ದ ಸುಪ್ರಸಿದ್ಧ ಗುರುದ್ವಾರವನ್ನು ಸಿಖ್ಖರು ಕಳೆದುಕೊಂಡಿದ್ದರು.

ಐದು ನದಿಗಳ ನಾಡೆಂದು ಪಂಜಾಬ್ ಪರಂಪರಾಗತವಾಗಿ ಗುರುತಿಸಲ್ಪಟ್ಟಿತ್ತು. ಪಂಜಾಬ್ ಅಂದರೇನೆ ಐದು ನದಿಗಳು. ಈಗ ಆ ಐದು ನದಿಗಳಲ್ಲಿ ಮೂರು ನದಿಗಳು – ಬಿಯಾಸ, ಸತ್ಲಜ್, ಮತ್ತು ರಾವಿ ಭಾರತದಲ್ಲಿಯೂ ಇನ್ನೂ ಎರಡು ನದಿಗಳು ಪಾಕಿಸ್ಥಾನದಲ್ಲಿ ಹರಿಯುವವೆಂದು ಅವರಿಗೆ ಗೊತ್ತಾಯಿತು. ಬಂಗಾಳವು ಒಂದು ಸಮಗ್ರ ಆರ್ಥಿಕ ಜೀವನ ವಿಧಾನವನ್ನು ಹೊಂದಿತ್ತು. ಪೂರ್ವ ಬಂಗಾಳದಲ್ಲಿ ಸೆಣಬನ್ನು ಬೆಳೆಯುವ ದೊಡ್ಡ ದೊಡ್ಡ ಪ್ರದೇಶಗಳಿದ್ದವು. ಅವು ಬೆಳದ ಸೆಣಬನ್ನು ಪಶ್ಚಿಮ ಭಾಗದ ಬಂಗಾಳದಲ್ಲಿದ ಸೆಣಬಿನ ಕೈಗಾರಿಕೆಗಳಿಗೆ ಕಚ್ಚಾ ಪದಾರ್ಥವಾಗಿ ಒದಗಿಸುತ್ತಿತ್ತು. ಸೆಣಬನ್ನು ಬೆಳೆಯುವ ಪ್ರದೇಶ ಮತ್ತು ಕೈಗಾರಿಕೆಗಳಿದ್ದ ಪ್ರದೇಶ ಒಂದಕ್ಕೊಂದು ಪೂರಕವಾಗಿದ್ದವು. ಬಂಗಾಳದ ವಿಭಜನೆ ಎಂದರೆ ಸೆಣಬಿನ

ಕೈಗಾರಿಕೆಗಳಿಗೆ ಕಚ್ಚಾಸೆಣಬು ಇಲ್ಲದಂತಾಗುವುದು. ಹೀಗೆ ಕೆಲವು ಜನ ರಾಜಕೀಯ ಮುಖಂಡರ ಹೊರತಾಗಿ ಆ ವಿಭಜನೆ ಅಲ್ಲಿಯ ಜನರಿಗೆ ಯಾವ ದೃಷ್ಟಿಯಿಂದ ನೋಡಿದರೂ ವಿನಾಶಕಾರಿಯಾಯಿತು.

ಆಗಿದ್ದ ನಷ್ಟ ಕೇವಲ ಭಾವನಾತ್ಮಕ ಮತ್ತು ಮಾನಸಿಕವಾಗಿರಲಿಲ್ಲ. ವಿಭಜನಾ ನಂತರದ ಹಿಂಸೆಯಲ್ಲಿ ಮೂರರಿಂದ ೩೦ಲಕ್ಷ ಜನರು ಕೊಲ್ಲಲ್ಪಟ್ಟರು. ಸುಮಾರು ೭೦ ಸಾವಿರ ಸ್ತ್ರೀಯರು ಬಲಾತ್ಕಾರಕ್ಕೆ ಒಳಗಾದರು. ಅನೇಕ ಸ್ತ್ರೀಯರನ್ನು ಅಪಹರಿಸಲಾಯಿತು. ೧೨ಕೋಟಿಗೂ ಹೆಚ್ಚಾಗಿ ಜನರು ತಮ್ಮ ಪ್ರಾಚೀನ ವಾಸಸ್ಥಳವನ್ನು ಬಿಡಬೇಕಾಯಿತು ಮತ್ತು ಅಪರಿಚಿತವಾದ ಸ್ಥಳಕ್ಕೆ ಹೋಗಿ ವಾಸಮಾಡಬೇಕಾಯಿತು. ರ್‍ಯಾಡ್ ಕ್ಲಿಫ್‌ಎಳೆದ ರೇಖೆಯ ಎರಡೂ ಬಾಜುವಿನ ಪಂಜಾಬಿಗಳು ಇವತ್ತಿನವರೆಗೂ ಕೂಡ ಆ ನೋವನ್ನು ಅನುಭವಿಸುತ್ತಿದ್ದಾರೆ. ಮತ್ತು ವಿಭಜನೆಯ ಗಾಯವನ್ನು ಅನುಭವಿಸುತ್ತಿದ್ದಾರೆ.

ದೇಶದ ವಿಭಜನೆಯಲ್ಲಿ ಅಸ್ಮಿತೆಯ ರಾಜಕಾರಣ, ಜನಾಂಗೀಯ ರಾಜಕಾರಣ ವಿದೆ. ಇದರಲ್ಲಿ ಅವಿಚಾರ, ಅಸ್ಥಿರತೆ ಮತ್ತು ಅತಾರ್ಕಿಕತೆ ಅಡಗಿದೆ. ಜನಾಂಗಿಯ ರಾಜಕಾರಣ ಜನರನ್ನು ತಾವು ಮುಸ್ಲಿಂರು, ಹಿಂದುಗಳು ಮತ್ತು ಸಿಖ್ಖರು ಎಂದು ಕರೆದುಕೊಳ್ಳುವಂತೆ ಮಾಡಿತು. ಮತ್ತು ತಮ್ಮ ಜನಾಂಗಿಯ ಅಸ್ಮಿತೆಯೆ ತಮ್ಮ ಜೀವನದ ಮುಖ್ಯ ಅಂಶವೆಂದು ಭಾವಿಸುವಂತೆ ಮಾಡಿತು. ಬೇರೆ ಮಾತುಗಳಲ್ಲಿ ಹೇಳುವುದಾದರೆ ಯಾವ ಧರ್ಮದ ಅನುಯಾಯಿ ಎಂಬುದರ ಮೇಲೆ ಅವರ ಅಸ್ಮಿತೆ ಅವಲಂಬಿಸಿತೆ ಹೊರತು ಯಾವ ಪ್ರದೇಶದಲ್ಲಿ ಅವರು ವಾಸವಾಗಿದ್ದರೆಂಬುದು ಗಮನಕ್ಕೆ ಬರುತ್ತಿರಲಿಲ್ಲ.

ಆದರೆ ಇದ್ದಕ್ಕಿದ್ದಹಾಗೆ ತಮ್ಮ ಮಾತೃಭೂಮಿ ವಿಭಜಿಸಲ್ಪಡುತ್ತಿರುವುದರಿಂದಾಗಿ ಹಿಂದೂಗಳು, ಸಿಖ್ಕರು ಮತ್ತು ಮುಸ್ಲಿಂರಿಗೆ ತಾವು ಪಂಜಾಬಿಗಳು ಮತ್ತು ಬಂಗಾಳಿಗಳು ಮತ್ತು ಪಂಜಾಬಿ ಹಾಗು ಬಂಗಾಳಿಗಳು ಜೀವನದ ಸಂಯುಕ್ತ ಅಂಗವಾಗಿದ್ದರೂ ಕೂಡ ಒಬ್ಬರು ಇನ್ನೊಬ್ಬರಿಂದ ಕಿತ್ತುಕೊಂಡು ಬೇರೆಯಾಗುವಂತೆ ಒತ್ತಾಯಿಸಲಾಗುತ್ತಿದೆ ಎಂದು ಅನಿಸಿತು.

ಹಿಂದಿನ ತಲೆಮಾರಿನವರ ತಪ್ಪು ಮತ್ತು ಮೂರ್ಖತನವನ್ನು ಮುಂದಿನ ಪೀಳಿಗೆಯವರು ಸರಿಪಡಿಸುತ್ತ ಹೋಗಬೇಕೆಂಬುದು ಸಾಮಾನ್ಯವಾದ ತಿಳುವಳಿಕೆ. ದೇಶದ ವಿಭಜನೆ ಒಂದು ಮಹಾ ತಪ್ಪೆಂದೂ ಮಾನವನಿರ್ಮಿತ ಅನಾಹುತವೆಂಬುದೂ ನಿಸ್ಸಂಶಯ. ಅದಕ್ಕಾಗಿ ಲಕ್ಷಾಂತರ ಜನರು ಬೆಲೆಯನ್ನು ತೆತ್ತಬೇಕಾಯಿತು. ಅಂತಿಮವಾಗಿ ಯಾರೂ ಲಾಭ ಪಡೆದವರಿಲ್ಲ. ಪ್ರತಿಯೊಬ್ಬರೂ ಸೋತವರೆ. ಜಯಶೀಲರನ್ನಾಗಿ ಯಾರನ್ನೂ ಉಳಿಸದೆ ಕೇವಲ ಅಪರಾಧಿಗಳನ್ನೇ ಉಳಿಸಿದ ಇಂಥ ಮಾನವ ನಿರ್ಮಿತ ದುರಂತ ಏಕಾಗಬೇಕಿತ್ತು; ಯಾರಿಗೂ ಗೊತ್ತಿಲ್ಲ.

(ಅನು–ಸು.ಕೌ : ಸಾಭಾರ – ಡೆಕ್ಕನ್ ಹೆರಾಲ್ಡ್)

* * *

ಕವಿ, ಕಾವ್ಯ ಕುರಿತು ವಿನೋಬಾ

ವಿನೋಬಾ ಭಾವೆ ಓರ್ವ ಸಂತ, ದಾರ್ಶನಿಕ ಮತ್ತು ಪ್ರವಾದಿ. ವೇದ ಮತ್ತು ಉಪನಿಷತ್ತುಗಳ ವಿದ್ಯಾರ್ಥಿ. ಅವರು ಹದಿನೆಂಟು ಉಪನಿಷತ್ತುಗಳ ಮೇಲೆ ಒಂದು ಗ್ರಂಥ ರಚಿಸಿದ್ದಾರೆ. ಅದರ ಹೆಸರು **ವೇದಾಂತ-ಸುಧಾ**. ಈ ವೇದಾಂತ-ಸುಧಾದಲ್ಲಿ ಈಶಾವಾಸ್ಯೋಪನಿಷತ್ ಬಗ್ಗೆ ಮೂಲ ಸಂಸ್ಕೃತ ಭಾಷೆಯ ಜೊತೆಗೆ ಹಿಂದಿ ಭಾಷೆಯಲ್ಲಿ ಗೂಢಾರ್ಥವನ್ನು ತಿಳಿಸಿದ್ದಾರೆ. ಈಶಾವಾಸ್ಯೋಪನಿಷತ್‌ನಲ್ಲಿಯ ಎಂಟನೆಯ ಶ್ಲೋಕ ಹೀಗಿದೆ:-

ಸ ಪರ್ಯಾಗಾತ್ ಶುಕ್ರ ಮಕಾಯಮ ವ್ರಣಮ್ ಅಸ್ನಾವಿರಮ್ ಶುದ್ಧಮ್ ಪಾಪವಿದ್ಧ

ಕವಿರ್ಮನೀಷೀ ಪರಿಭೂಃ ಸ್ವಯಂ ಭೂಃ ಯಾಥಾತ ಥ್ಯತೋ ತಾರ್ಥನ್ ವೆದಾಧಾತ್ಃ

ಶಾಶ್ವತೀ ಭ್ಯಃ ಸಮಾ ಭಃ

ಈ ಶ್ಲೋಕದ ಅಂತರಾರ್ಥವನ್ನು ವಿನೋಬಾ ಈ ಕೆಳಗಿನಂತೆ ತಿಳಿಸಿದ್ದಾರೆ. ಋಷಿ ಕವಿರ್ಮನಿಷಿ - ಶಬ್ದಗಳ ಮೂಲಕ ಆತ್ಮವಾನ್ ಮನುಷ್ಯನ ಸಾಮರ್ಥ್ಯದ ವರ್ಣನೆ ಮಾಡಿದ್ದಾನೆ ಕವಿ

೧) ಮನದ ಸ್ವಾಮಿ,
೨) ವಿಶ್ವ ಪ್ರೇಮದಿಂದ ತುಂಬಿದ,
೩) ಆತ್ಮ ನಿಷ್ಠಾ,
೪) ಯಥಾರ್ಥ ಭಾಷಿ ಸತ್ಯ
೫) ಶಾಶ್ವತ ಕಾಲದ ಮೇಲೆ ದೃಷ್ಟಿ ಇಡುವವನಾಗಿರುತ್ತಾನೆ.

ಮಂತ್ರದ ಮನನಕ್ಕಾಗಿ ಕೆಳಗೆ ಕಾಣಿಸಿದ ರೀತಿಯಲ್ಲಿ ಅರ್ಥವನ್ನು ಸೂಚಿಸುತ್ತೇನೆ.

೧) ಮನದ ಸ್ವಾಮಿತ್ವ = ಬ್ರಹ್ಮಚರ್ಯ,
೨) ವಿಶ್ವಪ್ರೇಮ = ಅಹಿಂಸೆ,
೩) ಆತ್ಮ ನಿಷ್ಠತೆ = ಅಸ್ತೇಯ,
೪) ಯಥಾರ್ಥ ಭಾಷಿತ್ವ = ಸತ್ಯ,
೫) ಶಾಶ್ವತ ಕಾಲದ ಮೇಲೆ ದೃಷ್ಟಿ = ಅಪರಿಗ್ರಹ.

ಮನೀಷಿ - ಕವಿ ಅಂದರೆ ಮನಸ್ಸಿನ ಮಾಲಿಕ. ಯಾರು ಮನವನ್ನು ಗೆದ್ದಿಲ್ಲವೊ, ಅವನು ಈಶ್ವರನ ಸೃಷ್ಟಿಯ ರಹಸ್ಯವನ್ನು ತಿಳಿಯಲಾರ. ಸೃಷ್ಟಿಯ

ಹೆಸರೇ ಕಾವ್ಯ. ಎಲ್ಲಿಯವರೆಗೆ ಮನವನ್ನು ಗೆಲ್ಲಲಾಗುವುದಿಲ್ಲವೊ, ರಾಗ-ದ್ವೇಷ ಶಾಂತವಾಗುವುದಿಲ್ಲವೊ, ಅಲ್ಲಿಯವರೆಗೆ ಮನುಷ್ಯ ಇಂದ್ರಿಯಗಳ ಗುಲಾಮನೇ ಆಗಿರುತ್ತಾನೆ. ಇಂದ್ರಿಯಗಳ ಗುಲಾಮನಿಗೆ ಈಶ್ವರನ ಸೃಷ್ಟಿ ಹೇಗೆ ಕಾಣಬಲ್ಲದು? ಆ ಬಡಪಾಯಿಯಂತು ತುಚ್ಛ ವಿಷಯ ಸುಖದಲ್ಲಿಯೇ ಮುಳಗಿರುತ್ತಾನೆ. ಈಶ್ವರೀಯ ಸೃಷ್ಟಿ ವಿಷಯ-ಸುಖದಿಂದ ಆಚೆ ಇದೆ. ಆಚೆಯ ಸೃಷ್ಟಿಯ ದರ್ಶನವಾಗದೆ ಕವಿಯಾಗುವುದು ಅಸಂಭವ. ಬಿಲ್ವಮಂಗಲರ ಕಣ್ಣುಗಳು ಅವರ ಇಚ್ಛೆಯ ವಿರುದ್ಧ ವಿಷಯಗಳತ್ತ ಓಡಿ ಹೋಗುತ್ತಿದ್ದವು. ಕಣ್ಣುಗಳನ್ನು ಒಡೆದು ಯಾವಾಗ ಅವರು ಕುರುಡರಾದರೊ ಆಗ ಅವರಿಗೆ ಕಾವ್ಯದ ದರ್ಶನವಾಯಿತು. ಬಾಲಕ ಧ್ರುವ ಘೋರತಪ್ಪಸ್ಸು ಮಾಡುವುದರ ಮೂಲಕ ಯಾವಾಗ ಇಂದ್ರಿಯಗಳನ್ನು ವಶಕ್ಕೆ ತೆಗೆದುಕೊಂಡನೋ ಆಗ ಭಗವಂತನು ತನ್ನ ಕಾವ್ಯಮಯ ಶಂಖದಿಂದ ಅವನ ಕೆನ್ನೆಯನ್ನು ಸವರಿದ ಮತ್ತು ಈ ಸ್ಪರ್ಷದೊಂದಿಗೆ ಆ ಮುಗ್ಧ ಬಾಲಕನ ಮುಖದಿಂದ ಸಾಕ್ಷಾತ್ ವೇದವಾಣಿಯ ರಹಸ್ಯವನ್ನು ವ್ಯಕ್ತಮಾಡುವ ಅದ್ಭುತ ಕಾವ್ಯ ಹೊರಹೊಮ್ಮಿತು. ತುಕರಾಮನು ಯಾವಾಗ ಶರೀರ, ಇಂದ್ರಿಯ ಮತ್ತು ಮನವನ್ನು ಪೂರ್ಣರೂಪದಲ್ಲಿ ಭಂಗಮಾಡಿದನೋ, ಆಗಲೇ ಮಹಾರಾಷ್ಟ್ರಕ್ಕೆ 'ಅಭಂಗ-ವಾಣಿ'ಯ ಲಾಭವಾಯಿತು. ಮನೋನಿಗ್ರಹದ ಪ್ರಯತ್ನದಲ್ಲಿದ್ದಾಗ ಶರೀರದ ಮೇಲೆ ಯಾವಾಗ ಹುತ್ತ ಬೆಳೆಯಿತೋ ಆಗ ಅದರೊಳಗಿಂದ ಆದಿಕಾವ್ಯ (ವಾಲ್ಮೀಕಿ ರಾಮಾಯಣ)ದ ಉದಯವಾಯಿತು; ಇಂದು ನಾವು ಇಂದ್ರಿಯಗಳ ಸೇವೆ ಮಾಡಿಕೊಂಡುಬಿಟ್ಟಿದ್ದೇವೆ. ಆದ್ದರಿಂದ ನಮ್ಮಲ್ಲಿ ಕವಿಯಿಲ್ಲ.

ಪರಿ ಭೂಃ – ಸಮುದ್ರ ಹೇಗೆ ಎಲ್ಲ ನದಿಗಳನ್ನು ತನ್ನ ಹೊಟ್ಟೆಯಲ್ಲಿ ಸೇರಿಸಿಕೊಳ್ಳುತ್ತದೆಯೋ ಅದೇ ಪ್ರಕಾರ ಸಮಸ್ತ ಬ್ರಹ್ಮಾಂಡವನ್ನೂ ತನ್ನ ಪ್ರೇಮದಿಂದ ಮುಚ್ಚುವಷ್ಟು ವ್ಯಾಪಕ ಬುದ್ಧಿ ಕವಿಯಲ್ಲಿರಬೇಕು. ಕಲ್ಲಿನಲ್ಲಿ ಈಶ್ವರನ ದರ್ಶನ ಮಾಡುವುದು ಕಾವ್ಯದ ಕೆಲಸ. ಇದಕ್ಕಾಗಿ ವ್ಯಾಪಕ ಪ್ರೇಮದ ಅವಶ್ಯಕತೆ ಇದೆ. ಜ್ಞಾನೇಶ್ವರ ಮಹಾರಾಜರು ಕೋಣನ ಧ್ವನಿಯಲ್ಲಿ ವೇದದ ಶ್ರವಣ ಮಾಡಲು ಸಾಧ್ಯವಾಯಿತು. ಆದ್ದರಿಂದ ಅವರು ಕವಿ. ವರ್ಷಾ ಪ್ರಾರಂಭವಾಗುತ್ತಲೆ ಕಪ್ಪೆಗಳ ಒಟಗುಟ್ಟುವಿಕೆ ನೋಡಿ ವಶಿಷ್ಠರಿಗೆ ಪರಮಾತ್ಮನ ಕೃಪೆಯ ಮಳೆಯಿಂದ ಕೃತ-ಕೃತ್ಯಾರಾದ ಸತ್ಪುರುಷರೇ ಈ ಕಪ್ಪೆಗಳ ರೂಪದಲ್ಲಿ ತಮ್ಮ ಆನಂದೋದ್ಗಾರ ಪ್ರಕಟಗೊಳಿಸುತ್ತಿದ್ದಾರೆಂದು ತಿಳಿಯಿತು. ಹಾಗು ಅದಕ್ಕಾಗಿ ಅವರು ಭಕ್ತಿ-ಭಾವದಿಂದ ಆ ಕಪ್ಪೆಗಳ, ಸ್ತುತಿ ಮಾಡಿದರು. ಈ ಸ್ತುತಿ ಋಗ್ವೇದದಲ್ಲಿ 'ಮಂಡೂಕ ಸ್ತುತಿ' ಎಂಬ ಹೆಸರಿನಲ್ಲಿ ಸಂಕಲಿತವಿದೆ. ತನ್ನ ಪ್ರೇಮಪೂರ್ಣವೃತ್ತಿಯ ಬಣ್ಣವನ್ನು ಹಚ್ಚಿ ಕವಿ ಸೃಷ್ಟಿಯ ಕಡೆಗೆ ನೋಡುತ್ತಾನೆ. ಇದರಿಂದಾಗಿಯೇ ಅವನ ಹೃದಯ ಸೃಷ್ಟಿದರ್ಶನದಿಂದ ಕುಣಿಯುತ್ತದೆ. ತಾಯಿಯ ಹೃದಯದಲ್ಲಿ ತನ್ನ ಸಂತತಿಯ ಬಗ್ಗೆ ಪ್ರೇಮವಿರುತ್ತದೆ. ಆದ್ದರಿಂದ ಅದನ್ನು ನೋಡಿ ಅವಳ ಸ್ತನಗಳಲ್ಲಿಯ ಹಾಲು ತಡೆದರೂ ನಿಲ್ಲುವುದಿಲ್ಲ. ಅದೇ ರೀತಿ ಸಕಲ ಚರಾಚರ ಸೃಷ್ಟಿಯ ಬಗ್ಗೆ ಕವಿಯ ಮನಸ್ಸು ಪ್ರೇಮದಿಂದ ತುಂಬಿರುತ್ತದೆ. ಆದ್ದರಿಂದ ಅದು ದರ್ಶನವಾಗುತ್ತಲೇ ಅವನು ಹುಚ್ಚನಾಗುತ್ತಾನೆ. ಅವನ ವಾಣಿಯಿಂದ ಕಾವ್ಯಧಾರೆ ಒಡೆದು ಹೊರಹೊಮ್ಮತ್ತದೆ. ಅವನು ಅದನ್ನು ತಡೆಯಲಾರ. ನಮ್ಮಲ್ಲಿ

ಇಂತಹ ವ್ಯಾಪಕ ಪ್ರೇಮವಿಲ್ಲ. ಸೃಷ್ಟಿಯ ಬಗ್ಗೆ ಉದಾರ ಬುದ್ಧಿಯಿಲ್ಲ. ಪುತ್ರ-ಕಲತ್ರ ಗೃಹಾದಿ ಆಚೆ ನಮ್ಮ ಪ್ರೇಮ ಹೋಗಿಲ್ಲ ಅಂದಮೇಲೆ ವೃಕ್ಷವಲ್ಲಿ **ಆಮ್ಹಾಂ ಸೋಯರಿ, ವನಚರೆ- ವೃಕ್ಷ, ಲತೆ** ಮತ್ತು ವನಚರಗಳು ನಮ್ಮ ಕುಟುಂಬ.ಈ ಕಾವ್ಯ ನಮಗೆ ಹೇಗೆ ತಾನೆ ಹೊಳೆದೀತು!

ಸ್ವಯಂ ಭೂಃ – ಇಡೀ ಸೃಷ್ಟಿಯ ಮೇಲೆ ಆತ್ಮಿಕ ಪ್ರೇಮದ ಹೊದಿಕೆಯನ್ನು ಕವಿ ಹಾಕಬೇಕು, ಅದೇ ರೀತಿ ಅವನು ಸೃಷ್ಟಿಯ ವೈಭವದಿಂದ ತನ್ನ ಆತ್ಮವನ್ನು ಶೃಂಗರಿಸಬೇಕು ಜೊತೆಗೆ ಆತ್ಮದಲ್ಲಿ ವೃಕ್ಷ, ವಲ್ಲಿ, ವನಚರಗಳ ಅನುಭವವಾಗಬೇಕು. ವಿಶ್ವ ಆತ್ಮಸ್ವರೂಪವಷ್ಟೆ ಅಲ್ಲ ಆತ್ಮ ವಿಶ್ವರೂಪವಾಗಿದೆ. ಇದು ಕವಿಗೆ ಕಾಣಬೇಕು. ಪೌರ್ಣಮೆಯ ಚಂದ್ರನನ್ನು ನೋಡಿ ಅವನ ಹೃದಯಸಮುದ್ರದಲ್ಲಿ ಉಬ್ಬರ ಆಗಲೇಬೇಕು, ಆದರೆ ಪೌರ್ಣಮೆಯ ಅಭಾವದಲ್ಲಿ ಅವನ ಹೃದಯದಲ್ಲಿ ಇಳಿತವಾಗಕೂಡದು. ಅಮಾವಾಸ್ಯಯ ಗಾಢಾಂದಕಾರದಲ್ಲಿ ಆಕಾಶವು ಮೋಡಗಳಿಂದ ತುಂಬಿದ್ದರು ಕೂಡ ಚಂದ್ರ-ದರ್ಶನದ ಆನಂದ ಅವನಿಗೆ ದೊರೆಯಬೇಕು. ಯಾರ ಆನಂದ ಕೇವಲ ಬಾಹ್ಯ ಜಗತ್ತಿನಲ್ಲಿ ತೊಡಗಿಕೊಂಡಿದೇಯೋ, ಅವನು ಕವಿಯಲ್ಲ. ಕವಿ ಆತ್ಮ ನಿಷ್ಠ, ಕವಿ **ಸ್ವಯಂ ಭೂಃ** ಪಾಮರ ಜಗತ್ತು ವಿಷಯಸುಖದಲ್ಲಿ ಉಯ್ಯಾಲೆಯಾಡುತ್ತಿದೆ. ಕವಿ ಆತ್ಮಾನಂದನದಲ್ಲಿ ಮಗ್ನವಾಗಿರುತ್ತಾನೆ. ಜನರಿಗೆ ಊಟದ ಆನಂದ ಸಿಗುತ್ತದೆ. ಕವಿಗೆ ಆನಂದದ ಭೋಜನ ಸಿಗುತ್ತದೆ. ಕವಿ ಸಂಯಮದ ಸಂಯಮ, ಸ್ವಾತಂತ್ರ್ಯತೆಯ ಸ್ವಾತಂತ್ರ್ಯ. ಟಿನಿಸ್ಸನ್ ಹರಿಯುತ್ತಿರುವ ಝುರಿಯಲ್ಲಿ ಆತ್ಮದ ಅಮರತ್ವ ನೋಡಿದ ಕಾರಣ ಅಮರತ್ವದ ಹರಿಯುವ ಝುರಿ ಅವನಿಗೆ ತನ್ನ ಆತ್ಮದಲ್ಲಿ ಕಂಡುಬಂದಿತು. ಕವಿ ವಿಶ್ವಸಾಮ್ರಾಟ. ಕಾರಣ ಅವನು ಹೃದಯಸಾಮ್ರಾಟನಾಗಿರುತ್ತಾನೆ. ಕವಿಗೆ ಜಾಗೃತ ಅವಸ್ಥೆಯಲ್ಲಿ ಮಹಾವಿಷ್ಣುವಿನ ಯೋಗನಿದ್ರೆಯ ಕನಸುಗಳ ಜ್ಞಾನವಿರುತ್ತದೆ. ಮತ್ತು ಜಾಗೃತಿಯಲ್ಲಿ ನಾರಾಯಣನ ಜಗತ್ ರಚನೆ ನೋಡಲು ಸಿಗುತ್ತದೆ. ಕವಿಯ ಹೃದಯದಲ್ಲಿ ಸೃಷ್ಟಿಯ ಇಡೀ ವೈಭವ ಸಂಚಿತವಾಗಿರುತ್ತದೆ. ನಮ್ಮ ಹೃದಯದಲ್ಲಿ ಹಸಿವಿನ ಜ್ಞಾನ ತುಂಬಿದೆ ಮತ್ತು ಬಾಯಿಯಲ್ಲಿ ಭಿಕ್ಷೆಯ ಮಾತು. ನಾನು ಸ್ವತಂತ್ರ ಅಥವಾ ಮನುಷ್ಯ ಎಂಬಂಥ ಸರಳ ಮಾತು ಕೂಡ ಎಲ್ಲಿ ಸ್ಪಷ್ಟವಾಗಿಲ್ಲವೊ ಅಲ್ಲಿ ಆತ್ಮ ನಿಷ್ಠೆ, ಕಾವ್ಯ- ಪ್ರತಿಭೆಯ ಆಸೆಯನ್ನು ಮಾಡಲಾಗುವುದಿಲ್ಲ.

ಯಥಾತಥ್ಯತೋರ್ಥಾನ್ ವ್ಯದಧಾತ್ – ಕವಿಯಲ್ಲಿ 'ಲೋಕಹೃದಯವನ್ನು ಯಥಾವತ್ ಸಂಪ್ರಕಾಶಿತ' ಮಾಡುವ ಸಾಮರ್ಥ್ಯವಿರಬೇಕು, ಎಂಬುದನ್ನು ಎಲ್ಲರೂ ಒಪ್ಪುತ್ತಾರೆ. ಆದರೆ ಜನರಿಗೆ ಸತ್ಯನಿಷ್ಠೆಯೇ ಈ ಸಾಮರ್ಥ್ಯದ ಮೂಲಾಧಾರವೆಂಬ ಮಾತಿನ ಅನಿಸಿಕೆ ಇರುವುದಿಲ್ಲ. ಸತ್ಯ ಪೂತ ವಾಣಿಯಿಂದ ಅಮೋಘ ವೀರ್ಯ ಉತ್ಪನ್ನವಾಗುತ್ತದೆ. 'ಯಾವುದು ಸತ್ಯವೋ ಅದನ್ನೆ ಮಾತಾಡಬೇಕು.' ಈ ರೀತಿಯ ನೈಷ್ಠಿಕ್ ಸತ್ಯಾಚರಣೆಯ ಫಲಸ್ವರೂಪವಾಗಿ ಎಂಥಹ ಅದ್ಭುತ ಸಾಮರ್ಥ್ಯ ಪ್ರಕಟವಾಗುತ್ತದಲ್ಲ. 'ಮಾತನಾಡಿದ್ದು ಸತ್ಯವಾಗುವುದು' ಭವ ಭೂತಿಯು ಋಷಿಗಳ ಕಾವ್ಯ-ಕೌಶಲ್ಯದ ವರ್ಣನೆ ಮಾಡಿದ್ದಾನೆ. ಏನೆಂದರೆ ಋಷಿಗಳು ಮೊದಲು ಮಾತನ್ನಾಡುತ್ತಾರೆ ಮತ್ತು ನಂತರ ಅದರಲ್ಲಿ ಅರ್ಥ ಪ್ರವಿಷ್ಟವಾಗುತ್ತದೆ.' ಇದರ

ಕಾರಣ, ಋಷಿಗಳ ಸತ್ಯನಿಷ್ಠೆ.

ಸಮುಲೊ ವಾ ಏಷ ಪರಿಶುಷ್ಯತಿ. ಯೋ ನೃತಿಮಭಿವದತಿ. ತಸ್ಮಾನ್ನಾರ್ಹಾಮನೃತಂ ವಕ್ತುಮ್ – ಯಾರು ಅಸತ್ಯ ಮಾತನ್ನಾಡುತ್ತಾರೋ ಅವರು ಸಮೂಲವಾಗಿ ಒಣಗಿ ಹೋಗುತ್ತಾರೆ. ಆದ್ದರಿಂದ ನಾನು ಅಸತ್ಯ ಮಾತನ್ನಾಡಕೂಡದು. ಪ್ರಶ್ನೋಪನಿಷತ್‌ನಲ್ಲಿ ಋಷಿ ಇಂತಹ ಚಿಂತನೆಯನ್ನು ಪ್ರಕಟಸಿದ್ದಾನೆ. ಜಾಜ್ವಲ್ಯಮಾನ ಸತ್ಯ ನಿಷ್ಠೆಯಿಂದ ಕಾವ್ಯದ ಜನ್ಮವಾಗುತ್ತದೆ. ವಾಲ್ಮೀಕಿ ಮೊದಲು ರಾಮಾಯಣ ಬರೆದರು. ನಂತರ ರಾಮನು ಆಚರಣೆ ಮಾಡಿದನು, ಎಂದು ಹೇಳುತ್ತಾರೆ. ವಾಲ್ಮೀಕಿ ಸತ್ಯಮೂರ್ತಿಯಾಗಿದ್ದರು. ಆದ್ದರಿಂದ ರಾಮನಿಗೆ ಅವರ ಕಾವ್ಯವನ್ನು ಸತ್ಯಮಾಡಬೇಕಾಯಿತು. ವಾಲ್ಮೀಕಿಯ ರಾಮನಾದರೂ ಎಂಥವರು **ದ್ವಿಃ ಶರಂ ನಾಭೀ ಸಂಧತ್ತೆ ರಾಮೋ ದ್ವಿರ್ನಾಭಿ ಭಾಷಿತೆ** – ರಾಮ ಎರಡು ಸಲ ಬಾಣ ಬಿಡುತ್ತಿರಲಿಲ್ಲ. ಎರಡು ಸಲ ಮಾತಾಡುತ್ತಿರಲಿಲ್ಲ. ಆದಿಕವಿಯ ಕಾವ್ಯ ಪ್ರತಿಭೆಗೆ ಸತ್ಯದ ಆಧಾರವಿತ್ತು. ಆದ್ದರಿಂದಲೆ ಅವನ ಹಣೆಯ ಮೇಲೆ ಅಮರತ್ವದ ಬರಹ ಬರೆಯಲಾಯಿತು. ಸೃಷ್ಟಿಯ ಗೂಡ ರಹಸ್ಯ ಅಥವಾ ಸಮಾಜ–ಹೃದಯದ ಸೂಕ್ಷ್ಮ ಭಾವನೆಗಳನ್ನು ವ್ಯಕ್ತಮಾಡಿ ತೋರಿಸುವ ಸಾಮರ್ಥ್ಯ ಬಯಸುವುದಾದರೆ ಸತ್ಯಪೂರ್ಣ ಮಾತನಾಡಬೇಕು. ಇದ್ದಂತೆ ಇದ್ದಹಾಗೆ ವರ್ಣನೆ ಮಾಡುವ ಶಕ್ತಿ ಒಂದು ಪ್ರಕಾರದ ಸಿದ್ಧಿ, ಕವಿ ವಾಚಾಸಿದ್ಧನಾಗಿರುತಾನೆ. ಕಾರಣ ಅವನು ವಾಚಾಶುದ್ಧ. ನಮ್ಮ ಮಾತು ಶುದ್ಧವಿಲ್ಲ. ಅಸತ್ಯವನ್ನು ನಾವು ಜೀರ್ಣಿಸಿಕೊಳ್ಳುತ್ತೇವೆ, ಇಷ್ಟೆ ಅಲ್ಲ ಸತ್ಯ ನಮಗೆ ಚುಚ್ಚುತ್ತದೆ. ಇಂಥ ದೀನಸ್ಥಿತಿ ನಮ್ಮದು. ಆದ್ದರಿಂದ ನಮ್ಮದು ಕವಿ ಹೃದಯವಲ್ಲ.

ಶಾಶ್ವತಿಭ್ಯಃ ಸಮಾಭ್ಯಃ – ಕವಿಯ ದೃಷ್ಟಿ ಶಾಶ್ವತ ಕಾಲದ ಹತ್ತಿರರಬೇಕು. ಅನಂತ ಕಾಲದ ಕಡೆಗೆ ದೃಷ್ಟಿಯಿಲ್ಲದೆ ಹೋದರೆ ಭವಿತವ್ಯತೆಯ ತೆರೆ ತೆಗೆಯುದಿಲ್ಲ. ಪ್ರತ್ಯಕ್ಷದಿಂದ ಕರುಡಾಗಿರುವ ಬುದ್ಧಿಗೆ ಸನಾತನ ಸತ್ಯ ಗೋಚರವಾಗುವುದಿಲ್ಲ. ಸಾಕ್ರಟೀಸ್‌ನಿಗೆ ವಿಷವನ್ನು ಕುಡಿಸುವವರ ತರ್ಕ ಸಾಕ್ರಟೀಸ್‌ನನ್ನು ಮರ್ತ್ಯನನ್ನಾಗಿ ನೋಡಿತು. 'ಮನುಷ್ಯ ಮರ್ತ್ಯ.' ಮತ್ತು ಸಾಕ್ರಟೀಸ್ ಮನುಷ್ಯ. ಆದ್ದರಿಂದ ಸಾಕ್ರಟೀಸ್ ಮರ್ತ್ಯನಿದ್ದಾನೆ' ಇದರ ಮುಂದಿನ ಕಲ್ಪನೆ ಆ ಕ್ಷುದ್ರ ತರ್ಕಕ್ಕೆ ಹೊಳೆಯಲಿಲ್ಲ, ಆದರೆ ವಿಷ ಪ್ರಾಷನದ ದಿನ ಆತ್ಮದ ಸತ್ಯತೆಯ ಸಂಬಂಧವಾಗಿ ಪ್ರವಚನ ಮಾಡಿದ ಸಾಕ್ರಟೀಸನಿಗೆ ಮರಣದ ನಂತರ ಭವಿಷ್ಯ ಸ್ಪಷ್ಟವಾಗಿ ಕಾಣುತ್ತಿತ್ತು. ಭವಿತವ್ಯದ ಹೊಟ್ಟೆಯಲ್ಲಿ ಸತ್ಯ ಅಡಗಿರುವುದನ್ನು ಅವನು ನೊಡಬಲ್ಲವನಾಗಿದ್ದ. ಆದ್ದರಿಂದ ಅವನು ವರ್ತಮಾನದ ವಿಷಯದಲ್ಲಿ ನಿಶ್ಚಿಂತನಾಗಿದ್ದ. ಇಂತಹ ಉದಾಸೀನ ವೃತ್ತಿ ಮನಸ್ಸಿನಲ್ಲಿ ಇಲ್ಲದೆ ಹೋದರೆ ಕವಿ ಹೃದಯ ನಿರ್ಮಾಣವಾಗುವುದಿಲ್ಲ. ಸಂಸಾರದ ಎಲ್ಲ ರಸ ಕರುಣಾರಸದ ಸೇವೆಯಲ್ಲಿ ತೊಡಗುವಂತಾಗಿದೆ, ಈ ಮಾತನ್ನು ಸಮಾಜದ ಮನಸ್ಸಿನ ಮೇಲೆ ಅಂಕಿತಮಾಡಲು ಭವಭೂತಿ ಅನೇಕ ಪ್ರಕಾರದಿಂದ ಪ್ರಯತ್ನಮಾಡಿದ್ದಾನೆ. ಆದರೆ ತತ್ಕಾಲಿನ ವಿಷಯ ಲೋಲುಪೋನ್ಮತ್ತ ಸಮಾಜಕ್ಕೆ ಇದು ಸಹನೆಯಾಗಲಿಲ್ಲ. ಅದು ಭವಭೂತಿಯನ್ನೆ ಎಸೆಯಿತು, ಆದರೆ ಕವಿಯು ತನ್ನ ಭಾಷೆಯನ್ನು ಬಿಡಲಿಲ್ಲ. ಕಾರಣವೇನೆಂದರೆ ಶಾಶ್ವತ ಕಾಲದಮೇಲೆ ಅವನಿಗೆ ಭರವಸೆ ಇತ್ತು. ಶಾಶ್ವತ ಕಾಲದಮೇಲೆ ದೃಷ್ಟಿಯನ್ನಿಡುವ ಧೈರ್ಯ ನಮಗಿರುವುದಿಲ್ಲ.

ನಾಲ್ಕೂ ಕಡೆಯಿಂದ ಸುತ್ತುವರಿಯಲ್ಪಟ್ಟ ಜಿಂಕೆ ಯಾವ ರೀತಿ ಹತಾಶವಾಗಿ ಅಕ್ಕ - ಪಕ್ಕ ನೋಡುದನ್ನು ಬಿಡುತ್ತದೋ ಮತ್ತು ತಕ್ಷಣ, ಕುಳಿತುಕೊಳ್ಳುತ್ತದೋ ಅದೇ ರೀತಿ ನಮ್ಮ ವಿಷಯತ್ರಸ್ಥ ಬುದ್ಧಿಯಿಂದ ಭಾವಿಕಾಲದತ್ತ ನೋಡಲಾಗುವುದಿಲ್ಲ. 'ನಾಳೆಯದನ್ನು ಯಾರು ಬಲ್ಲರು,' 'ಇಂದು ಏನು ದೊರೆಯಿತೋ ಅದನ್ನು ಭೋಗಿಸು' ಈ ಭಯಭೀತ ವೃತ್ತಿಯಿಂದ ಕಾವ್ಯದ ನಿರ್ಮಾಣದ ಆಸೆ ಇರುವುದಿಲ್ಲ. ನಾವೆಲ್ಲರೂ ಈ ಕಡೆಯದನ್ನು ಮಾತ್ರ ನೋಡುತ್ತೇವೆ ಕವಿ ಅತ್ತಕಡೆಯದನ್ನು ತೆರೆ ಭೇದಿಸಿ ದರ್ಶನ ಮಾಡುತ್ತಾನೆ. ಕವಿಗೆ ಅಂತರ್ - ದರ್ಶನ ಆಗುತ್ತದೆ. ಸಾಮಾನ್ಯ ಕಣ್ಣುಗಳಿಗೆ ಆಗುವುದಿಲ್ಲ. ಆದ್ದರಿಂದ ಕವಿಗೆ ಕ್ರಾಂತದರ್ಶಿ ಎಂದು ಹೇಳುತ್ತಾರೆ.

ಕವಿಃ ಕ್ರಾಂತದರ್ಶಿ - ಕವಿ ದೂರದನ್ನು ನೋಡುತ್ತಾನೆ. ಹೀಗೆಂದು ಕೆಲವು ಜನರು ಅದರ ಅರ್ಥವನ್ನು ಮಾಡುತ್ತಾರೆ. ಅದು ಕೂಡಾ ಆಗಬಹುದು. ಆದರೆ ಕವಿ ಬಹಳ ಅ 'ಸ್ಪಷ್ಟ' ವನ್ನು ಕೂಡಾ ನೋಡುತ್ತಾನೆಂಬ ಅರ್ಥ ಕೂಡಾ ಇದೆ. ಕವಿಯ ಚಿಂತನೆಯಂತು ಯಾವಾಗಲೂ ಅ ಸ್ಪಷ್ಟವೆ ಇರುತ್ತದೆ. ಅವನ ಕಾವ್ಯದ ಆಳವನ್ನು ಅವನು ಸ್ವತಃ ಅರಿತಿರುವುದಿಲ್ಲ. ಅವನಿಗೆ ಏನು ಹೊಳೆಯುತ್ತದೊ ಅದು ಅವನ ಸ್ಪಷ್ಟ ಚಿಂತನೆಯ ಹೊರಗಿನ ವಿಷಯ. ಯಾವೂದೋ ಒಂದು ವಿಷಯ ಅವನಿಗೆ ಪ್ರಾಪ್ತವಾಗುತ್ತದೆ. ಅವನು ಏನೂ ಪ್ರಯತ್ನ ಮಾಡಿರುವುದಿಲ್ಲ, ಯಾವ ರಚನೆಯನ್ನೂ ಮಾಡಿರುವುದಿಲ್ಲ. ಸಹಜವಾಗಿಯೇ ಅವನಿಗೆ ವಿಷಯ ದೊರೆಯುತ್ತದೆ, ಅದರ ಒಂದು ಇಣುಕು ನೋಟ ದೊರೆಯುತ್ತದೆ. ಯಾವುದು ಸ್ಪಷ್ಟ ವಸ್ತು ಇದೆಯೋ ಅದನ್ನು ಯಾರು ಬೇಕಾದರೂ ನೋಡಬಹುದು, ಪಶುಕೂಡಾ ನೋಡುತ್ತದೆ. ಪಶುವಿನ ಅರ್ಥ ಯಾವುದು ನೋಡುತ್ತದೋ ಅದು **ಪಶ್ಯತೀ ಇತಿ ಪಶುಃ** ಸಾಕ್ಷಿಯನ್ನು ತೋರಿಸು, ಸಾಕ್ಷಿಯಿಂದಲೆ ಒಪ್ಪುವವರು ಪಶುವಾಗಿರುತ್ತಾರೆ. ಇಂತಹ ಪಶುತ್ವ ಕವಿಯಲ್ಲಿ ಇರುವುದಿಲ್ಲ. **(ಸಂಗ್ರಹ - ಸು.ಕೌ)**

* * *

ಸನ್ಮಾನ್ಯರಿಂದ...

'ಜನಪದ ವಿಚಾರ' ನನಗೆ ತಲಪುತ್ತಿದೆ. ಅದನ್ನು ಮುಂದುವರಿಸಿಕೊಂಡು ಬರಲು ನೀವು ಹಾಕುತ್ತಿರುವ ಶ್ರಮ ಬಹಳ ಹೆಚ್ಚಿನದು. ನಿಮ್ಮ ಆರೋಗ್ಯ ಚೆನ್ನಾಗಿರಲೆಂದು ನಾವೆಲ್ಲರೂ ಮನಃಪೂರ್ವಕವಾಗಿ ಆಶಿಸುತ್ತೇವೆ.

- ಮಂಗ್ಳೂರು ವಿಜಯ, ಬೆಂಗಳೂರು

ಇರುವಷ್ಟು ಹೊತ್ತು ನಿನ್ನ ಮುಖ ನಾನು ನನ್ನ ಮುಖ ನೀನು

– ಡಾ॥ ಬೋರೇಗೌಡ ಚಿಕ್ಕಮರಳಿ

ಹಣತೆ ಹಚ್ಚುತ್ತೇನೆ ನಾನು;
ಕತ್ತಲೆಯನ್ನು ದಾಟುತ್ತೇನೆಂಬ ಭ್ರಮೆಯಿಂದಲ್ಲ,
ಇರುವಷ್ಟು ಹೊತ್ತು ನಿನ್ನ ಮುಖ ನಾನು, ನನ್ನ ಮುಖ ನೀನು
ನೋಡಬಹುದೆಂಬ ಒಂದೇ ಒಂದು ಆಸೆಯಿಂದ;

ಇವು ರಾಷ್ಟ್ರ ಕವಿ ಜಿ.ಎಸ್ ಶಿವರುದ್ರಪ್ಪನವರ ಕವಿತೆಯೊಂದರ ಕೆಲವು ಸಾಲುಗಳು.

ನಾನು ಬರೆಯುತ್ತೇನೆ
ನನ್ನನ್ನು ನಾನು ಕಂಡುಕೊಳ್ಳುವುದಕ್ಕೆ
ಮತ್ತೆ ಕಾಣಿಸುವುದಕ್ಕೆ;
ನಿಮ್ಮೊಂದಿಗೆ ಸಂವಾದಿಸುವದಕ್ಕೆ

ಇವು ಸಹ ಅವರದೇ ಮತ್ತೊಂದು ಕವಿತೆಯ ಸಾಲುಗಳು. ಈ ಎರಡೂ ಉದ್ಧರಣೆಗಳಲ್ಲಿ ಕವಿ ಬರೆಯುವುದನ್ನೇ ಕುರಿತಿಸಿದ್ದಾರೆ ಎಂಬುದು ಸ್ಪಷ್ಟ. ಮೊದಲನೆಯದರಲ್ಲಿ 'ಹಣತೆ' ಬರೆಯುವ ಕ್ರಿಯೆಗೆ, ಆ ಮೂಲಕ ಸಾಧಿಸುವ ಅರಿವಿಗೆ ಸಂಕೇತವಾಗುತ್ತದೆ. ಬರೆಯುವುದು ಅರಿವಿಗಾಗಿ, ಅರಿವು ಸ್ವದರ್ಶನ, ಪರದರ್ಶನ ಹಾಗೂ ಪರಸ್ಪರ ದರ್ಶನಕ್ಕಾಗಿ ಎಂಬ ನಿಲುವನ್ನು ಇಲ್ಲಿ ಪಡೆದುಕೊಳ್ಳಬಹುದು. ಎಲ್ಲಕ್ಕೂ ಮೂಲ ಸ್ವದರ್ಶನ. ವ್ಯಕ್ತಿ ತನ್ನನ್ನು ತಾನು ತಿಳಿಯದೆ ಇತರರನ್ನು ತಿಳಿಯಲಾರ; ತನ್ನನ್ನು ಇತರರಿಗೆ ತಿಳಿಸಲಾರ. 'ಇತರರು' ಎಂಬುದರ ಅರ್ಥವನ್ನು ವ್ಯಕ್ತಿಗಳು ಮಾತ್ರವಲ್ಲ ಜೀವ – ನಿರ್ಜೀವ, ಚರ – ಅಚರಗಳೆಂಬ ಸಕಲೆಂಟು ಜೀವರಾಶಿ ಹಾಗೂ ವಸ್ತುರಾಶಿ ಎಂದು ವಿಶಾಲ ನೆಲೆಯಲ್ಲಿ ಗ್ರಹಿಸಿಕೊಳ್ಳಬಹುದು. ಈ ಜೀವರಾಶಿಗಳಲ್ಲಿ ಮಾನವ ಅತ್ಯಂತ ಜಾಗೃತ ಹಾಗೂ ಕ್ರಿಯಾಶೀಲ ಜೀವಿ ಎಂಬುದು ನಿರ್ವಿವಾದ. ಅವನು ತನ್ನನ್ನೂ ತಿಳಿಯಬೇಕು ತನ್ನಸುತ್ತಣ ಜಗತ್ತನ್ನೂ ಅರಿಯಬೇಕು. ಜಗತ್ತಿಗೆ ಮಾನವ ಏನೆಂಬುದನ್ನು ತಿಳಿಯಬೇಕಾದುದು ಅಗತ್ಯವಿದೆಯೋ ಇಲ್ಲವೊ; ಆದರೆ ಮನುಷ್ಯ ತನ್ನ ಕ್ಷೇಮಕ್ಕಾಗಿಯಾದರೂ ತಾನು ಏನೆಂಬುದನ್ನು ಜಗತ್ತಿಗೆ ತಿಳಿಯಹೇಳಬೇಕು. ಆಗ ಮಾತ್ರ ಮನುಷ್ಯ ಜಗತ್ತಿನೊಡನೆ ಹೊಂದಿಬಾಳಬಲ್ಲ. ಈ ಹೊಂದಿಕೆ ಮೊದಲು ಮನುಷ್ಯ ಮನುಷ್ಯರ ನಡುವೆ ಸಾಧಿಕತವಾಗಬೇಕು; ಆಮೇಲೆ ಜೀವರಾಶಿ ಹಾಗೂ ವಸ್ತುರಾಶಿಯಿಂದ ಕೂಡಿದ ಜಗತ್ತಿಗೆ ವಿಸ್ತರಣೆಗೊಳ್ಳಬೇಕು.

ಹೊಂದಿಕೆಗೆ ಪರಸ್ಪರರ ಅರಿವು ಎಷ್ಟು ಆವಶ್ಯಕವೋ ಅರಿವಿಗೆ ಅಷ್ಟೇ ಆವಶ್ಯಕ ಅಹಂಶೂನ್ಯತೆ. ಅಹಂ ಶೂನ್ಯತೆ ಎಂದರೆ ವ್ಯಕ್ತಿ ಇತರರಿಗಾಗಿ ತನ್ನನ್ನು

ತಾನು ಬಿಟ್ಟುಕೊಡುವುದು; ಆ ಮೂಲಕ ಎಲ್ಲರಿಗಾಗಿ ಎಲ್ಲವನ್ನು ಪಡೆದುಕೊಳ್ಳುವುದು. **"ಸರ್ವರಿಗಾಗಿಯೇ ಸರ್ವವ ತನ್ನಿಂ; ಸರ್ವರಿಗಾಗಿಯೆ ಸರ್ವಂ ಎನ್ನಿಂ; ಸಾಮಾನ್ಯರೊ ನಾವು, ಸಾಮ್ಯಾನ್ಯರ ಪೂಜೆಗೆ ದೀಕ್ಷೆಯ ಕೊಳ್ಳಿರಿ ನೀವೂ"** ಎಂದು ಕುವೆಂಪು ಹಾಡಿದುದು ಸಮಸಮಾಜದ ಸ್ಥಾಪನೆಗಾಗಿ ಸಾಧಿಸಬೇಕಾದ ಈ ಹೊಂದಾಣಿಕೆಗಾಗಿಯೇ. ಸಾಮಾನ್ಯತೆ ಹೊಂದಾಣಿಕೆಗೆ ಮತ್ತೊಂದು ಹೆಸರು. ಇದು ಅಷ್ಟು ಸುಲಭದಲ್ಲಿ ಸಿದ್ಧಿಸುವಂತಹುದಲ್ಲ. ಇದಕ್ಕೆ ಮುಖ್ಯವಾದ ಅಡಚಣೆ 'ನಾನು' ಎಂಬುದು. 'ನಾನುಂಟೋ ಮೂರುಲೋಕವುಂಟೋ' ಎಂದವರು ತಾವೂ ಉಳಿಯಲಿಲ್ಲ; ಲೋಕವನ್ನು ನೆಮ್ಮದಿಯಿಂದ ಬಾಳಗೊಡಲಿಲ್ಲ. ಅದಕ್ಕಾಗಿಯೇ ಶಿವರುದ್ರಪ್ಪನವರು ಮತ್ತೂ ಹಾಡಿದರು.

ಹತ್ತಿರವಿದ್ದೂ ದೂರ ಉಳಿಯುವೆವು
ನಮ್ಮ ಅಹಮ್ಮಿನ ಕೋಟೆಯಲಿ
ಎಷ್ಟು ಕಷ್ಟವೋ ಹೊಂದಿಕೆ ಎಂಬುದು
ನಾಲ್ಕು ದಿವಸದ ಈ ಬಾಳಿನಲಿ ಎಂದು. ಮನುಷ್ಯನದು ನಾಲ್ಕು ದಿವಸದ ಬಾಳು ಎಂಬುದು ಇಲ್ಲಿ ಗಮನಿಸಬೇಕಾದ ಮುಖ್ಯವಾದ ಮಾತು. ಈ ಮೊದಲಿನ ಉದ್ಧರಣೆಯಲ್ಲಿ 'ಇರುವಷ್ಟು ಹೊತ್ತು' ಎಂಬ ಮಾತಿದೆ. ಈ ಮಾತುಗಳು ಮಾನವ ಜನ್ಮ ಕ್ಷಣಿಕ ಎಂಬ ಸನಾತನ ತಿಳುವಳಿಕೆಯನ್ನು ನೆನಪಿಗೆ ತರುತ್ತದಾದರೂ ಅದಕ್ಕೂ ಮೀರಿದ ಅರ್ಥವನ್ನು ಇವತ್ತಿನ ಸಂದರ್ಭದ ಹಿನ್ನೆಲೆಯಲ್ಲಿ ಗ್ರಹಿಸಬೇಕಾಗುತ್ತದೆ. ಮಾನವಜನ್ಮ ಕ್ಷಣಿಕ ಎಂದವರು ಈ ಜಗತ್ತನ್ನೂ ಜಗತ್ತಿನ ಮೇಲಿನ ಮಾನವ ಬದುಕನ್ನೂ ಕ್ಷಣಿಕ ಎಂದರು. ಆಧುನಿಕ ಕಾಲದ ಕವಿ ವಿಜ್ಞಾನ ಯುಗವನ್ನು ಕಂಡು ಉಂಡವನು ಈ ವಾದವನ್ನು ಒಪ್ಪುತ್ತಾನೆಂದು ಹೇಳಬರುವುದಿಲ್ಲ. 'ಇರುವಷ್ಟು ಹೊತ್ತು ನಿನ್ನ ಮುಖ ನಾನು, ನನ್ನ ಮುಖ ನೀನು ನೋಡಬಹುದೆಂಬ ಒಂದೇ ಒಂದು ಆಸೆಯಿಂದ ಹಣತೆ ಹಚ್ಚುತ್ತೇನೆ ನಾನು' ಎಂದು ಹಾಡಿದ ಕವಿ ಮರುಕ್ಷಣದಲ್ಲಿಯೇ "ಹಣತೆ ಆರಿದ ಮೇಲೆ, ನೀನು ಯಾರೊ, ಮತ್ತೆ ನಾನು ಯಾರೋ" ಎಂದು ಕವಿತೆಯನ್ನು ನಿಲ್ಲಿಸುತ್ತಾರೆ. ಮನುಷ್ಯ ಎಷ್ಟೇ ಸಂಘಜೀವಿಯಾದರೂ ಆ ಸಂಘತ್ವ ಅಥವಾ ಹೊಂದಿಕೆ ಎಂಬುದು ಯಾವುದೋ ವ್ಯವಹಾರದ ನಿಮಿತ್ತ ಏರ್ಪಡುವಂತಹುದಾಗಿರುತ್ತದೆ. ಆ ವ್ಯವಹಾರ ಮುಗಿದ ಮೇಲೆ ಅವರವರ ಬದುಕಿನ ಅಸ್ತಿತ್ವದ ನೆಲೆಗಳು ಅವರವರನ್ನು ಆವರಿಸಿಕೊಳ್ಳುತ್ತವೆ. ಆ ನೆಲೆಗಳು ಅವರ ವ್ಯಕ್ತಿಗತ ಬದುಕನ್ನು ರೂಪಿಸುತ್ತಾ ಹೋಗುತ್ತವೆ. ಹೀಗೆ ಮನುಷ್ಯ ತನ್ನ ಬದುಕನ್ನು ತಾನು ಕಟ್ಟಿಕೊಳ್ಳುವ ಭರದಲ್ಲಿ ಸ್ವಾರ್ಥಿಯಾಗಬಾರದು; ಇನ್ನೊಬ್ಬರ ಅಸ್ತಿತ್ವದ ಹಕ್ಕನ್ನು ಮರೆಯಬಾರದು. ಈ ಸ್ವಾರ್ಥ, ಈ ಮರೆವು ಅವನನ್ನು ಆವರಿಸಿಕೊಳ್ಳುವುದು ಸಂಘತ್ವವನ್ನು ಸಂಪೂರ್ಣ ಮರೆತು ಕೇವಲ ನಾನು ಎಂಬ ಅಹಮ್ಮಿಗೆ ಒಳಗಾದಾಗ. ಈ ಅಹಮ್ಮು ಭೌತಿಕವಾಗಿ ಹತ್ತಿರವಿದ್ದವರನ್ನೂ ಮಾನಸಿಕವಾಗಿ ದೂರವಾಗಿಸುತ್ತದೆ. ಹೊಂದಿಕೆಯನ್ನು ಸಾಧಿಸಬಹುದಾದ ನಿಸ್ವಾರ್ಥ ವ್ಯವಹಾರಗಳು ಕ್ಷೀಣಿಸುತ್ತವೆ. ಸಮುದಾಯದೊಳಗೆ ಬಿರುಕುಗಳು ಕಾಣಿಸಿಕೊಳ್ಳುತ್ತವೆ. ಆ ಬಿರುಕುಗಳು ವೈಷಮ್ಯಕ್ಕೆ, ಘರ್ಷಣೆಗೆ, ದುರಂತಕ್ಕೆ ಕಾರಣವಾಗಬಹುದು. ಹೀಗಾಗಬಾರದೆಂದರೆ ಸ್ವಾರ್ಥದ ಕತ್ತಲನ್ನು ತೊರೆಯುವ ಅರಿವಿನ ಹಣತೆಯನ್ನು ಹಚ್ಚಿಕೊಂಡು ಅದರ ಬೆಳಕಿನಲ್ಲಿ ಸಾಮಾಜಿಕ ಹಾಗೂ ಇತ್ಯಾತ್ಮಕ ಅಭಿಮುಖೀಕರಣವನ್ನು ಸಾಧ್ಯವಾದಾಗಲೆಲ್ಲಾ ಸಾಧಿಸಿಕೊಳ್ಳುವುದು ಕ್ಷೇಮಕರ ಸಾಮುದಾಯಿಕ ಬದುಕಿಗೆ ಆವಶ್ಯಕ.

ಲಂಕೇಶರ ವೈವಾಹಿಕ ಜೀವನದ ಒಳನೋಟ

– ಡಾ|| ಎಂ.ಎಸ್.ಆಶಾದೇವಿ

(ಕರ್ನಾಟಕ ಕಂಡ ಅಪರೂಪದ ವ್ಯಕ್ತಿ ಪಿ.ಲಂಕೇಶ್. ಪತ್ರಿಕಾಕರ್ತರಾಗಿ, ಸಾಮಾಜಿಕ ಚಿಂತಕರಾಗಿ ಕನ್ನಡಿಗರ ಅಪಾರ ಮನ್ನಣೆಪಡೆದಂತಹವರು. ಅವರ ವೈವಾಹಿಕ ಜೀವನದ ಅನುಭವ ಕುರಿತಾಗಿ ಇಂದಿರಾ ಲಂಕೇಶ್ ರವರು ಬರೆದ **ಹುಳಿಮಾವು ಮತ್ತು ನಾನು** ಎಂಬ ಪುಸ್ತಕಕ್ಕೆ ಡಾ|| ಎಂ.ಎಸ್. ಆಶಾದೇವಿ ಸೊಗಸಾದ ಮುನ್ನುಡಿ ಬರೆದಿದ್ದಾರೆ. ೧೭೪ ಪುಟದ ಪುಸ್ತಕಕ್ಕೆ ಬರೆದ ಈ ಮುನ್ನುಡಿ ಸಂಕ್ಷಿಪ್ತವಾಗಿ ಲಂಕೇಶ್‌ರ ವೈವಾಹಿಕ ಜೀವನದ ಇಣುಕು ನೋಟ ಕೊಡುತ್ತದೆ. - ಸಂ)

"ಹೀಗೂ ಬದುಕಬೇಕಾದ್ದು ಎಲ್ಲ ಹೆಣ್ಣಿನ ಹಣೆಯಲ್ಲಿ ಬರೆದದ್ದು..." ಮಾಸ್ತಿಯವರ 'ಚಿಕವೀರರಾಜೇಂದ್ರ'ದ ಗೌರಮ್ಮಾಜಿಯ ದಾಂಪತ್ಯದ ಕಾಣ್ಕೆ ಒಂದು ಕಾಲದ, ಒಂದು ತಲೆಮಾರಿನ ಹೆಣ್ಣುಮಕ್ಕಳ ಅವಸ್ಥೆ, ದುರಂತ ಎಂದೇನೂ ಅಲ್ಲ. ಈ ಪರಮ ಸತ್ಯದ ಅನಂತ ಆಯಾಮಗಳನ್ನು ಹೆಣ್ಣು ಬದಲಾದ, ಬದಲಾಗುತ್ತಿರುವ ಸನ್ನಿವೇಶಗಳಲ್ಲಿಯೂ ಎದುರಾಗುತ್ತಲೇ ಬಂದಿದ್ದಾಳೆ. ಹೀಗೆನ್ನುತ್ತಿರುವಾಗ ಹೆಣ್ಣಿನ ದುರಂತ ನಾಟಕದ ಮುಂದುವರಿಕೆಯೆಂದು ಹೇಳುತ್ತಿರುವುದಲ್ಲ. ದಾಂಪತ್ಯವನ್ನು, ಗಂಡುಹೆಣ್ಣಿನ ಸಂಬಂಧಗಳ ಸ್ವರೂಪವನ್ನು, ಕುಟುಂಬ ದಲ್ಲಿಯ ತನ್ನ ಪಾತ್ರವನ್ನು, ನಾನೆಂಬ ನನ್ನನ್ನು ಉಳಿಸಿಕೊಳ್ಳ ಬೇಕಾಗಿರುವುದರ ಅಗತ್ಯವನ್ನು, ಬದುಕು ದೊಡ್ಡದೆನ್ನುವ ವಿಸ್ತಾರದ ಭಿತ್ತಿಯನ್ನು ಪಡೆಯುವ ಪ್ರಕ್ರಿಯೆಯಲ್ಲಿ ಉದ್ಯುಕ್ತಳಾಗಿರುವ ಹೆಣ್ಣು ಖಂಡಿತವಾಗಿಯೂ ಬದಲಾದ ದೃಷ್ಟಿಕೋನದಿಂದಲೆ ನೋಡಲು, ನಿಭಾಯಿಸಲು ಪ್ರಯತ್ನಿಸುತ್ತಿದ್ದಾಳೆ. ಕುಟುಂಬವನ್ನು ತನ್ನ ಮೂಲ ಕೇಂದ್ರವಾಗಿ ಉಳಿಸಿಕೊಂಡೂ ತನ್ನತನದ ಚಹರೆಗಳನ್ನು ರೂಪಿಸಕೊಳ್ಳುವ ಮಹತ್ವದ ಪರಿವರ್ತನೆಯಲ್ಲಿ ಸಮಕಾಲೀನ ಹೆಣ್ಣುಮಕ್ಕಳು ತೊಡಗಿಕೊಂಡಿದ್ದಾರೆ. ಮಹತ್ವದ ಮಾತೆಂದರೆ, ಈ ಪ್ರಕ್ರಿಯೆಯಲ್ಲಿ ಹೆಣ್ಣು ತನ್ನನ್ನು ತಾನು ದುರಂತ ನಾಯಕಿಯೆಂದು ಪರಿಭಾವಿಸುವ ಮನಸ್ಥಿತಿಯಿಂದ ಹೊರಬಂದಿರವುದು.

ಇಂದಿರಾ ಅವರ 'ಹುಳಿಮಾವು ಮತ್ತು ನಾನು' ಕೃತಿಯ ಮಹತ್ವ ಮತ್ತು ಪ್ರಸ್ತುತತೆಯನ್ನು ನಾವು ಗುರುತಿಸಬೇಕಾಗಿರುವುದು ಈ ನಿಟ್ಟಿನಲ್ಲಿ. ಆದರೆ ಇಂದಿರಾ ಅವರ ಸವಾಲುಗಳು ಮಿಕ್ಕವರಿಗಿಂತಲೂ ಆಳವೂ, ವಿಭಿನ್ನವೂ ಆಗುವುದು ಅವರ ದಾಂಪತ್ಯ ಲಂಕೇಶರಂತಹ ಅಸಾಧಾರಣ ಪ್ರತಿಭಾವಂತ ಮತ್ತು ವಿಕ್ಷಿಪ್ತ ವ್ಯಕ್ತಿಯ ಜೊತೆಗಾದ್ದರಿಂದ. ಇಲ್ಲಿಯೇ ಗಮನಿಸಬೇಕಾದ ಸಂಗತಿಯೆಂದರೆ 'ಸ್ವಪ್ರಜ್ಞೆ'ಯ ಅನಾವರಣವೆನ್ನುವುದು ಹೊರ ಮತ್ತು ಒಳಗಿನ ದುರ್ದಮ್ಯ ಒತ್ತಡದಲ್ಲಿ ತನ್ನಿಂತಾನೆ ಘಟಿಸುತ್ತದೆ ಎನ್ನುವ ಸ್ತ್ರೀವಾದಿ ನಂಬಿಕೆಯೂ ಇಲ್ಲಿ ನಿಜವಾಗಿದೆ.

ವಯೋಸಹಜ ಕನಸುಗಳ ಮುಗ್ಧ ಹುಡುಗಿಯಿಂದ ಬದುಕಿನ ಕಟು ವಾಸ್ತವಗಳ ಎದುರು ತತ್ತರಿಸಿಹೋದ ಗೃಹಿಣಿಯ ಅಗ್ನಿದಿವ್ಯವನ್ನು ಹಾದು ಸ್ವಾವಲಂಬಿಯಾದ ದಿಟ್ಟ ಮಾಗದ ಹೆಣ್ಣಾಗಿ ತನ್ನನ್ನು ತಾನು ಇಂದಿರಾ ಅವರು ನಿರ್ಮಿಸಿಕೊಂಡು ಆಂತಕದಲ್ಲಿ

ಅನಿವಾರ್ಯವಾಗಿ ಹುಡುಕಿಕೊಂಡು ಆರ್ಥಿಕ ಸ್ವಾತಂತ್ರ್ಯದ ದಾರಿಯು ನಿಧಾನವಾಗಿ ಆದರೆ ಖಚಿತವಾಗಿ ವ್ಯಕ್ತಿತ್ವದ ಮೂಲ ಗುಣಗಳನ್ನೆ ರೂಪಾಂತರಿಸಿಬಿಡುವ, ಆ ಮೂಲಕ ಹೊಸ ಹೆಣ್ಣನ್ನು ತನಗೆ ತಾನೇ ಕಂಡು ಬೆರಗಾಗುವ ರೀತಿಯೇ ಈ ನಿರೂಪಣೆಯ ಮೂಲವೆಂದರೂ ನಡೆಯುತ್ತದೆ.

ಅಂದರೆ, ಲಂಕೇಶರಿಗೆ ಮಾರುಹೋದ, ಅವರನ್ನು ಪಡೆದು ಸಂಭ್ರಮಿಸಿದ, ಹತ್ತು ಹಲವು ಕಾರಣಗಳಿಗಾಗಿ ಅವರಿಂದ ಭ್ರಮನಿರಸನಗೊಂಡ, ಘರ್ಷಣೆಯು ಅನಿರ್ವಾಯವಾದ... ಹೀಗೆ ದಾಂಪತ್ಯ ಮತ್ತು ಕುಟುಂಬದ ಎಲ್ಲ ಹಂತಗಳಲ್ಲಿಯೂ ಲಂಕೇಶರೇ ಮೂಲವಾದ, ಕೇಂದ್ರವಾದ ಸ್ಥಿತಿಯಿಂದ ಅವರನ್ನು ಉಳಿಸಿಕೊಂಡೂ ತನ್ನದೇ ವಿಶ್ವವೊಂದನ್ನು ಕಟ್ಟಿಕೊಳ್ಳಲು ಇಂದಿರಾ ಅವರು ನಡೆಸುವ ಪ್ರಯತ್ನಗಳು ಸ್ವಮರುಕದ ಛಾಯೆಯಿಲ್ಲದೆ ಇಲ್ಲಿ ನಿರೂಪಣೆಗೊಂಡಿವೆ. ಅನೇಕ ಏಳುಬೀಳುಗಳ ನಡುವೆಯೂ ದಾಂಪತ್ಯವನ್ನು ಉಳಿಸಿಕೊಳ್ಳುವ ಸವಾಲನ್ನು ಯಶಸ್ವಿಯಾಗಿ ಮುಖಾಮುಖಿಯಾಗುವ ಇಂದಿರಾ ಅದನ್ನು ತ್ಯಾಗದ ಆವರಣದಲ್ಲಿ ಇಡಲು ಯಾವ ಹೊತ್ತಿನಲ್ಲೂ ಪ್ರಯತ್ನಿಸುವುದಿಲ್ಲ ಎನ್ನುವ ಅಂಶವೇ ಇವರ ದೃಷ್ಟಿಕೋನದಲ್ಲಿನ ಪಲ್ಲಟವನ್ನು ಸ್ಪಷ್ಟವಾಗಿ ಹೇಳುತ್ತದೆ. ಲಂಕೇಶರೊಂದಿಗಿನ ಮದುವೆಯನ್ನು ವಿರೋಧಿಸಿದ ತಂದೆ ಯಾವ ಕಾರಣಕ್ಕೂ ತನ್ನ ಸಹಾಯ ಪಡೆಯಬಾರದು ಎಂದು ಒಡ್ಡಿದ್ದ ಕರಾರನ್ನು ಕೊನೆಯವರೆಗೂ ಇಂದಿರಾ ಪಾಲಿಸುತ್ತಾರೆ. ದಾಂಪತ್ಯವೇನು ಜೀವನವನ್ನೇ ಕೊನೆಗೊಳಿಸಿಕೊಳ್ಳಲು ಪ್ರಯತ್ನಿಸುವ ಸನ್ನಿವೇಶಗಳು ಎದುರಾದಗಲೂ ಇವರು ತಂದೆಯ ಕಡೆ ಮುಖ ಮಾಡುವುದಿಲ್ಲ. ಬದುಕಿನುದ್ದಕ್ಕೂ ಇವರು ನಂಬಿದ್ದು ನೆಚ್ಚಿದ್ದು ಬಹುಶಃ ಎರಡನ್ನು. ಗಂಡ ಮಕ್ಕಳನ್ನು ಪೊರೆಯಬೇಕಾದ ಜವಾಬ್ದಾರಿಯನ್ನು ಮತ್ತು ಆತ್ಮಬಲವನ್ನು.

ಆರ್ಥಿಕ ಸ್ವಾವಲಂಬನೆಯು ಹೆಣ್ಣಿಗೆ ನೀಡುವ ದೃಢತೆಯ ಆಯಾಮಗಳು ಅನೇಕ. ಮಾನಸಿಕ ದೃಢತೆ, ನಿರ್ಧಾರಗಳ ದೃಢತೆ, ಸಂಬಂಧಗಳ ದೃಢತೆ... ಎಲ್ಲಕ್ಕಿಂತ ಹೆಚ್ಚಾಗಿ ಬದುಕನ್ನು ಧೀರೋದಾತ್ತವಾಗಿ ಮುಖಾಮುಖಿಯಾಗುವ ದೃಢತೆ. ಲಂಕೇಶರೊಂದಿಗಿನ ಇಂದಿರಾ ಅವರ ದಾಂಪತ್ಯದ ಅಖಂಡತೆಯಲ್ಲಿ ಇದರ ಪಾತ್ರ ನಿರ್ಣಾಯಕವಾದುದೆಂದೇ ತೋರುತ್ತದೆ. ಇದರ ಮೂಲಕವೆ ಅವರು ಬಿಡುಗಡೆಯ ದಾರಿಗಳನ್ನೂ ಶೋಧಿಸಿಕೊಳ್ಳುತ್ತಾರೆ. ಬದುಕು ಒಡ್ಡಿದ ಸವಾಲುಗಳನ್ನು ಮೆಟ್ಟಿ ನಿಲ್ಲಲು ಇದು ನೀಡುವುದು ಕೇವಲ ಪ್ರಾಯೋಗಿಕ ಭದ್ರತೆಯನ್ನಲ್ಲ, ಬದುಕಿನ ವಿಸ್ತಾರಕ್ಕೆ ಒಡ್ಡಿಕೊಳ್ಳುವುದರ ಮೂಲಕ ಅವರ ಭಾವಲೋಕದ ವಿಸ್ತಾರ ಮಾತ್ರವಲ್ಲ ಬದುಕಿನ ಹೊಸ ಸಾಧ್ಯತೆಗಳ ಅನಾವರಣವೂ ಸಾಧ್ಯವಾಗುತ್ತದೆ.

ಆರ್ಥಿಕ ಸ್ವಾವಲಂಬನೆಯೇ ಮೂಲವಾಗಿ ವ್ಯಕ್ತಿತ್ವದ ವಿಕಾಸವೊಂದು ಸಾಧ್ಯವಾಗುವ ಪ್ರಕ್ರಿಯೆಯು ಈ ಆತ್ಮಕಥನದುದ್ದಕ್ಕೂ ಅನಾವರಣಗೊಳ್ಳುತ್ತಾ ಹೋಗುತ್ತದೆ. ಇದರ ಅಂತಿಮ ಫಲಿತವೆಂದರೆ ದಾಂಪತ್ಯವನ್ನು ಕುರಿತಂತೆ ಹೆಚ್ಚುವ ಧಾರಣಶಕ್ತಿ. ಹತಾಶೆಯಲ್ಲಿ, ಕಹಿಯಲ್ಲಿ ಮತ್ತು ಕೊನೆಯಿರದ ದ್ವೇಷದಲ್ಲಿ ಕೊನೆಗೊಳ್ಳಬಹುದಾದದ್ದು ತನಗೆ ಬೇಕಾದ ಅಂತರವನ್ನು, ಆವರಣವನ್ನು ಕಟ್ಟಿಕೊಳ್ಳುವುದರ ಮೂಲಕ ಈ ಎಲ್ಲವನ್ನೂ ನಿಭಾಯಿಸಲು ಬೇಕಾಗುವ ಮನೋಶಕ್ತಿಯನ್ನು ಈ ಆರ್ಥಿಕ ಸ್ವಾವಲಂಬನೆಯು ನೀಡುತ್ತದೆ.

ಈ ನಿರೂಪಣೆಯ ಮೊದಲಲ್ಲಿ ಕಾಣಿಸಿಕೊಳ್ಳುವ ಇಂದಿರಾಗೂ ಉತ್ತರಾರ್ಧದಲ್ಲಿ ಎದುರಾಗುವ ಇಂದಿರಾಗೂ ನಾವು ಗಮನಿಸಬಹುದಾದ ವ್ಯತ್ಯಾಸವೇ ಇದನ್ನು ಸ್ಪಷ್ಟವಾಗಿ

ಹೇಳುತ್ತದೆ. ಇತರರನ್ನು, ಮುಖ್ಯವಾಗಿ ಲಂಕೇಶರನ್ನು, ನೋಡುವ ಕ್ರಮದಲ್ಲಿಯೇ ಮೂಲಭೂತವಾದ ಬದಲಾವಣೆ ಕಾಣಿಸಿಕೊಳ್ಳುತ್ತದೆ. ಇಷ್ಟೇ ಮುಖ್ಯವಾದ ಇನ್ನೊಂದು ಪಲ್ಲಟ ಎಂದರೆ ತನ್ನನ್ನು ತಾನು ಗ್ರಹಿಸುವ ಕ್ರಮದಲ್ಲಾಗುವ ಪರಿವರ್ತನೆ. ತನ್ನನ್ನು ತಾನೇ ದುರಂತ ನಾಯಕಿಯೆಂದು ಭ್ರಮಿಸಿ ಲೋಕಕಾರುಣ್ಯವನ್ನು ಬಯಸುತ್ತಾ ಸ್ವಕರುಣೆಯಲ್ಲಿ ತೋಯ್ದು ಹೋಗುವ ಅಪಾಯದಿಂದಲೂ ಇಂದಿರಾ ಅವರು ಪಾರಾಗುತ್ತಾರೆ. ಉದಾಹರಣೆಗೆಂದು ಒಂದು ವಾಸ್ತವಕ್ಕೆ ಇಂದಿರಾ ಅವರ ಪ್ರತಿಕ್ರಿಯೆ ಮತ್ತು ಅದರ ಹಿಂದಿನ ದೃಷ್ಟಿಕೋನವನ್ನು ಚರ್ಚಿಸಬಹುದು. ಲಂಕೇಶರು ತಮಗೆ ಹೊಡೆದ ಪ್ರಸಂಗಗಳನ್ನು ಅವರು ನಿರೂಪಿಸುವ ಬಗೆಯಲ್ಲಿಯೇ ಅವರು ಆತ್ಮಮರುಕವನ್ನು ಗೆದ್ದಿರುವುದು ತಿಳಿಯುತ್ತದೆ. ಮಾತ್ರವಲ್ಲ, ಆ ಶೈಲಿಯೇ ಲಂಕೇಶರನ್ನು ವಿಲಕ್ಷಣ ಹಾಸ್ಯಾಸ್ಪದ ಸನ್ನಿವೇಶದಲ್ಲಿ ನಿಲ್ಲಿಸುತ್ತದೆ. ಹೊಡೆಯುವ ಅಥವಾ ಹೊಡೆದಾಟದ ಅಗತ್ಯವೆ ಇಲ್ಲದ ಕ್ಷಣಗಳಲ್ಲೂ ಹೊಡೆಯುವ ಮೂಲಕ ತನ್ನ ಅಸಹನೆಯನ್ನೂ, ಪುರುಷಾಧಿಕಾರವನ್ನೂ ಮೆರೆಯಲು ಹೊರಡುವ ಪುರುಷೋತ್ತಮನೇ ಇಲ್ಲಿ ಕರುಣೆಯ ವಸ್ತುವಾಗಿಬಿಡುತ್ತಾನೆ. ಅವನ ಬಗೆಗೆ ಕೋಪವನ್ನು ತಾಳದೆ ಸಮಾಧಾನಿಯಾಗಿ, ನೋಡಿ ಹೀಗಿತ್ತು ಆತನ ಸ್ವಭಾವ ಎಂದು ವ್ಯಕ್ತಿ ಚಿತ್ರದ ಅನಿವಾರ್ಯತೆಯಲ್ಲಿ ಕಟ್ಟಿಕೊಡುವ ಮೂಲಕವೇ ಅದನ್ನು ಗಂಡಿನ ಮಿತಿಯಾಗಿ, ದೌರ್ಬಲ್ಯವಾಗಿ ಸ್ಥಾಪಿಸಿಬಿಡುತ್ತಾರೆ. ಇದನ್ನೆಲ್ಲ ಉದ್ದೇಶಪೂರ್ವಕವಾಗಿ ಇಂದಿರಾ ಅವರು ಮಾಡಿಲ್ಲ ಎನ್ನುವದೇ ಈ ಕಥನದ ಹೆಚ್ಚುಗಾರಿಕೆ.

ಇತರ ಮಹಿಳೆಯರೊಡನೆ ಲಂಕೇಶರ ಗೆಳತನಗಳು ಒಡ್ಡುವ ಪ್ರಶ್ನೆಗಳನ್ನು ಇವರು ಎದುರಾಗುವ ಬಗೆಯೂ ಇಂಥದೇ. ಆರಂಭದಲ್ಲಿ ದಾಂಪತ್ಯಬದುಕು ಮುಗಿದೇಹೋಯಿತೆನ್ನುವ ಮನಸ್ಥಿತಿಯು ಬದಲಾಗಿ ಒಂದು ಕುತೂಹಲ ಹುಟ್ಟಿ, ಅವರ್‍ಯಾರೂ ಅಪ್ರತಿಮ ಸುಂದರಿಯಾಗಿರಲಿ, ಅಸಾಧಾರಣ ಪ್ರತಿಭಾವಂತರಾಗಲಿ ಅಲ್ಲವಲ್ಲ ಎನ್ನುವ ತೀರ್ಮಾನದಲ್ಲಿ ಮುಗಿಯುತ್ತದೆ. ಮೇಲ್ನೋಟಕ್ಕೆ ಆತ್ಮಪ್ರತ್ಯಯದ ನಿಲುವಾಗಿ ಕಾಣುವ ಇದು ಆಳದಲ್ಲಿ ಗಂಡುಹೆಣ್ಣಿನ ಸಂಬಂಧಗಳ ನಿಗೂಢವನ್ನು ಅರಿಯುವ ಪ್ರಯತ್ನವಾಗಿಯೂ, ಪತ್ಯಸಂಸ್ಕೃತಿಯು ಗಂಡಿಗೆ ಕೊಟ್ಟಿರುವ 'ಸವಲತ್ತಿ'ನ ಶೋಧವಾಗಿಯೂ ಕಾಣಿಸುತ್ತದೆ. ಅವರ ಇತರ ಹವ್ಯಾಸಗಳು, ಪ್ರಯೋಗಗಳ ಜೊತೆ ಈ ಗೆಳೆತನಗಳನ್ನೂ ಸೇರಿಸುವ ಮೂಲಕವೇ ಅವುಗಳನ್ನು ಎದುರಿಸಲು ಗಮನವಿರುವುದು ಇಂಥ ಮನೋವಿನ್ಯಾಸವು ತನ್ನದೇ ಆದ ಒಳಲೋಕವೊಂದನ್ನು, ಬದುಕಿನ ಗಮ್ಯವನ್ನು ಅರಿಯಲು ನೆರವಾಗುವುದರ ಬಗ್ಗೆ. ಇದರರ್ಥ ಬದುಕಿನ ಮತ್ತು ದಾಂಪತ್ಯದ ಸವಾಲುಗಳನ್ನೆಲ್ಲ ಇವರು ಗೆದ್ದು ಬಿಟ್ಟರು ಎಂದಲ್ಲ. ಇದೊಂದೆ ಅಂತಿಮ ದಾರಿಯೆಂದೂ ಅಲ್ಲ. ಇಂಥ ಹಲವು ದಾರಿಗಳ ಹುಡುಕಾಟ ಅನಿವಾರ್ಯವಲ್ಲವೆ ಎನ್ನುವ ಮೂಲಭೂತ ಪ್ರಶ್ನೆಯನ್ನು ಇತ್ತೀಚಿನ ಎಲ್ಲ ಮುಖ್ಯ ಮಹಿಳಾ ಆತ್ಮಕಥಾನಕಗಳೂ ಎತ್ತುತ್ತವೆ ಎನ್ನುವುದು ಆಕಸ್ಮಿಕವೂ ಅಲ್ಲ ಕಾಕತಾಳೀಯವೂ ಅಲ್ಲ. ಮಹಿಳಾ ಸಂಕಥನವು ಹಲವು ನಿರ್ಣಾಯಕ ನಿಲುವುಗಳಿಗೆ ಬರುತ್ತಿರುವುದನ್ನು ಗಮನಿಸಬೇಕಾಗಿರುವುದು ಈ ಹೊತ್ತಿನ ಮುಖಾಮುಖಿಯದು ಮಾತ್ರವಲ್ಲ, ಅವು ಸ್ವಾಯತ್ತತೆಯ ಹುಡುಕಾಟಗಳಾಗಿ ವಿಸ್ತಾರಗೊಳ್ಳುತ್ತಿರುವುದನ್ನು ನಾವು ಗಮನಿಸಬೇಕು.

ಲಂಕೇಶ್ ಮತ್ತು ಇಂದಿರಾ ಅವರ ಜಗಳದ ಸಂದರ್ಭವೊಂದರಲ್ಲಿ ಮಗಳು ಗೌರಿಯ ಪ್ರತಿಕ್ರಿಯೆಯನ್ನೂ ನಾವು ಈ ಹಿನ್ನೆಲೆಯಲ್ಲಿಯೇ ನೋಡಬೇಕು. ಇನ್ನೊಮ್ಮೆ ಹೀಗೆ ನಡೆದುಕೊಂಡರೆ ನಾನೇ ಕರೆದುಕೊಂಡು ಹೋಗಿ ಡೈವೋರ್ಸ್ ಕೊಡಿಸುವುದಾಗಿ

ಹೇಳುವ ಮಗಳ ಮಾತು ತಾಯಿಯಲ್ಲಿ ಆರಂಭವಾಗಿರುವ ಆತ್ಮಘನತೆಯ ಅನಾವರಣದ ಮುಂದುವರಿಕೆಯಾಗಿ ಕಾಣಿಸುತ್ತದೆ. ಮಹತ್ವದ ಮಾತೆಂದರೆ, ಅಷ್ಟು ಅಸೂಕ್ಷ್ಮವಾಗಿ ಮುಂದೆಂದೂ ಲಂಕೇಶರು ಜಗಳವಾಡುವುದಿಲ್ಲ ಎನ್ನುವುದು. ಇದನ್ನು ಮಗಳ ಮೇಲಿನ ಪ್ರೀತಿಯೆಂದೋ, ಅವ್ಯಕ್ತವಾಗಿ ಹುಟ್ಟಿರಬಹುದಾದ ಭಯವೆಂದೋ ವ್ಯಾಖ್ಯಾನಿಸುವುದು ಸುಲಭ. ಆದರೆ ಅಮೂರ್ತವಾದ ನೆಲೆಯಲ್ಲಿ ಸಂಬಂಧಗಳು ವ್ಯವಹರಿಸುವ ಮತ್ತು ಪಡೆಯುವ ತಿರುವುಗಳು ನಿಜಕ್ಕೂ ಅನೂಹ್ಯವೇ.

ಈ ಆತ್ಮಕಥನದ ಕೇಂದ್ರ ಯೌವನದ ಅನುರಕ್ತ ಪ್ರೀತಿಯು ಮಾಗಿದ ದಾಂಪತ್ಯವಾಗಿ ಸಂಪೂರ್ಣ ಯಶಸ್ಸು ಪಡೆಯದಿದ್ದರೂ ಪರಸ್ಪರ ಕಾಳಜಿ ಉಳಿಸಿಕೊಂಡು ಸಂಬಂಧವಾಗಿ ಇದು ಪಡೆಯುವ ಯಶಸ್ಸನ್ನು, ಸಾರ್ಥಕತೆಯನ್ನು ಇಂದಿರಾ ಅವರು ವ್ಯಾಖ್ಯಾನಿಸುವ ಪರಿಯಲ್ಲಿ. ವಿಷಾದವಿಲ್ಲವೆಂದಲ್ಲ, ಅಸಹನೆಯಿಲ್ಲವೆಂದಲ್ಲ. ಆದರೆ ಇದನ್ನೂ ಮೀರಿದ ನೆಲೆಯಲ್ಲಿ ಲಂಕೇಶರ ಪ್ರತಿಭೆಯನ್ನು, ಅಸಾಧಾರಣ ಸಾಹಸಮಯ ಪ್ರಯೋಗಗಳನ್ನು ಮೆಚ್ಚಿ ಗೌರವಿಸುವುದು ಸಾಧ್ಯವಾಗುವುದು ಪ್ರೀತಿಯಿಂದಲೋ, ಆ ಪ್ರತಿಭೆ ಸಹಜವಾಗಿ ಮತ್ತು ಅನಿವಾರ್ಯ ಹಕ್ಕಿನಿಂದ ಪಡೆಯುವ ಮನ್ನಣೆಯಿಂದಲೋ ಎಂದು ಕೇಳಿದರೆ ಎರಡೂ ಇಂದು ಉತ್ತರಿಸುವುದು ಅನಿವಾರ್ಯವಾಗುತ್ತದೆ. ಗುಪ್ತಗಾಮಿನಿಯಾಗಿ ಹರಿಯುವ ಪ್ರೀತಿಯ ಝಲಕ್ಕುಗಳು ಈ ಕೃತಿಯುದ್ದಕ್ಕೂ ಕಾಣಿಸಿಕೊಳ್ಳುತ್ತವೆ. ತಮ್ಮ ದಾಂಪತ್ಯದ ಮುಂದುವರಿದ ಘಟ್ಟವು ಪ್ರೀತಿಗಿಂತ ಕಾಳಜಿಯದು ಎನ್ನುತ್ತಾರೆ. ಇದಕ್ಕೆ ಪೂರಕವೋ ಎನ್ನುವಂತೆ ಹಲವಾರು ಉದಾಹರಣೆಗಳು ಇಲ್ಲಿವೆ. ಒಂದಂತೂ ನಿಜಕ್ಕೂ ಹೃದಯಸ್ಪರ್ಶಿಯಾಗಿದೆ. ಇಂಡಿಯನ್ ಡೆಲಿಕೆಸಿ ಎಂದೇ ಪ್ರಖ್ಯಾತವಾದ ಹೋಳಿಗೆಯ ಪರಮಭಕ್ತರು ಲಂಕೇಶ್. ಅವರಿಗೆ ಡಯಾಬಿಟಿಸ್ ತೊಂದರೆ ಇದ್ದಾಗಲೂ ಈ ಭಕ್ಷ್ಯದ ಮೇಲಿನ ಪ್ರೀತಿಯನ್ನು ಅವರು ಕಳೆದುಕೊಂಡಿರಲಿಲ್ಲ. ಅವರ ಆರೋಗ್ಯದ ಮೇಲಿನ ಪ್ರೀತಿಯಿಂದಲೇ ಇಂದಿರಾ ಅವರು ಒಂದೇ ಹೋಳಿಗೆಯನ್ನು ಬಡಿಸಿ ಸುಮ್ಮನಿದ್ದರೆ, ಟೇಬಲ್ ಮೇಲೆ ಕುಳಿತ ಲಂಕೇಶ್ ಇನ್ನೊಂದು ಹೋಳಿಗೆಗಾಗಿ ಕಾಯುತ್ತಲೇ ಇದ್ದಾರೆ. ಸ್ವಲ್ಪ ಹೊತ್ತು ನೋಡಿ ಇನ್ನೂ ಅವರು ಅಲ್ಲೇ ಕೂತಿದ್ದಾಗ ಇನ್ನೊಂದು ಹೋಳಿಗೆಯನ್ನು ಬಡಿಸುತ್ತಾರೆ. ಅವರಿಗಾದ ಸಂತೋಷವನ್ನು ಅವರಿಗೆ ಪ್ರಿಯವಾದ ಉದ್ಗಾರವೇ ಹೇಳುತ್ತದೆ. ಹುಟ್ಟಿದ ಹಬ್ಬಗಳಂದು ಇವರು ಕೊಟ್ಟ ಬಟ್ಟೆ ಧರಿಸುವುದೂ ಸೇರಿದಂತೆ ಅನೇಕ ಉದಾಹರಣೆಗಳು ಇಲ್ಲಿವೆ. ಪ್ರೀತಿ, ಗೌರವ, ಕಾಳಜಿಗಳು ಬೆರೆತ ಮನಸ್ಥಿತಿಯೊಂದು ಇಲ್ಲಿದೆ

ಇಂದಿರಾ ಅವರ ಈ ಆತ್ಮಕಥನಕ್ಕೆ ಕೆಲವು ಮಿತಿಗಳನ್ನು ಗುರುತಿಸಬಹುದು ನಿಜ. ಆದರೆ ಸ್ವತಃ ಇಂದಿರಾ ಅವರಿಗೇ ಇದರ ಬಗ್ಗೆ ಅಪಾರ ಮಹತ್ವಾಕಾಂಕ್ಷೆಯೇನೂ ಇಲ್ಲ. ಸರಳವಾದ, ನೇರವಾದ ಆದಷ್ಟೂ ಪ್ರಾಮಾಣಿಕವಾದ ಚಿತ್ರಗಳನ್ನು ಕೊಡಲು ಅವರು ಪ್ರಯತ್ನಿಸಿದ್ದಾರೆ. ವರ್ಣರಂಜಿತವಾದ ಚಿತ್ರ ಕೊಡುವುದರಲ್ಲಿ ಇವರಿಗೆ ಆಸಕ್ತಿಯಿಲ್ಲ ಎನ್ನುವುದು ಸಣ್ಣ ಸಂಗತಿಯಲ್ಲ. ಬಹು ಸಂಕೀರ್ಣವಾದ ವ್ಯಕ್ತಿಯೊಂದಿಗಿನ ಬದುಕಿನ ಹಲವು ಆಯಾಮಗಳನ್ನು ತಾತ್ವಿಕ ನಿಲುವುಗಳ ಗೊಡವೆಗೆ ಹೋಗದೆ ಅನುಭವದ ಆಧಾರದ ಮೇಲೆಯೇ ಕಟ್ಟಿಕೊಡುವ ತಮ್ಮ ಪ್ರಯತ್ನದಲ್ಲಿ ಇಂದಿರಾ ಅವರು ಆತ್ಮವಂಚನೆ ಮಾಡಿಕೊಂಡಿಲ್ಲ ಎನ್ನುವುದು ಓದುಗರ ಅನುಭವಕ್ಕೆ ಬರುತ್ತದೆ ಎನ್ನುವುದೇ ಈ ಕೃತಿಯ ಯಶಸ್ಸು

(ಸಾಭಾರ - ಹುಳಿಮಾವು ಮತ್ತು ನಾನು ಪುಸ್ತಕ)

ಮಲಾಲಾ ಯೂಸಫ್ ಜೇಯಿಯ ದಿನಚರಿ

(ಮೂಲ ಕೃತಿ 'ಗುಲ್ ಮಕಂಯಿಯ ಡೈರಿ' ಜನವರಿಯಿಂದ ಮಾರ್ಚ ೨೦೦೯ರ ಮಧ್ಯೆ ಹತ್ತು ಕಂತುಗಳಲ್ಲಿ ಬಿ.ಬಿ.ಸಿಯ ಉರ್ದು ವೆಬ್‌ಸೈಟ್‌ನಲ್ಲಿ ಪ್ರಕಟಗೊಂಡಿತು. ಜಗತ್ತಿನಾದ್ಯಂತ ಈ ದಿನಚರಿ ತುಮುಲವನ್ನೆಬ್ಬಿಸಿತು. ಡಿಸೆಂಬರ್ ೨೦೦೯ರಲ್ಲಿ ಈ ಗುಲ್‌ಮಕಂಯಿ ಸ್ವಾತ್ ಎಂಬುವವರ ಮಗಳೆಂದೂ ಅವಳ ಹೆಸರು ಮಲಾಲ ಯೂಸೂಫ್ ಜೆಯಿಯೆಂದೂ ಗೊತ್ತಾಯಿತು. ೯ ಅಕ್ಟೋಬರ್ ರಂದು ತಾಲಿಬಾನ್ ಭಯೋತ್ಪಾದಕರು ೧೫ ವರ್ಷದ ಮಲಾಲ ಯೂಸೂಫ್ ಜೆಯಿಯ ಮೇಲೆ ಮಾರಣಾಂತಿಕ ದಾಳಿಮಾಡಿದರು. ಇಲ್ಲಿ ಈ ವೀರ ಬಾಲಕಿಯ ದಿನಚರಿಯ ಕೆಲ ಅಂಶ ಪ್ರಸ್ತುತವಾಗಿದೆ - ಸಂ)

ಶನಿವಾರ ೩ ಜನವರಿ ೨೦೦೯ :–ನಾನು ಭಯಭೀತಳಾದೆ ಮತ್ತು ವೇಗವನ್ನು ಹೆಚ್ಚಿಸಿದೆ. ನಿನ್ನೆ ರಾತ್ರಿ ಪೂರ್ತ ನಾನು ಭಯಾನಕ ಕನಸನ್ನು ಕಂಡೆ. ಅದರಲ್ಲಿ ಸೇನೆಯ ಹೆಲಿಕ್ಯಾಪ್ಟರ್ ಮತ್ತು ತಾಲಿಬಾನಿಗಳು ಕಾಣಿಸಿದರು. ಸೇನಾ ಕಾರ್ಯಚರಣೆ ಪ್ರಾರಂಭವಾದ ನಂತರ ಈ ಪ್ರಕಾರದ ಕನಸನ್ನು ಪದೇ ಪದೇ ಕಾಣುತ್ತಿದ್ದೇನೆ. ತಾಯಿ ಉಪಹಾರ ಕೊಟ್ಟಳು ನಂತರ ಸಿದ್ಧವಾಗಿ ಶಾಲೆಗೆ ಹೊರಟೆ. ಶಾಲೆಗೆ ಹೋಗುವ ಸಮಯದಲ್ಲಿ ಬಹಳ ಹಿಂಜರಿತವಾಗುತ್ತಿತ್ತು. ಏಕೆಂದರೆ ಹುಡುಗಿಯರು ಶಾಲೆಗೆ ಹೋಗಕೂಡದೆಂದು ತಾಲಿಬಾನಿಗಳು ಘೋಷಣೆ ಮಾಡಿದ್ದರು.

ಇಂದು ನನ್ನ ತರಗತಿಯಲ್ಲಿ ೩೨ ಹುಡುಗಿಯರಲ್ಲಿ ಕೇವಲ ೧೧ ಹುಡುಗಿಯರು ಹಾಜರಿದ್ದರು. ಸಂಖ್ಯೆ ಕಡಿಮೆಯಾಗಿರುವುದಕ್ಕೆ ಜನರು ತಾಲಿಬಾನ್ ಘೋಷಣೆಯಿಂದ ಹೆದರಿರುವುದು ಕಾರಣವಾಗಿದೆ. ನನ್ನ ಮೂರು ಜನ ಗೆಳತಿಯರು ಶಾಲೆಯನ್ನು ಬಿಟ್ಟು ತಮ್ಮ ಪರಿವಾರದೊಂದಿಗೆ ಪೇಷಾವರ್, ಲಾಹೋರ್ ಮತ್ತು ರಾವಲ್‌ಪಿಂಡಿಗೆ ಹೋಗಿಬಿಟ್ಟಿದ್ದಾರೆ. ಒಂದು ಗಂಟೆ ನಲವತ್ತು ನಿಮಿಷದ ನಂತರ ಶಾಲೆ ಬಿಟ್ಟಿತು. ಮನೆಗೆ ಹೋಗುವ ವೇಳೆ ದಾರಿಯಲ್ಲಿ ನನಗೆ ಒಬ್ಬ ಮನುಷ್ಯನ ಕೂಗು ಕೇಳಿಬಂತು. "ನಾನು ನಿನ್ನನ್ನು" ಬಿಡುವುದಿಲ್ಲ. ಎಂದು ಹೇಳುತ್ತಿದ್ದ. ನಾನು ಹೆದರಿಬಿಟ್ಟೆ ಮತ್ತು ನನ್ನ ನಡಿಗೆಯ ವೇಗವನ್ನು ಹೆಚ್ಚಿಸಿದೆ ಸ್ವಲ್ಪ ದೂರ ಹೋದ ನಂತರ ಹಿಂತಿರುಗಿ ನೋಡಿದೆ. ಅವನು ಬೇರೆ ಯಾರಿಗೊ ಫೋನ್ ಮಾಡಿ ಹೆದರಿಸುತ್ತಿದ್ದ. ಅವನು ಬಹುಶಃ ನನಗೆ ಹೇಳುತ್ತಿದ್ದಾನೆ ಎಂದು ಅನಿಸಿತು.

ಸೋಮವಾರ ೫ ಜನವರಿ ೨೦೦೯ :– "ಜಗಮಗಿಸುವ ಬಟ್ಟೆಯನ್ನು ಧರಿಸಿಕೊಂಡು ಬರಬೇಡಿ. ಎಂದು ಶಾಲೆಗೆ ಹೋಗಲು ನಾನು ಸಮವಸ್ತ್ರ ಹಾಕಿಕೊಳ್ಳಲು. ಕೈ ಮುಂದೆ ಚಾಚಿದಾಗ ಹೆಡ್‌ಮಿಸ್ಟ್ರೆಸ್ ಹೇಳಿದ ಈ ಮಾತು ನೆನಪಿಗೆ ಬಂತು. "ಇನ್ನು ಮೇಲೆ ಮನೆಯಲ್ಲಿ ಹಾಕಿಕೊಳ್ಳುವ ಬಟ್ಟೆಯನ್ನು ಹಾಕಿಕೊಂಡು ಬನ್ನಿ" ಎಂದು ಹೇಳಿದ ಮಾತು ನೆನಪಿಗೆ ಬಂತು. ನಾನು ನನಗೆ ಇಷ್ಟವಾದ ಗುಲಾಬಿ ಬಣ್ಣದ ಬಟ್ಟೆ ಧರಿಸಿದೆ. ಶಾಲೆಯಲ್ಲಿ ಪ್ರತಿಯೊಬ್ಬ ಹುಡುಗಿಯರು ಮನೆಯ ಉಡುಪನ್ನೆ ಹಾಕಿಕೊಂಡಿದ್ದರು. ಅದರಿಂದಾಗಿ ಶಾಲೆ ಮನೆಯಂತೆಯೆ

ಅನಿಸುತ್ತಿತ್ತು. ನನ್ನ ಓರ್ವ ಗೆಳತಿ ಹೆದರುತ್ತಾ ನನ್ನ ಬಳಿಗೆ ಬಂದಳು ಮತ್ತು ಪದೇ ಪದೇ ಕುರಾನ್‌ನನ್ನು ನೋಡಿ "ದೇವರ ಆಣಿ ಇಟ್ಟು ಹೇಳು. ನಮ್ಮ ಶಾಲೆಗೆ ತಾಲಿಬಾನ್‌ರಿಂದ ಅಪಾಯ ಇದೆಯೋ ಇಲ್ಲವೋ"? ನಾನು ಶಾಲೆಗೆ ಸಂಬಂಧಿಸಿದ ಖರ್ಚನ್ನು ಸಮವಸ್ತ್ರ ಸಮವಸ್ತ್ರದಲ್ಲಿ ಇಡುತ್ತಿದ್ದೆ ಇಂದು ಮರೆತು ತಪ್ಪಾಗಿ ನನ್ನ ಜೇಬಿನಲ್ಲಿ ಕೈಹಾಕಲು ಪ್ರಯತ್ನಿಸಿದರೆ ಕೈ ಜಾರಿಬಿಡುತ್ತಿತ್ತು. ಏಕೆಂದರೆ ನನ್ನ ಮನೆಯ ಬಟ್ಟೆಗೆ ಜೇಬು ಇರಲಿಲ್ಲ.

ಇಂದು ಆಸ್ಲೆಂಬಿಯಲ್ಲಿ ನಮಗೆ ಪುನಃ "ಇನ್ನು ಮೇಲೆ ತಳಕು ಬಳಕಿನ ಬಟ್ಟೆ ಧರಿಸಿ ಬರಬೇಡಿ" ಎಂದು ಹೇಳಲಾಯಿತು. ಏಕೆಂದರೆ ಅದರ ಮೇಲೆಯೂ ತಾಲಿಬಾನ್‌ರು ಸಿಟ್ಟಾಗಲು ಸಾಧ್ಯವಿದೆ.

ಬುಧವಾರ ೧೪ ಜನವರಿ ೨೦೦೯ :- ಬಹುಶಃ ಇನ್ನೊಮ್ಮೆ ಸ್ಕೂಲ್‌ಗೆ ಬರದೆ ಹೋದರೆ? ಇಂದು ನಾನು ಶಾಲೆಗೆ ಹೋಗುವ ಸಮಯದಲ್ಲಿ ಬಹಳ ಹೆದರಿದ್ದೆ. ಏಕೆಂದರೆ ನಾಳೆಯಿಂದ ಚಳಿಗಾಲದ ರಜೆ ಶುರವಾಗುವದರಲ್ಲಿತ್ತು. ಹೆಡ್‌ಮಿಸ್ಟ್ರೆಸ್ ರಜೆಯ ಘೋಷಣೆಯನ್ನೇನೋ ಮಾಡಿದರು ಆದರೆ ನಿಗದಿತ ದಿನಾಂಕವನ್ನು ತಿಳಿಸಲಿಲ್ಲ. ಹೀಗಾದುದು ಮೊದಲಸಲ. ಮೊದಲು ಯಾವಾಗಲೂ ರಜೆ ಮುಗಿಯುವ ನಿಗದಿತ ದಿನಾಂಕವನ್ನು ತಿಳಿಸಲಾಗುತ್ತಿತ್ತು. ಇದರ ಕಾರಣವೇನು ಎಂಬುದನ್ನು ಅವರು ಹೇಳಲಿಲ್ಲ. ಆದರೆ ನನ್ನ ತಿಳುವಳಿಕೆಯ ಪ್ರಕಾರ ಜನವರಿ ೧೫ರ ನಂತರ ಹುಡುಗಿಯರು ಶಾಲೆಗೆ ಹೋಗುವುದರ ಮೇಲೆ ತಾಲಿಬಾನ್‌ಗಳ ಹಾಕಿದ ನಿರ್ಬಂಧ ಇದಕ್ಕೆ ಕಾರಣವಾಗಿತ್ತು.

ಈ ಸಲ ಹುಡುಗಿಯರು ಕೂಡ ರಜೆಯ ಬಗ್ಗೆ ಮೊದಲಿನಂತೆ ಖುಷಿಯಾಗಿರುವುದು ಕಾಣುತ್ತಿರಲಿಲ್ಲ. ಏಕೆಂದರೆ ಒಂದು ವೇಳೆ ತಾಲಿಬಾನರು ತಮ್ಮ ಘೋಷಣೆ ಪ್ರಕಾರ ನಡೆದುಕೊಂಡದ್ದೆ ಆದರೆ ಬಹುಶಃ ಇನ್ನೊಮ್ಮೆ ಶಾಲೆಗೆ ಬರಲಾರೆ.

ಗುರುವಾರ ೧೫ ಜನವರಿ ೨೦೦೯ :- ರಾತ್ರಿ ತೋಪುಗಳ ಘರ್ಜನೆಯಿತ್ತು. ಆ ಕಾರಣದಿಂದಾಗಿ ನಾನು ಮೂರುಸಲ ಎಚ್ಚೆತ್ತು ಕುಳಿತೆ. ಇಂದಿನಿಂದಲೇ ಶಾಲೆಗೆ ರಜೆ ಕೂಡ ಪ್ರಾರಂಭವಾಗಿದೆ. ಆದ್ದರಿಂದ ನಾನು ಆರಾಮಾಗಿ ಹತ್ತು ಗಂಟೆಗೆ ಎದ್ದೆ. ನಂತರ ನನ್ನ ತರಗತಿಯ ಸ್ನೇಹಿತೆಯೊಬ್ಬಳು ಬಂದಳು. ನನ್ನೊಂದಿಗೆ ಹೋಂವರ್ಕ್ ಬಗ್ಗೆ ಚರ್ಚೆಮಾಡಿದಳು. ಇಂದು ೧೫ ಜನವರಿ ಅಂದರೆ ತಾಲಿಬಾನ್‌ರ ಪ್ರಕಾರ ಹುಡುಗಿಯರು ಶಾಲೆಗೆ ಹೋಗದಿರುವ ಬಗ್ಗೆ ಎಚ್ಚರಿಕೆ ಕೊಟ್ಟ ಗಡುವಿನ ಕೊನೆಯ ದಿನಾಂಕ. ಆದರೆ ನನ್ನ ಸ್ನೇಹಿತೆ ಸ್ವಲ್ಪ ಗಂಭೀರವಾಗಿಯೇ ಹೋಂವರ್ಕ್ ಮಾಡುತ್ತಿದ್ದಳು, ಏನೂ ಆಗಿಲ್ಲವೋ ಎಂಬಂತೆ. ನಾನು ಇಂದು ಬಿ.ಬಿ.ಸಿಯಲ್ಲಿ ಬಿತ್ತರಗೊಳ್ಳುತ್ತಿದ್ದ ನನ್ನ ಡೈರಿಯನ್ನು ಓದಿದೆ. ನನ್ನ ತಾಯಿಗೆ ನನ್ನ ಗುಪ್ತ ಹೆಸರು 'ಗುಲ್‌ಮಕಯಿ' ಬಹಳ ಇಷ್ಟವಾಯಿತು. ಮತ್ತು ತಂದೆ ಹತ್ತಿರ ನನ್ನ ಹೆಸರನ್ನು ಬದಲಿಸಿ ಗುಲ್‌ಮಕಯಿ ಎಂದು ಯಾಕಿಡಬಾರದು? ಎಂದು ಕೇಳಿದಳು. ನನಗೂ ಕೂಡ ಈ ಹೆಸರು ಇಷ್ಟವಾಯಿತು. ಏಕೆಂದರೆ ನನ್ನ ಈಗಿನ ಹೆಸರು ಚೆನ್ನಾಗಿರಲಿಲ್ಲ. ಕೆಲವು ದಿನಗಳ ಹಿಂದೆ ಯಾರೋ ಡೈರಿಯ ಪ್ರಿಂಟ್ ತೆಗೆದು ತನಗೆ ತೋರಿಸಿದ್ದರೆಂಬುದಾಗಿ ತಂದೆ ಹೇಳಿದರು. ಸ್ವಾತದ ತಾಲಿಬಾನಿಗಳು ಎಷ್ಟೊಂದು ಜಬರದಸ್ತ್ ಡೈರಿ ಪ್ರಕಟವಾಗುತ್ತಿದೆ

ಎಂದು ಹೇಳಿದರು? "ತಂದೆಯವರು ನಗುತ್ತಾ ಡೈರಿ ಮೇಲೆ ಕಣ್ಣು ಹಾಯಿಸಿದರು ಮತ್ತು ಹೆದರಿಕೆಯಿಂದ ಇದು ನನ್ನ ಮಗಳದು ಎಂದು ಹೇಳಲಿಲ್ಲ" ಪುನಃ ಐದು ಶಾಲೆಗಳನ್ನು ಬಾಂಬ್‌ಗಳಿಂದ ಹಾರಿಸಿ ಒಡೆಯಲಾಯಿತು. ಇವುಗಳಲ್ಲಿ ಒಂದಂತು ನನ್ನ ಮನೆಯ ಸಮೀಪವಿದೆ. ಈ ಶಾಲೆಗಳು ಮುಚ್ಚಿದ್ದರು ಕೂಡಾ ಅವುಗಳಿಗೆ ಏಕೆ ಬೆಂಕಿ ಹಚ್ಚಲಾಯಿತು ಎಂಬ ಬಗ್ಗೆ ನಾನು ಹತಾಶಳಾದೆ. ತಾಲಿಬಾನ್‌ರು ತಿಳಿಸಿದ್ದ ಅಂತಿಮ ಗಡುವಿನ ನಂತರ ಯಾರೂ ಶಾಲೆಗೆ ಕಾಲಿಟ್ಟಿರಲಿಲ್ಲ. ಏಕೆ ಈ ಜನ ಕಟ್ಟಡಕ್ಕೆ ಹಾನಿ ಮಾಡುತ್ತಿದ್ದಾರೆ. ಸೇನೆ ಕೂಡಾ ಏನು ಮಾಡುತ್ತಿಲ್ಲ. ಅದು ಬೆಟ್ಟಗಳಲ್ಲಿ ತನ್ನ ಬೀಡು ಬಿಟ್ಟಿದೆ. ಕುರಿಗಳು ಮೇಯಲು ಬಂದಾಗ ಅವುಗಳನ್ನು ಹೊಡೆದು ಸೈನಿಕರು ಮಜವಾಗಿ ತಿನ್ನುತ್ತಾರೆ.

ಮಂಗಳವಾರ ೨೦ ಜನವರಿ ೨೦೦೯ :- ಎಲ್ಲಿ ಸೇನೆ ಇದೆಯೋ ಅಲ್ಲಿ ತಾಲಿಬಾನರಿದ್ದಾರೆ ಎಲ್ಲಿ ತಾಲಿಬಾನರಿದ್ದಾರೋ ಅಲ್ಲಿ ಸೇನೆಯಿಲ್ಲ.

ಶಾಲೆಗಳು ಮುಚ್ಚಿದ ನಂತರ ಮನೆಯಲ್ಲಿ ಕುಳಿತು ಬಹಳ ಬೇಸರ ಪಟ್ಟು ಕೊಂಡಿದ್ದೇನೆ. ನನ್ನ ಆಪ್ತ ಗೆಳತಿಯರು ಸ್ವಾತ್‌ದಿಂದ ಹೊರಟು ಹೋಗಿದ್ದಾರೆ. ಸ್ವಾತ್‌ನಲ್ಲಿ ಇತ್ತೀಚಿನ ಸ್ಥಿತಿ ಬಹಳ ಕೆಟ್ಟಿದೆ. ಹೆದರಿಕೆಯಿಂದ ಮನೆಬಿಟ್ಟು ಹೊರಗೆ ಬರಲಾರೆ ರಾತ್ರಿಕೂಡ ಮೌಲಾನಷಹಃ ಡೌರಾನ್ F.M ಚಾನಲ್‌ನಲ್ಲಿ ಹುಡುಗಿಯರು ಮನೆಯಿಂದ ಹೊರಗೆ ಹೋಗಕೂಡದು ಎಂದು ಹೆದರಿಸಿದ್ದ. ಮತ್ತು ನಾಳೆ ಮೂರು ಜನ ಕಳ್ಳರಿಗೆ ಚಾವಟಿಯಿಂದ ಹೊಡೆಯಲಾಗುವುದು ಮತ್ತು ತಮಾಷೆಯನ್ನು ನೋಡಬಯಸುವವರು ಅಲ್ಲಿಗೆ ಬರಬೇಕೆಂದು ಕೂಡಾ ಹೇಳಿದನು. ಸೇನೆ ಏಕೆ ತಾಲಿಬಾನಿರ ಇಂಥ ಕೃತ್ಯವನ್ನು ತಡೆಯುವುದಿಲ್ಲ? ಎಲ್ಲಿ ಸೈನ್ಯವಿರುವುದೋ ಅಲ್ಲಿ ತಾಲಿಬಾನ್‌ರು ಇರುವುರು ಆದರೆ ಎಲ್ಲಿ ತಾಲಿಬಾನ್‌ರು ಇರುವರೊ ಅಲ್ಲಿಗೆ ಸೈನ್ಯ ಹೋಗುವುದಿಲ್ಲ. ಎಂಬುದನ್ನು ಕಂಡಿದ್ದೇನೆ.

ಭಾನುವಾರ ೮ ಫೆಬ್ರವರಿ ೨೦೦೯ :- ಸಮವಸ್ತ್ರ, ಟೈ ಮತ್ತು ಜಾಮಿಟ್ರಿ ಬಾಕ್ಸ್ ನೋಡಿ ದುಃಖವಾಯಿತು. ನಾಳೆ ಎಲ್ಲಾ ಖಾಸಗಿ ಶಾಲೆಗಳಲ್ಲಿ ಹನ್ನೆರಡನೆ ತರಗತಿ ಪ್ರಾರಂಭವಾಗಲಿದೆ. ಹುಡುಗಿಯರ ಶಿಕ್ಷಣದ ಮೇಲೆ ತಾಲಿಬಾನ್ ನಿಷೇಧ ಮಾಡಿದೆ.

ನಾನು ಜಾಮಿಟ್ರಿ ಬಾಕ್ಸ್ ತೆರೆದೆನು ಅದರಲ್ಲಿ ನೂರು ರೂಪಾಯಿಯಿತ್ತು. ಇದು ಶಾಲೆಗೆ ತೆರಬೇಕಾದ ಹಣ. ಯಾವುದೇ ಹುಡುಗಿ ಸ್ಕೂಲಿಗೆ ಬರದಿದ್ದರೆ ಅಥವಾ ತಡವಾಗಿ ಬಂದಿದ್ದರೆ ಅವರಿಂದ ಪಡೆದ ದಂಡದ ಹಣ ತೆಗೆದುಕೊಳ್ಳುವ ಹೊಣೆಗಾರಿಕೆಯನ್ನು ಟೀಚರ್ ನನಗೆ ಕೊಟ್ಟಿದ್ದರು.

ಶನಿವಾರ ೨೧ ಫೆಬ್ರವರಿ ೨೦೦೯ :- ತಾಲಿಬಾನ್‌ರು ಹುಡುಗಿಯರ ಶಾಲೆಯ ಮೇಲಿದ್ದ ನಿಷೇಧವನ್ನು ತೆಗೆದು ಹಾಕಿದ್ದಾರೆ. ಸ್ವಾತ್‌ನಲ್ಲಿ ಪರಿಸ್ಥಿತಿ ಬೇಗ ಬೇಗ ಸುಧಾರಣೆಯಾಗುತ್ತಿದೆ. ಫೈರಿಂಗ್ ಮತ್ತು ತೋಪಿನ ಉಪಯೋಗದಲ್ಲಿ ಬಹಳಷ್ಟು ಕಡಿಮೆಯಾಗಿದೆ ಆದರೆ ಜನರು ಹೆದರಿಯೇ ಇದ್ದಾರೆ, ಎಲ್ಲಿ ಶಾಂತಿ ಭಂಗವಾಗುವುದೊ ಎಂದು. ತಾಲಿಬಾನ್‌ರ ಕೆಲವು ಕಮಾಂಡೊಗಳು ಈ ಶಾಂತಿಯನ್ನು ಒಪ್ಪುತ್ತಿಲ್ಲವೆಂದೂ ಮತ್ತು ತಾವು ಕೊನೆಯ ಉಸಿರು ಇರುವವರೆಗೂ ಹೋರಾಡುತ್ತೇವೆಂಬುದಾಗಿ ಹೇಳುತ್ತಾರೆಂದು ಜನರು ಸುದ್ದಿಯನ್ನು ಹಬ್ಬಿಸಿದ್ದಾರೆ.

ಈಗ ಸ್ವಲ್ಪ ಹೊತ್ತಿನಲ್ಲಿ ಮೌಲಾನ ಪಜಲುಲ್ಲಾ. F.M ಮೇಲೆ ಘೋಷಣೆ ಮಾಡಿ ಶಾಲೆಯ ಮೇಲೆ ಸದ್ಯ ವಿಧಿಸಲಾಗಿದ್ದ ತಮ್ಮ ತೀರ್ಮಾನವನ್ನು ಹಿಂತೆಗೆದುಕೊಳ್ಳುತ್ತೇವೆ ಮತ್ತು ಹುಡುಗಿಯರ ಪರೀಕ್ಷೆ ಆಗುವವರೆಗೆ ಅಂದರೆ ಮಾರ್ಚ ೧೭ರಿಂದ ಶಾಲೆಗೆ ಹೋಗಬಹುದು. ಆದರೆ ಅವರು ಬುರ್ಖಾ ಹಾಕಿಕೊಳ್ಳಬೇಕಾಗವುದು. ಇದನ್ನು ಕೇಳಿ ನನಗೆ ತುಂಬಾ ಸಂತೋಷವಾಯಿತು. ಹೀಗೆಯೂ ಆಗಬಹುದೆಂದು ನಂಬಿಕೆಯಿರಲಿಲ್ಲ.

೨೯ ಫೆಬ್ರವರಿ ೨೦೦೯ :– ಶಾಲೆಗಳು ತೆರೆದವು. ಇಂದು ಏಳುವಾಗಲೇ ನಾನು ಸಂತೋಷವಾಗಿದ್ದೆ. ಶಾಲೆಗೆ ಹೋದ ಮೇಲೆ ನೋಡಿದೆ ಕೆಲವು ಹುಡುಗಿಯರು ಸಮವಸ್ತ್ರ ಮತ್ತು ಇನ್ನು ಕೆಲವರು ಮನೆಯಲ್ಲಿ ಹಾಕಿಕೊಳ್ಳುವ ಬಟ್ಟೆಯೊಂದಿಗೆ ಬಂದಿದ್ದರು. ಅಸೆಂಬ್ಲಿಯಲ್ಲಿ ಹೆಚ್ಚಿನ ಹುಡುಗಿಯರು ಅಲಂಗಿಸಿಕೊಳ್ಳುತ್ತಿದ್ದರು ಹಾಗೂ ಬಹಳ ಖುಷಿಯಿಂದ ಇರುವಂತೆ ಕಾಣುತ್ತಿದ್ದರು. ಅಸೆಂಬ್ಲಿ ಮುಗಿದ ನಂತರ ಮುಖ್ಯೋಪಾಧ್ಯಾಯನಿ "ಹುಡುಗಿಯರು ಶಾಲೆಗೆ ಹೋಗುವುದಕ್ಕೆ ಅನುಮತಿ ಕೊಟ್ಟಾಗ ಬುರ್ಖಾ ಹಾಕಿಕೊಂಡು ಹೋಗಬೇಕೆಂದು ತಾಲಿಬಾನ್‌ಗಳು ಷರತ್ತು ಹಾಕಿದ್ದಾರೆ" ಎಂದರು.

ನನ್ನ ತರಗತಿಗೆ ಕೇವಲ ೧೨ ಹುಡುಗಿಯರು ಬಂದಿದ್ದರು. ಏಕೆಂದರೆ ಕೆಲವರು ಸ್ವಾತ್‌ನಿಂದ ಮನೆಮಠ ಬಿಟ್ಟು ಹೋಗಿದ್ದರು ಮತ್ತು ಇನ್ನು ಕೆಲವರು ಚಿಕ್ಕವರಾಗಿದ್ದಾರೆ. ಅವರಿಗೆ ಅವರ ಬಾಲ್ಯದ ಕಾರಣದಿಂದ ಶಾಲೆಗೆ ಹೋಗುವ ಅನುಮತಿ ಸಿಗುತ್ತಿಲ್ಲ. ಇನ್ನು ಕೆಲವರು ರಾವಲ್ಪಿಂಡಿಗೆ ಹೋಗುತ್ತಿದ್ದೇವೆಂದು ಹೇಳಿದರು, ನನಗೆ ಬಹಳ ದುಃಖವಾಯಿತು. ಈಗ ಪ್ರದೇಶದಲ್ಲಿ ಪರಿಸ್ಥಿತಿ ನಿಧಾನವಾಗಿ ಸರಿಯಾಗುತ್ತಿದೆಯಾದ್ದರಿಂದ ಈಗ ಹೋಗಬೇಡಿ ಎಂದು ಹೇಳಿದೆ. ಆದರೆ ಅವರು ಪರಿಸ್ಥಿತಿ ಬಗ್ಗೆ ಯಾವುದೇ ಭರವಸೆಯಿಲ್ಲವೆಂದು ಹೇಳುತ್ತಿದ್ದರು. ಈಗಾಗಲೇ ನನ್ನ ನಾಲ್ಕು ಜನ ಗೆಳತಿಯರು ಹೊರಟು ಹೋಗಿದ್ದಾರೆ. ಈಗ ಒಬ್ಬಳೇ ಉಳಿದಿದ್ದಳು. ಅವಳು ಕೂಡ ಊರುಬಿಟ್ಟು ಹೋಗುತ್ತಿರುವುದನ್ನು ತಿಳಿದು ದುಃಖವಾಯಿತು.

ಬುಧವಾರ ೨೫ ಫೆಬ್ರವರಿ ೨೦೦೯ :– ಇತ್ತೀಚೆಗೆ ಹೆಲಿಕಾಪ್ಟರ್ ಕೂಡ ಹೆಚ್ಚಿಗೆ ಬರುವುದಿಲ್ಲ ಮತ್ತು ನಾನು ಕೂಡ ಸೈನ್ಯ ಮತ್ತು ತಾಲಿಬಾನರ ಬಗ್ಗೆ ಹೆಚ್ಚು ಮಾತನಾಡುವುದನ್ನು ಬಿಟ್ಟಿದ್ದೇನೆ. ಸಂಜೆ ತಾಯಿ, ನನ್ನ ಚಿಕ್ಕಪ್ಪನ ಮಗಳು ನಾನು ಬುರ್ಖಾ ತೊಟ್ಟು ಕೊಂಡು ಹೊರಗೆ ಹೋದೆವು, ಒಂದು ಕಾಲಕ್ಕೆ ನನಗೆ ಬುರ್ಖಾ ತೊಡುವ ಇಚ್ಛೆಯಿತ್ತು. ಆದರೆ ಈಗ ಅದರ ಬಗ್ಗೆ ಬೇಸರ ಉಂಟಾಗಿದೆ ಏಕೆಂದರೆ ಅದನ್ನು ಹಾಕಿಕೊಂಡು ನನ್ನಿಂದ ನಡೆಯಲಾಗುವುದಿಲ್ಲ. ಸ್ವಾತ್‌ನಲ್ಲಿ ಇತ್ತೀಚೆಗೆ ಒಂದು ಮಾತು ಪ್ರಸಿದ್ಧವಾಗಿದೆ. ಅದೇನೆಂದರೇ ಒಂದು ದಿನ ಓರ್ವ ಹೆಂಗಸು ಶೆಟಲ್‌ಕಾಕ್ ಬುರ್ಖಾ ತೊಟ್ಟುಕೊಂಡು ನಡೆಯುತ್ತಿದ್ದಾಗ ರಸ್ತೆಯಲ್ಲಿ ಬಿದ್ದು ಬಿಟ್ಟಳು. ಒಬ್ಬ ವ್ಯಕ್ತಿ ಮುಂದೆ ಹೋಗಿ ಎತ್ತಲು ಬಯಸಿದಾಗ ಅವಳು ನಿರಾಕರಿಸುತ್ತ ಹೀಗೆ ಅಂದಳು. "ಇರಲಿ ಬಿಡು ಎತ್ತ ಬೇಡ ಏಕೆಂದರೆ ಮೌಲಾನ ಫಜುಲ್ಲುಲ್ಲಾನ ಹೊಟ್ಟೆ ತಣ್ಣಗಿರಲಿ."

(ಬಿ.ಬಿ.ಸಿ ಉರ್ದುವಿನಲ್ಲಿ ಪ್ರಕಟಿಸಿದ ದಿನಚರಿ ಹಿಂದಿಯಲ್ಲಿ ತರ್ಜುಮೆಗೊಂಡಿದೆ. ಸಾಭಾರ– ಅಂತಿಮ ಜನ; ಅನು – ಸು.ಕೌ)

ಜನಪದ ನಿಲಯದ ಅಂತರಂಗದಲ್ಲಿ.. ೧೧೪

– ಸುರೇಂದ್ರ ಕೌಲಗಿ



ನನ್ನ ತಂದೆ ಪೋಸ್ಟ್ ಮಾಸ್ತರ್ ಆಗಿದ್ದರು, ಜೊತೆಗೆ ಅವರು ಟೆಲಿಗ್ರಾಫಿಸ್ಟ್ ಕೂಡ ಆಗಿದ್ದರು. ಆದ್ದರಿಂದ ಯಾವ ಊರಿನ ಅಂಚೆ ಕಛೇರಿಯಲ್ಲಿ ಟೆಲಿಗ್ರಾಫ್ ವ್ಯವಸ್ಥೆಯಿತ್ತೋ ಅಂಥ ಸಂಯುಕ್ತ ವ್ಯವಸ್ಥೆಯ ಅಂಚೆ ಕಛೇರಿ ಇರುವ ಊರಿಗೆ ವರ್ಗವಾಗುತಿತ್ತು. ಒಂದು ಊರಿಲ್ಲಿ ಮೂರು ವರ್ಷ ಮಾತ್ರ ಇರುವ ಅವಕಾಶವಿರುತಿತ್ತು. ಪರ ಊರಿಗೆ ವರ್ಗವಾಗುವುದು ಖಚಿತವಾಗಿರುತಿತ್ತು. ಅವಧಿ ಮುಗಿಯುತ್ತಲೆ ವರ್ಗವಾಗುವ ಊರಿಗೆ ಹೊರಡುವ ಸಿದ್ಧತೆಯನ್ನು ಮಾಡಲಾಗುತಿತ್ತು. ಮನೆಯಲ್ಲಿಯ ಎಲ್ಲ ಸಾಮಾನುಗಳನ್ನು ವ್ಯವಸ್ಥಿತವಾಗಿ ಕಟ್ಟಿ ಅವುಗಳನ್ನು ಸಾಗಿಸಲು ಅಣಿಮಾಡಲಾಗುತಿತ್ತು. ಈ ಕೆಲಸದಲ್ಲಿ ಅಂಚೆಯಾಳುಗಳು ಸಹ ಸಹಾಯ ನೀಡುತ್ತಿದ್ದರು. ಇದೆಲ್ಲ ಸಿದ್ಧವಾದ ಮೇಲೆ ಅಕ್ಕ ಪಕ್ಕದ ಮನೆಯವರು ನಮ್ಮನ್ನು ಬೀಳ್ಕೊಡುವ ನೆಪದಿಂದ ಆದಾರಪೂರ್ವಕವಾಗಿ ಚಹಾ ತಿಂಡಿಗಾಗಿ ತಮ್ಮ ಮನೆಗೆ ಕರೆಯುತ್ತಿದ್ದರು. ಹೀಗೆ ಹತ್ತಾರು ಮನೆಗೆ ಹೋಗಿ ಬಂದ ನಂತರ ಮಾರನೆ ದಿನ ಗೊತ್ತಾದ ಸಮಯಕ್ಕೆ ಲಾರಿ ಹತ್ತಿ ಮುಂದಿನ ಊರಿಗೆ ಪ್ರಯಾಣ ಮಾಡುತ್ತಿದ್ದೆವು. ಈ ಕ್ರಮ ಪ್ರತಿ ಮೂರು ವರ್ಷಕ್ಕೊಮ್ಮೆ ನಡೆಯುತ್ತಾ ಬಂದು ತಂದೆ ನಿವೃತ್ತರಾಗುವವರೆಗೂ ನಡೆಯಿತು. ವರ್ಗಾವಣೆಯಿಂದಾಗಿ ನಾವು ಮನೆಯವರು ಬೆಳಗಾವಿ, ಸಾಂಗಲಿ, ಕುಡಚಿ, ಹುಕ್ಕೇರಿ, ಬೈಲಹೊಂಗಲ, ಕಿರ್ಲೋಸ್ಕರ್‌ವಾಡಿ, ವಿಜಾಪೂರ ಮತ್ತು ಬಾಗಲಕೋಟೆಯಂಥ ಊರುಗಳನ್ನು ನೋಡುವಂತಾಯಿತು. ಹೋದೆಡೆಯೆಲ್ಲೆಲ್ಲಾ ಅಂಚೆ ಕಛೇರಿಯ ಮನೆಯಲ್ಲೇ ವಾಸವಾಗಿರುತ್ತಿದ್ದೆವು. ಆಗ ಭಾನುವಾರಗಳಂದೂ ಅಂಚೆ ಬರುತಿತ್ತು ಮತ್ತು ಬಟವಾಡೆಯಾಗುತಿತ್ತು. ಎಕ್ಸ್‌ಪ್ರೆಸ್ ಡಿಲಿವರಿ ಎಂಬ ಕೆಂಪು ಬಣ್ಣದ ಚೀಟಿಯನ್ನು ಆ ಕಾರ್ಡಿನ ಮೇಲೆ ಅಂಟಿಸಿ ಪೋಸ್ಟ್ ಮಾಡಿದರೆ ಆ ಕಾರ್ಡ್ ತಲುಪಿದ ಊರಿನಲ್ಲಿ ಅದನ್ನು ಟೆಲಿಗ್ರಾಮ್ ರೀತಿಯಲ್ಲಿ ಆದ್ಯತೆ ಮೇರೆಗೆ ಡಿಲವರಿ ಮಾಡಲಾಗುತಿತ್ತು. ಸ್ವಾತಂತ್ರ್ಯ ಬಂದ ನಂತರ ಈ ಎಲ್ಲ ಪದ್ಧತಿ ನಿಂತು ಹೋಯಿತು. ತಂದೆಯವರಿಗೆ ಬೆಳಗಾವಿಯಿಂದ ಕುಡಚಿಗೆ ವರ್ಗವಾಯಿತು. ತಂದೆಯವರೊಬ್ಬರೆ ಕುಡಚಿಗೆ ಹೋದರು, ನಾವು ಉಳಿದವರೆಲ್ಲರೂ ಬೆಳಗಾವಿಯಲ್ಲಿ ಇದ್ದೆವು. ಆಗ ಬೆಂಗಳೂರಿನಿಂದ ಪುಣೆಯವರೆಗೆ ಮದ್ರಾಸ್ ಸರ್ದನ್ ಮರಾಠ ರೈಲ್ವೆ (M.S.M) ಎಂಬ ಮೀಟರ ಗೇಜ್ ರೈಲು ಸಂಚಾರ ಮಾಡುತಿತ್ತು. ರೈಲು ಬೆಳಗಾವಿ ಕುಡಚಿ ಮಾರ್ಗವಾಗಿ ಮುಂದಕ್ಕೆ ಹೋಗುತಿತ್ತು. ಆ ರೈಲಿನಲ್ಲಿಯೇ ಅಂಚೆಯು ಕೂಡ ಹೋಗುತಿತ್ತು. ಸುಮಾರು ಎರಡು ಮೈಲಿ ಸೈಕಲ್ ಮೇಲೆ ಹೋಗಿ ತಂದೆಯವರಿಗೋಸ್ಕರ ಊಟದ ಡಬ್ಬಿಯನ್ನು ಕೊಟ್ಟು ಬರುತ್ತಿದ್ದೆ. ರಜೆಯಲ್ಲಿ ತಾಯಿಯವರೊಂದಿಗೆ ಕುಡಚಿಗೆ ಹೋಗುತ್ತಿದ್ದೆವು. ಕುಡಚಿಯಲ್ಲಿ ಮುಸ್ಲಿಂ ಬಾಂಧವರು ದೊಡ್ಡ ಸಂಖ್ಯೆಯಲ್ಲಿ ಇದ್ದಾರೆ. ಆ ಊರು ಕೃಷ್ಣಾನದಿ ದಂಡೆಯ ಮೇಲಿದೆ. ಅದರ ಮೇಲೊಂದು ಉದ್ದನೆಯ ರೈಲ್ವೆ ಸೇತುವೆಯಿದೆ ಕುಡಚಿಯಿಂದ ಕೇವಲ ಎರಡು ಮೈಲಿ ದೂರದಲ್ಲಿ ಕೃಷ್ಣನದಿ ಹರಿಯುತ್ತಿದ್ದರೂ ಕೂಡ ಊರಿಲ್ಲಿ ನೀರಿನ ಮುಖ್ಯವಾಗಿ ಕುಡಿಯುವ ನೀರಿನ ಅಭಾವ ತುಂಬಾಯಿತ್ತು. ಬೇಸಿಗೆಯಲ್ಲಂತು ಕುಡಿಯುವ

ನೀರಿನ ಡಬ್ಬ ಒಂದಕ್ಕೆ ನಾಲ್ಕಣೆ ಕೊಡಬೇಕಾಗುತಿತ್ತು. ಎರಡು ಟಿನ್ ಡಬ್ಬಗಳಲ್ಲಿ ನೀರು ತುಂಬಿಕೊಂಡು ಹೆಗಲ ಮೇಲೆ ಇಟ್ಟುಕೊಂಡು ನೀರನ್ನು ಮಾರಾಟ ಮಾಡುತ್ತಿದ್ದರು. ನಾವು ದಿನಾಲೂ ನೀರನ್ನು ಕೊಂಡು ಕೊಳ್ಳುತ್ತಿದ್ದೆವು. ಸ್ನಾನ, ಬಟ್ಟೆ ಒಗೆಯುವುದಕ್ಕೆ ಎರಡು ಮೈಲಿ ದೂರ ನದಿಗೆ ನಡೆದುಕೊಂಡೇ ಹೋಗುತ್ತಿದ್ದೆವು. ಬೇಸಿಗೆ ಕಾಲವಾದ್ದರಿಂದ ನದಿಯಲ್ಲಿ ನೀರು ಕಡಿಮೆಯಿರುತ್ತಿತ್ತು. ನದಿಯಲ್ಲಿ ಚಿಕ್ಕ ಚಿಕ್ಕ ಕಲ್ಲುಬಂಡೆಗಳು ಹೆಚ್ಚು. ಆ ಕಲ್ಲು ಬಂಡೆಗಳ ಮೇಲೆ ಕುಳಿತು ಬಟ್ಟೆ ಒಗೆಯುತ್ತಿದ್ದೆವು, ಸ್ನಾನ ಮಾಡುತ್ತಿದ್ದೆವು. ಆ ಸಮಯದಲ್ಲಿ ಯಾವುದಾದರೊಂದು ರೈಲು ಸೇತುವೆ ಮೇಲೆ ಹೋಗುತ್ತಿದ್ದರೆ ನಮಗೆ ಬಹಳ ಖುಷಿಯಾಗುತಿತ್ತು. ರೈಲಿನಲ್ಲಿ ಕುಳಿತು ಪ್ರಯಾಣ ಮಾಡುತ್ತಿದ್ದವರಿಗೆ ಸಂತೋಷದಿಂದ ಕೈಬೀಸುತ್ತಿದ್ದೆವು. ಬೆಳಗಾವಿಯಲ್ಲಿ ಇದ್ದಾಗಲೆ ದೇಶಕ್ಕೆ ಸ್ವಾತಂತ್ರ್ಯ ಬಂತು. ಸ್ವಾತಂತ್ರ್ಯ ಬಂದ ದಿನ ರಾತ್ರಿ ಬೆಳಗಾವಿ ನಗರದಲ್ಲಿ ಲಾರಿಯಲ್ಲಿ ಕುಳಿತುಕೊಂಡು ಜಯ ಘೋಷ ಮಾಡಿದ್ದು ಯಾವಾಗಲೂ ನೆನಪುಳಿಯುವಂಥ ಸಂಗತಿ. ರಾತ್ರಿ ೧೨ ಗಂಟೆಗೆ ಕೋಟೆ ಬಳಿ ಹೋಗಿ ಅಲ್ಲಿದ್ದ ಯೂನಿಯನ್ ಜಾಕ್ ಬಾವುಟ ಇಳಿಸಿ ತ್ರಿವರ್ಣ ಧ್ವಜವನ್ನು ಹಾರಿಸಿದ್ದು ಪುಳಕಿತನನ್ನಾಗಿ ಮಾಡಿತ್ತು. ನಂತರ ಬೈಲಹೊಂಗಲಕ್ಕೆ ವರ್ಗವಾಯಿತು. ಅಲ್ಲಿ ಟೆಲಿಗ್ರಾಫಿಕ್ ಸೌಲಭ್ಯವಿತ್ತಾದ್ದರಿಂದ ತಂದೆಯವರಿಗೆ ಅಲ್ಲಿಗೆ ವರ್ಗವಾಗಿತ್ತು. ಈ ಸೌಲಭ್ಯ ಇಡೀ ಭಾರತ ದೇಶವನ್ನು ಒಂದುಗೊಡಿಸಿತ್ತು. ಈಸ್ಟ್ ಇಂಡಿಯಾ ಕಂಪನಿ ತನ್ನ ಉಪಯೋಗಕ್ಕಾಗಿ ಅಳವಡಿಸಿಕೊಂಡಿದ್ದ ಈ ತಂತಿ ಸೌಲಭ್ಯವನ್ನು ಕ್ರಮೇಣ ಸಾರ್ವಜನಿಕರ ಉಪಯೋಗಕ್ಕೂ ಬಿಟ್ಟುಕೊಟ್ಟಿತು. ತತ್ಪರಿಣಾಮವಾಗಿ ದೇಶದ ಮುಖ್ಯ ಮುಖ್ಯ ಸ್ಥಳಗಳಲ್ಲಿ ತಂತಿ ಕಛೇರಿಗಳು ಪ್ರಾರಂಭವಾದವು. ಎಲ್ಲೆಲ್ಲಿ ಅಂಚೆಕಛೇರಿಗಳಿದ್ದವೊ ಅಲ್ಲಿ ತಂತಿ ಸೌಲಭ್ಯವನ್ನು ಒದಗಿಸಲಾಗಿತ್ತು. ಬೈಲಹೊಂಗಲ ಬೆಳಗಾವಿ ಜಿಲ್ಲೆಯಲ್ಲಿಯ ತಾಲ್ಲೂಕು ಸ್ಥಳ. ಹತ್ತಿ ಮತ್ತು ಕಡಲೇಕಾಯಿ ಬೆಳೆಯುವ ವಾಣಿಜ್ಯ ಪ್ರದೇಶವೂ ಆಗಿತ್ತು. ಆದ್ದರಿಂದ ಟೆಲಿಗ್ರಾಮ್ ಕಳುಹಿಸುವವರ ಸಂಖ್ಯೆ ಹೆಚ್ಚಾಗಿತ್ತು. ಸಂಜೆ ೫ ಗಂಟೆಗೆ ಅಂಚೆಕಛೇರಿ ಮುಚ್ಚಿದ ಮೇಲೆ ಯಾವುದೇ ಒಂದು ಟೆಲಿಗ್ರಾಮ್ ಬಂದರೆ ಮತ್ತು ಕಳುಹಿಸಿದರೆ ಸರ್ಕಾರ ಹೆಚ್ಚುವರಿಯಾಗಿ ಟೆಲಿಗ್ರಾಮ್‌ವೊಂದಕ್ಕೆ ಒಂದು ರೂಪಾಯಿಯನ್ನು ಎರಡು ರೂಪಾಯಿಯನ್ನು ಹೆಚ್ಚಾಗಿ ಕೊಡುತಿತ್ತು. ಅದನ್ನು ಲೇಟ್ ಫೀ ಎಂದು ಕರೆಯಲಾಗುತಿತ್ತು. ರಾತ್ರಿ ವೇಳೆ ಆಕಾಲಿಕ ಸಮಯದಲ್ಲಿ ದೂರದ ಊರಿನ ಸ್ಥಳಗಳಿಗೆ ಟೆಲಿಗ್ರಾಮ್ ಬಂದರೆ ಅದರ ಬಟವಾಡೆಗಾಗಿ ಹೆಚ್ಚಿನ ಹಣವನ್ನು ವಸೂಲಿ ಮಾಡಲಾಗುತಿತ್ತು. ರಾತ್ರಿ ವೇಳೆ ಬರುವ ಟೆಲಿಗ್ರಾಮ್‌ಗಳನ್ನು ಸ್ವೀಕರಿಸಲು ತಂದೆಯವರು ಕಛೇರಿಯಲ್ಲಿ ಮಲಗುತ್ತಿದ್ದರು ತಂದೆಯವರು ಗಾಢ ನಿದ್ರೆಯ ಪ್ರಕೃತಿಯುಳ್ಳವರು. ಜೋರಾಗಿ ಗೊರಕೆ ಹೊಡೆಯುವ ಅಭ್ಯಾಸವಿತ್ತು. ಇಂಥ ನಿದ್ರಾವಸ್ಥೆಯಲ್ಲಿಯೂ ಟೆಲಿಗ್ರಾಮಿನ ಕಡ-ಕಟ್ಟ, ಕಟ್ಟ-ಕಡ-ಕಡ ಎಂದು ಸದ್ದಾದಕೂಡಲೆ ಎಚ್ಚರಗೊಂಡು ಟೆಲಿಗ್ರಾಮ್‌ನ್ನುಸ್ವೀಕರಿಸುತ್ತಿದ್ದರು. ಟೆಲಿಗ್ರಾಮ್ ವ್ಯವಸ್ಥೆ ಬಹಳ ವೈಜ್ಞಾನಿಕವಾಗಿ ರಚಿತವಾದ್ದಂತಾದ್ದಾಗಿತ್ತು. ಸಂತೋಷದ ಮತ್ತು ದುಃಖದ ಸುದ್ದಿಯನ್ನು ಕರಾರುವಕ್ಕಾಗಿ ಸಂಬಂಧಿಸಿದವರಿಗೆ ತಲುಪಿಸುತಿತ್ತು. ನಾನು ಕೂಡ ಕುತೂಹಲದಿಂದ ಟೆಲಿಗ್ರಾಫ್ ವ್ಯವಸೆಯ ಮೋರ್ಸ್ ಯಂತ್ರವನ್ನು ನಡೆಸುವುದನ್ನು ಕಲಿತಿದ್ದೆ, ಅದರೊಂದಿಗೆ ತುಂಬ ಭಾವನಾತ್ಮಕ ಸಂಬಂಧ ದೊರೆಯಿತು. ಇತ್ತೀಚಿಗೆ ೧೪-೦೭-೨೦೧೩ ಭಾನುವಾರದಂದು ೧೬೩ ವರ್ಷಗಳ ಸುದೀರ್ಘ ಜನತಾ ಸೇವೆಯಿಂದ ಟೆಲಿಗ್ರಾಫ್ ಸೇವೆ ಅಂತಿಮವಾಗಿ ನಿಲುಗಡೆಗೆ ಬಂದದ್ದು ಅನೇಕ ಜನರಿಗೆ ದುಃಖವಾದಂತೆ ನನಗೂ ಕೂಡ ಆಯಿತು. ಟೆಲಿಗ್ರಾಫ್ ಸೌಕರ್ಯ ದೇಶದ ಸ್ವಾತಂತ್ರ್ಯದ ಚಳುವಳಿಯಲ್ಲಿ ಬಹು ಉಪಯುಕ್ತಕರವಾಗಿ ಕೆಲಸಮಾಡಿತು. ಮಹಾತ್ಮ ಗಾಂಧೀಯವರು ಈ ಸೌಲಭ್ಯವನ್ನು ಗರಿಷ್ಠ ಮಟ್ಟದಲ್ಲಿ ಉಪಯೋಗಿಸಿಕೊಂಡರೆಂದು ಹೇಳಿದರೆ ತಪ್ಪಾಗಲಾರದು.

ಖಾದಿ ವಿಚಾರ

ಯಂತ್ರ ಹೇಗಿರಬೇಕು?

ಯಂತ್ರಗಳ ಪರ ಇದ್ದ ಒಬ್ಬ ಮಿತ್ರ ಗಾಂಧಿಯವರನ್ನು, "ನಿಮ್ಮ ಗ್ರಾಮೀಣ ಉದ್ಯೋಗ ಚಳವಳಿ ಎಲ್ಲ ಯಂತ್ರಗಳನ್ನು ತೆಗೆದೂಗೆಯುವ ಉದ್ದೇಶ ಹೊಂದಿದೆ ಅಲ್ಲವೆ?" ಎಂದು ಕೇಳಿದ. "ಈ ಚರಖವೂ ಒಂದು ಯಂತ್ರವಲ್ಲವೇ?", ನೂಲುತ್ತಿದ್ದ ಗಾಂಧಿ ಮರು ಪ್ರಶ್ನೆ ಎಸೆದರು. "ಈ ಯಂತ್ರದ ಬಗ್ಗೆ ಕೇಳಲಿಲ್ಲ. ನಾನು ಕೇಳಿದ್ದು ದೊಡ್ಡ ಯಂತ್ರಗಳ ಬಗ್ಗೆ." "ಸಿಂಗರ್ ಹೊಲಿಗೆ ಯಂತ್ರದ ಬಗ್ಗೆ ಕೇಳುತ್ತಿದ್ದೀಯಾ? ಅದೂ ಸಹ ನಮ್ಮ ಚಳುವಳಿಗೆ ಬೇಕು. ಯಾವುದೇ ಯಂತ್ರ ಜನರ ದುಡಿಮೆಯ ಅವಕಾಶವನ್ನು ಕಸಿದುಕೊಳ್ಳದೆ, ಅವರ ಕಾರ್ಯಕ್ಷಮತೆಯನ್ನು ಹೆಚ್ಚಿಸುವುದಾದರೆ ಮತ್ತು ಮನುಷ್ಯ ಅದರ ಗುಲಾಮನಾಗದೆ ಅದನ್ನು ತನಗೆ ಬೇಕಾದಾಗ ಬಳಸಿಕೊಳ್ಳುವಂತಹುದಾದರೆ, ಅದು ನಮಗೆಬೇಕಿರುವ ಯಂತ್ರ." – ಗಾಂಧಿ

"ಆದರೆ ದೊಡ್ಡ ಅವಿಷ್ಕಾರಗಳನ್ನು ನೀವು ವಿರೋಧಿಸುತ್ತಿಲ್ಲವೆ? ನೀವು ವಿದ್ಯುತ್‌ನ ವಿರೋಧಿ ಅಲ್ಲವೆ?" ಆತ ಕೇಳಿದ.

"ಹಾಗಂತ ಯಾರು ಹೇಳಿದರು? ಪ್ರತಿಯೊಂದು ಹಳ್ಳಿಯಲ್ಲೂ, ಅಲ್ಲಿಯ ಪ್ರತಿ ಮನೆಯಲ್ಲೂ ವಿದ್ಯುತ್ ಇರುವುದಾದರೆ ನನ್ನದೇನೂ ಅಭ್ಯಂತರವಿಲ್ಲ. ಆದರೆ ವಿದ್ಯುತ್ ಸ್ಥಾವರ(ಮೂಲ)ಗಳು ಗ್ರಾಮೀಣ ಸಮುದಾಯದ ಅಥವಾ ಸರಕಾರದ ಸ್ವಾಮ್ಯದಲ್ಲಿರಬೇಕು – ಈಗ ನಮ್ಮ ಗೋಮಾಳಗಳಿರುವಂತೆ. ಆದರೆ, ವಿದ್ಯುತ್ ಇಲ್ಲದಿರುವೆಡೆ, ಯಂತ್ರಗಳು ಇಲ್ಲದಿರುವೆಡೆ, ಕೆಲಸವಿಲ್ಲದ ಕೈಗಳು ಏನು ಮಾಡಬೇಕು? ನೀವು ಅವರಿಗೆ ಕೆಲಸ ನೀಡುತ್ತೀರಾ? ಅಥವಾ ಮಾಲೀಕರು ಅವರನ್ನು ಕೆಲಸ ಇಲ್ಲ ಎಂದು ಹೇಳಿ ಮನೆಗೆ ಕಳುಹಿಸುತ್ತಾರಾ?"

ಮುಂದುವರೆದು ಗಾಂಧಿ ಹೇಳಿದರು, "ಎಲ್ಲಾ ಜನರ ಸೌಕರ್ಯಕ್ಕೆಂದು ಆವಿಷ್ಕಾರಗೊಳ್ಳುವ ಯಂತ್ರಗಳು ಮತ್ತು ವಿಜ್ಞಾನ ನನಗೆ ಪ್ರಿಯವೇ. ಸಾರ್ವಜನಿಕ ಕ್ಷೇತ್ರದಲ್ಲಿ ಮನುಷ್ಯರು ಮಾಡಲಾಗದಂತಹ ಕೆಲಸಗಳನ್ನು ಮಾಡುವ ಭಾರೀ ಯಂತ್ರಗಳಿಗೆ ಅವುಗಳ ಸ್ಥಾನ ಇದ್ದೇ ಇದೆ. ಆದರೆ, ಅಂಥವು ಸರಕಾರೀ ಸ್ವಾಮ್ಯದಲ್ಲಿದ್ದು ಅವುಗಳನ್ನು ಸಂಪೂರ್ಣವಾಗಿ ಜನರ ಹಿತಕ್ಕಾಗಿ ಬಳಸಬೇಕು. ಅನೇಕರನ್ನು ಶೋಷಿಸಿ, ಕೆಲವೇ ಜನರ ಖಜಾನೆ ತುಂಬಲು ಬಳಸುವಂತಹ ಯಂತ್ರಗಳು ನಮಗೆ ಬೇಕಿಲ್ಲ. ಅನೇಕರ ಉಪಯೋಗಿ ದುಡಿಮೆಯನ್ನು ತೆಗೆದು ಹಾಕುವ ಯಂತ್ರಗಳು ಬೇಕಿಲ್ಲ.

"ಆದರೆ ಆಲಸ್ಯವನ್ನು ತೊಡೆದು ಹಾಕಲು ಈ (ಚರಖಾ) ಯಂತ್ರ ಬಿಟ್ಟರೆ ಮತ್ತೊಂದಿಲ್ಲ ನೋಡಿ. ನಿಮ್ಮೊಡನೆ ಮಾತನಾಡುತ್ತಲೇ ನಾನು ಇದನ್ನು ತಿರುಗಿಸುತ್ತಾ ದೇಶದ ಸಂಪತ್ತಿಗೆ ತುಸು ಕಾಣಿಕೆ ಸಲ್ಲಿಸಬಹುದು. ಇದನ್ನು ಯಾರೂ ತೆಗೆದು ಒಗೆಯುವಂತಿಲ್ಲ." (ಹರಿಜನ್ ೨೨-೬-೩೫)

– ಕೃಪಾ

ಸರ್ವೋದಯ ಆಂದೋಲನದ ಮುನ್ನಡೆ

ಕಳೆದ ಜೂನ್ ೧೮ ಮಂಗಳವಾರದಂದು ಕರ್ನಾಟಕ ಸರ್ವೋದಯ ಮಂಡಲದ ಸಭೆ ಮೇಲುಕೋಟೆಯಲ್ಲಿ ಮಂಡಲಿಯ ಅಧ್ಯಕ್ಷರಾದ ಶ್ರೀ ಸುರೇಂದ್ರ ಕೌಲಗಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಭೆಯಲ್ಲಿ ಶ್ರೀ ಎಲ್.ನರಸಿಂಹಯ್ಯ, ಶ್ರೀ ಎಚ್.ಎಮ್.ಶಿವಣ್ಣ, ಶ್ರೀ ತಿಮ್ಮಾರೆಡ್ಡಿ, ಶ್ರೀ ನಾಮದೇವ ಶಣೈ, ಶ್ರೀ ಯಶ್‌ವಂತ್, ಶ್ರೀ ಅಶ್ವತ್‌ನಾರಾಯಣಗೌಡ, ಶ್ರೀ ಎಮ್.ವಿ.ನಂಜಪ್ಪ, ಶ್ರೀ ನರೇಂದ್ರಬಾಬುರವರು ಭಾಗವಹಿಸಿದ್ದರು. ಸಭೆಯಲ್ಲಿ ಈ ಕೆಳಗೆ ಕಾಣಿಸಿದ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

೧) ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ಮಸೂದೆಗೆ ಸರ್ವೋದಯ ಮಂಡಲಿಯು ವಿರೋಧವ್ಯಕ್ತಪಡಿಸಿತು. ಜನತಾ ಪ್ರತಿನಿಧಿಗಳನ್ನು ಕಾನೂನು ಮೂಲಕ ಅನರ್ಹಗೊಳಿಸುವ ಕ್ರಮ ಪ್ರಜಾತಂತ್ರದ ವ್ಯವಸ್ಥೆಗೆ ತೀರ ವಿರೋಧವಾದುದು. ಗ್ರಾಮ ಪಂಚಾಯತ್ ಸದಸ್ಯರಿಗೆ ಮತ್ತು ಗ್ರಾಮದ ಜನರಿಗೆ ಪಂಚಾಯತ್ ರಾಜ್ಯದ ಉದ್ದೇಶವೇನು, ಗುರಿಯೇನು, ಅದನ್ನು ಕೈಗೊಳ್ಳುವ ಬಗೆ ಹೇಗೆ ಎಂಬ ವಿಷಯವಾಗಿ ಸರ್ಕಾರ ಮತ್ತು ಜನನಾಯಕರು ಶಿಕ್ಷಣವನ್ನು ಕೊಡಬೇಕು. ಸಹಜ ಪ್ರಕ್ರಿಯೆಯಾಗಿಯೇ ಗ್ರಾಮಸಭೆಗಳು ನಿಯಮಿತವಾಗಿ ನಡೆಯುವಂತೆ ಮಾಡಬೇಕು ಮತ್ತು ಪಂಚಾಯತ್‌ರಾಜ್ ಕ್ರಮೇಣ ಗ್ರಾಮರಾಜ್ಯವಾಗುವಂತೆ ಮಾಡುವ ನಿಟ್ಟಿನತ್ತ ಹೋಗಲು ಸರ್ಕಾರವು ಪ್ರಯತ್ನಿಸಬೇಕೆ ಹೊರತು ತನ್ನ ಅಧೀನ ಇಲಾಖೆಯನ್ನಾಗಿ ಪರಿವರ್ತಿಸಕೂಡದೆಂದು ಕರ್ನಾಟಕ ರಾಜ್ಯ ಸರ್ವೋದಯ ಮಂಡಲಿಯು ಸರ್ವಾನುಮತದಿಂದ ತೀರ್ಮಾನಿಸುತ್ತದೆ.

* * *

೨) ಹಾಸನ, ಮಂಡ್ಯ, ಮೈಸೂರು, ತುಮಕೂರು, ಚಿತ್ರದುರ್ಗ, ನಂಜನಗೂಡು, ಮಂಗಳೂರು–ಉಡುಪಿ, ಬಳ್ಳಾರಿ ಈ ಸ್ಥಳಗಳಲ್ಲಿ ರಚನೆಯಾಗಿರುವ ಸರ್ವೋದಯ ಮಿತ್ರಮಂಡಲಿಯ ಮಿತ್ರರ ಮಿಲನವೊಂದನ್ನು ಆಗಸ್ಟ್ ೧೮ರಂದು ಮಂಡ್ಯ ನಗರದಲ್ಲಿರುವ ಡಾ॥ ಹರ್ಡೀಕರ್ ಭವನದಲ್ಲಿ ಬೆಳಗ್ಗೆ ೧೧ ಗಂಟೆಯಿಂದ ಏರ್ಪಡಿಸಬೇಕೆಂದು ತೀರ್ಮಾನಿಸಲಾಯಿತು.

* * *

೩) ಕರ್ನಾಟಕ, ರಾಜ್ಯ ಸರ್ವೋದಯ ಮಂಡಲಿ ಸ್ಥಾಪಿತವಾಗಿ ೫೦ ವರ್ಷಗಳಾದವು. ಮಂಡಲಿಯ ಸುವರ್ಣಮಹೋತ್ಸವವನ್ನು ಬೆಂಗಳೂರಿನಲ್ಲಿ ನಡೆಸಬೇಕೆಂದು ತೀರ್ಮಾನಿಸಲಾಯಿತು. ಮಹೋತ್ಸವದ ರೂಪರೇಷೆಗಳನ್ನು

ತಯಾರಿಸಲು ಡಾ॥ ಎಚ್.ಎಸ್. ಸುರೇಶ್, ದವನಂ, ಎ. ಅಮರನಾಥ, ಅಶ್ವತ್ಥನಾರಾಯಣಗೌಡ ಮತ್ತು ನಾಮದೇವ ಶೈಣೈ ಅವರನ್ನೊಳಗೊಂಡ ಒಂದು ಉಪಸಮಿತಿಯನ್ನು ರಚಿಸಲಾಯಿತು. ಆಚಾರ್ಯ ವಿನೋಬಾರವರು ಪಠಾಣ್‌ಕೋಟ್ (ಪಂಜಾಬ್ ರಾಜ್ಯದ ಕಾನ್‌ಪುರ್) ಬಳಿ ಸ್ಥಾಪಿಸಿರುವ ಪ್ರಸ್ಥಾನ ಆಶ್ರಮದ ೫೪ನೇ ಸಂಸ್ಥಾಪನಾ ದಿವಸದ ಸಮಾರೋಹವನ್ನು ಕಳೆದ ಮೇ ೨೦ರಂದು ಶ್ರದ್ಧಾಪೂರ್ವಕವಾಗಿ ಸರ್ವಧರ್ಮಪ್ರಾರ್ಥನೆಯೊಂದಿಗೆ ಆಚರಿಸಲಾಯಿತು. ಈ ಸಮಾರಂಭದಲ್ಲಿ ಅಖಿಲ ಭಾರತ ಸರ್ವೋದಯ ಮಂಡಲಿಯ ಮಹಾವೀರ್ ತ್ಯಾಗಿಯವರು ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು.

* * *

ರಾಜ್ಯಸ್ಥಾನದ ಜಯಸಲ್ಮೇರ್ ಜಿಲ್ಲೆಯಲ್ಲಿ ಅನೇಕ ಸಂಘ ಸಂಸ್ಥೆಗಳಲ್ಲಿ ಗಾಂಧೀ ವಿಚಾರದ ಪ್ರಚಾರ ಮಾಡಲಾಯಿತೆಂದು ಶಿಕ್ಷಾ ವಿಕಾಸ್ ಸಮಿತಿ ಜಯಸಲ್ಮೇರ್‌ನ ಅಧ್ಯಕ್ಷರಾದ ಕಿಶನ್‌ಗಿರಿಗೋಸ್ವಾಮಿ ತಿಳಿಸಿದ್ದಾರೆ.

* * *

ಉತ್ತರಾಖಂಡದ ಮೂರನೆಯ ಸಾರ್ವತ್ರಿಕ ಚುನಾವಣೆಯಲ್ಲಿ ಆಯ್ಕೆಯಾಗಿ ಅಧಿಕಾರಕ್ಕೆ ಬಂದ ಹೊಸ ಸರ್ಕಾರ ಹೊಸ ಅಬಕಾರಿ ನೀತಿಯನ್ನು ಘೋಷಣೆ ಮಾಡಿದೆ. ಅಬಕಾರಿ ಆದಾಯವನ್ನು ಹೆಚ್ಚಿಸುವುದಕ್ಕಾಗಿ ಬಿಯರ್‌ನ ಚಿಲ್ಲರೆ ವ್ಯಾಪಾರವನ್ನು ಪ್ರೋತ್ಸಾಹಿಸುವುದಕ್ಕಾಗಿ ಅನೇಕ ರಿಯಾಯ್ತಿಯಗಳನ್ನು ಜಾರಿಗೆ ತಂದಿದೆ. ನಶಾಮುಕ್ತ ಸಮಾಜ ನಿರ್ಮಾಣಕ್ಕಾಗಿ ಹಳ್ಳಿ-ಹಳ್ಳಿಯಲ್ಲಿ ಮಹಿಳೆಯರು ಮತ್ತು ಯುವಕರ ಸಂಘಟನೆಯನ್ನು ಮಾಡಲಾಯಿತು. ಈಗ ಸರ್ವೋದಯ ಕಾರ್ಯಕರ್ತರು ಅಲ್ಲಲ್ಲಿ ಸಭೆಮಾಡಿ ಮುಖ್ಯಮಂತ್ರಿಯವರಿಗೆ ವ್ಯಕ್ತಿಗತ ಹಂತದಲ್ಲಿ ನಾಗರೀಕರ ಮೂಲಕ ವಿಜ್ಞಾಪನೆ ಕಳುಹಿಸುವ ಅಂಚೆಕಾರ್ಡ್ ಚಳುವಳಿಯನ್ನು ಮಾಡಲಾಗುತ್ತಿದೆ. ಸರ್ಕಾರದ ಈ ಹೊಸ ಅಬಕಾರಿ ನೀತಿ ವಿರುದ್ಧ ಹಿರಿಯ ಸರ್ವೋದಯ ಸೇವಕರಾದ ಶ್ರೀ ಮಾನಸಿಂಹ ರಾವತ್ ಆಮರಣಾ ಉಪವಾಸದ ಘೋಷಣೆಯನ್ನು ಮಾಡಿದ್ದರು. ರಾವತ್‌ರವರು ತಮ್ಮ ಸಹಧರ್ಮಿಣಿ ಶಶಿಪ್ರಭಾರವರೊಂದಿಗೆ ಘಡವಾಲ್ ಸರ್ವೋದಯ ಮಂಡಲದ ನೇತೃತ್ವದಲ್ಲಿ ಅನೇಕ ವರ್ಷಗಳಿಂದ ನಶಾಮುಕ್ತ ಸಮಾಜ ನಿರ್ಮಾಣಕ್ಕಾಗಿ ತಮ್ಮ ಪೂರ್ಣ ಶಕ್ತಿಯೊಂದಿಗೆ ತೊಡಗಿದ್ದಾರೆ. ಮುಂಬರುವ ಉತ್ತರಾಖಂಡದ ಪಂಚಾಯತ್ ಮತ್ತು ಲೋಕಸಭೆಯ ಚುನಾವಣೆಯಲ್ಲಿ ಈ ವಿಷಯ ತನ್ನ ಪರಿಣಾಮವನ್ನು ತೋರಿಸದೆ ಇರುವುದಿಲ್ಲ ಎಂದು ಧೂಮಸಿಂಹ ನೇಗಿಯವರು ವರದಿಮಾಡಿದ್ದಾರೆ.

* * *

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ
ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀ ಬಿ. ಆಕಾಶ್ ; ಡಾ॥ ಶರಣ್ ಅಂಗಡಿ ;
ಶ್ರೀ ಸುರೇಶ ಕಲಘಟಕಿ ; ಕರ್ನಾಟಕ ಸರ್ವೋದಯ ಸಂಘ – ಬೆಂಗಳೂರು
ಶ್ರೀ ಕೆ.ನಾಗಾನಂದ ; ಶ್ರೀ ಬಿಂದುಮಾಧವ ವಡವಿ – ಮಂಡ್ಯ,
ಶ್ರೀ ವಿಶ್ವನಾಥ ಕಾಮತ್ – ಮಂಗಳೂರು
ಶ್ರೀ ಕೆ.ವಿ.ಶಂಕರಪ್ಪ – ಕೋಲಾರ
ಶ್ರೀ ಕೆ. ಸುಬ್ಬರಾವ್ – ಶಿವಮೊಗ್ಗ
ಶ್ರೀ ಎಚ್.ಎಲ್.ಎನ್.ಶಾಸ್ತ್ರಿ – ಮೈಸೂರು
ಶ್ರೀಮತಿ – ಮೇಲುಕೋಟೆ

ಇವರು ಪತ್ರಿಕೆಯ ಚಂದಾ ನವೀಕರಿಸಿದ್ದಕ್ಕಾಗಿ ಹಾಗೂ ಹೊಸದಾಗಿ ಪತ್ರಿಕೆಗೆ ಚಂದಾದಾರರಾದ

ಡಾ॥ ಟಿ.ರಾಮಕೃಷ್ಣ ; ಅಶ್ವಿನಿ ಅಣ್ಣೇಗೌಡ ;
ಶ್ರೀ ನಾಗಭೂಷಣ್ – ಬೆಂಗಳೂರು
ಶ್ರೀ ಎಂ.ಬಿ. ಬೋರೇಗೌಡ – ಮಲ್ಲನಾಯಕನಕಟ್ಟೆ
ಶ್ರೀ ಕೆ. ಪ್ರಹ್ಲಾದ್‌ರಾವ್, ಶ್ರೀ ಬಿ.ಟಿ ವಿಶ್ವನಾಥ್ – ಮಂಡ್ಯ

ಇವರಿಗೆ ಜನಪದ ವಿಚಾರದ ಕೃತಜ್ಞತೆಗಳು

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು, ಮುಖ್ಯವಾಗಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತ–ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ-ಅಂಚೆ



KA / SK / MND / 470 / 2012-2014
Regd. no. KAR / KAN / 2000 / 3820

ಶ್ರೀಮತಿ/ ಶ್ರೀ...

ಶ್ರೀ.ಬಿ.ರಾಮಕೃಷ್ಣ
೫೭೪೪, ನ್ಯೂ.ಬಿ.ಎಲ್.ರಸ್ತೆ
ಸೈಂಟಿಫಿಕ್ ನರ್ಸರಿ ಪಕ್ಕ ಬೆಂಗಳೂರು

560094

JANAPADA VICHARA
Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya - 571431. Phone : 08236 316344 / 299854
e-mail : janapada@yahoo.com - web : janapada.net
Printed at Sanketh, Mudrana, Melkote.